ಗೋಕಾಕ ತಾಲ್ಲೂಕಿನ

ಕವಿಯತ್ರಿಯರು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ
ಸಲ್ಲಿಸುತ್ತಿರುವ ಪ್ರಬಂಧ)

ಸಂಶೋಧಕರು
ತೋಟಗಿ ರಾಜಶ್ರೀ ನೀಲಕಂಠ

ಮಾರ್ಗದರ್ಶಕರು
…ಜಶೇಖರ ಇಚ್ಚಂಗಿ

ಕನ್ನಡ ವಿಭಾಗ
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ,
ಹಾರೂಗೇರಿ-೫೯೧೨೨೦
ತಾ:ರಾಯಬಾಗ ಜಿ:ಬೆಳಗಾವಿ

ಸಂಯೋಜನೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೮-೦೯

ಗೋಕಾಕ ತಾಲ್ಲೂಕಿನ ಕವಿಯತ್ರಿಯರು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ
ಸಲ್ಲಿಸುತ್ತಿರುವ ಪ್ರಬಂಧ)

ಸಂಶೋಧಕರು
ತೋಟಗಿ ರಾಜಶ್ರೀ ನೀಲಕಂಠ

ಮಾರ್ಗದರ್ಶಕರು
ಡಾ. ರಾಜಶೇಖರ ಇಚ್ಚಂಗಿ

ಕನ್ನಡ ವಿಭಾಗ
ಶ್ರೀ ಬಿ. ಆರ್. ದರೂರ
ಸಂಶೋಧನಾ ಕೇಂದ್ರ,
ಹಾರೂಗೇರಿ-೫೯೧೨೨೦
ತಾ:ರಾಯಬಾಗ ಜಿ:ಬೆಳಗಾವಿ

ಸಂಯೋಜನೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

೨೦೦೮-೦೯

ಮಾರ್ಗದರ್ಶಕರ ದೃಢೀಕರಣ ಪತ್ರ

'ಗೋಕಾಕ ತಾಲ್ಲೂಕಿನ ಕವಿಯತ್ರಿಯರು' ಎಂಬ ಪ್ರಬಂಧವನ್ನು ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ಮೂಲಕ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ **ತೋಟಗಿ ರಾಜಶ್ರೀ ನೀಲಕಂಠ** ಅವರು ನನ್ನ ಮಾರ್ಗದರ್ಶನದಲ್ಲಿ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಹಾರೂಗೇರಿ — **ಡಾ. ರಾಜಶೇಖರ ಇಚ್ಚಂಗಿ**

ದಿನಾಂಕ: 25-08-2008 — ಮಾರ್ಗದರ್ಶಕರು

ಸಂಶೋಧಕರ ಪ್ರಮಾಣ ಪತ್ರ

'ಗೋಕಾಕ ತಾಲ್ಲೂಕಿನ ಕವಯಿತ್ರಿಯರು' ಎಂಬ ಪ್ರಬಂಧವನ್ನು ಡಾ.ರಾಜಶೇಖರ ಇಚ್ಚಂಗಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ ಮೂಲಕ ಕನ್ನಡ ವಿಶ್ವವಿದ್ಯಾಲಯ, ಹಂಪಿ ಸಾಹಿತ್ಯ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೨೦-೦೬-೨೦೦೬

RTotagi
ತೋಟಗಿ ರಾಜಶ್ರೀ ನೀಲಕಂಠ
ಸಂಶೋಧಕರು
ಶ್ರೀ ಬಿ.ಆರ್. ದರೂರ
ಸಂಶೋಧನಾ ಕೇಂದ್ರ,
ಹಾರೂಗೇರಿ.

ಕೃತಜ್ಞತೆಗಳು

೨೦೦೮-೦೯ ನೇ ಸಾಲಿನ ಎಂ.ಫಿಲ್ ಅಧ್ಯಯನಕ್ಕಾಗಿ ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವ ವಿದ್ಯಾಲಯದ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಅವರಿಗೂ, ಕುಲಸಚಿವರಾದ ಪೂಜಾರ ಸರ್ ಅವರಿಗೂ ಈ ಹಿಂದಿನ ಅಧ್ಯಯನಾಂಗದ ನಿರ್ದೇಶಕರಾದ ಡಾ. ಪಾಂಡುರಂಗ ಬಾಬು, ಹಾಗೂ ಈಗಿನ ಅಧ್ಯಯನಾಂಗದ ನಿರ್ದೇಶಕರಾದ ವೀರೇಶ ಬಡಿಗೇರ ಅವರಿಗೂ, ಹಾಗೂ ನನಗೆ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನಾ ಅಧ್ಯಯನ ಕೇಂದ್ರದ ಸಂಯೋಜಕರಾದ ಡಾ.ವಿ.ಎಸ್. ಮಾಳಿ ಅವರಿಗೂ ಡಾ. ಆರ್.ಬಿ. ಚಿಲುಮಿ, ಡಾ.ಗುಂಡಣ್ಣ ಕಲಬುರ್ಗಿ, ಡಾ. ಅಶೋಕ ನರೋಡೆ, ಸಂಸ್ಥೆಯ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಕೋಕಟನೂರ ಸರ್ ಅವರಿಗೆ ತುಂಬ ಹೃದಯದ ಕೃತಜ್ಞತೆಗಳು.

ನನ್ನ ಅಧ್ಯಯನ ಉದ್ದಕ್ಕೂ ಪ್ರೀತಿಯಿಂದ ಕಾಳಜಿವಹಿಸಿ ತಿದ್ದಿ, ತೀಡಿ, ಅಧ್ಯಯನದಲ್ಲಿ ಕ್ರಿಯಾಶೀಲರಾಗಲು ಕಾರಣರಾದ ನನ್ನ ಅಧ್ಯಯನದ ಮಾರ್ಗದರ್ಶಕರಾದ ಡಾ. ರಾಜಶೇಖರ ಇಚ್ಚಂಗಿ ಇವರಿಗೆ, ನನ್ನ ಅಧ್ಯಯನಕ್ಕೆ ಹಗಲಿರುಳು ಶ್ರಮಿಸಿದ ನನ್ನ ತಂದೆಯವರಾದ ನೀಲಕಂಠ ತೋಟಗಿ ಹಾಗೂ ನನ್ನ ಅಧ್ಯಯನಕ್ಕೆ ಸದಾಸ್ಫೂರ್ತಿದಾಯಕರಾಗಿದ್ದ ನನ್ನ ತಾಯಿಯಾದ ದಿವಂಗತ ಶಶಿಕಲಾ ತೋಟಗಿ, ನನಗೆ ಸ್ಫೂರ್ತಿಯ ಸೆಲೆಯಾದ ಪೂಜಾ, ನನ್ನ ಅಕ್ಕ ಸರೋಜಾ, ಮಾವನವರಾದ ಶಂಕರ ಅವರಿಗೂ ನನ್ನ ಅಕ್ಕನ ಮಕ್ಕಳಾದ ಅಶ್ವಿನಿ, ಪೂಜಾ, ಸಾಯಿಕುಮಾರ, ಅವರಿಗೂ ಧನ್ಯವಾದಗಳು.

ನಾನು ಕಾರ್ಯನಿರ್ವಹಿಸುತ್ತಿರುವ ಶ್ರೀ ಹರಿಖೋಡೆ ಡಿ.ಇಡಿ. ಶಿಕ್ಷಣ ಸಂಸ್ಥೆಯ ಅಧ್ಯಕ್ಷರಿಗೂ, ಪ್ರಾಚಾರ್ಯರಿಗೂ ಸಿಬ್ಬಂದಿ ವರ್ಗಕ್ಕೂ ಕೃತಜ್ಞತೆಗಳು. ಜೆ.ಜಿ. ಅಂಗಡಿ ಗುರುಮಾತೆಯವರಿಗೂ, ಸುರೇಶ ಹನಗಂಡಿ, ಜಯಾನಂದ ಮಾದರ ಅವರಿಗೂ ಈಶ್ವರಚಂದ್ರ ಬೆಟಗೇರಿಗೂ, ನನ್ನ ಎಲ್ಲ ಆತ್ಮೀಯ ಸಹಪಾಠಿಗಳಿಗೂ ವಂದನೆಗಳು.

ಕಡಿಮೆ ಅವಧಿಯಲ್ಲಿ ಶೀಘ್ರವಾಗಿ ಮತ್ತು ಅಂದವಾಗಿ ಅಕ್ಷರ ಸಂಯೋಜನೆಯನ್ನು ಮಾಡಿಕೊಟ್ಟ ರಾಯಣ್ಣ ಪ್ರಿಂಟರ್ಸನ ರಾಯಪ್ಪ ಗುದಗನವರ, ಶ್ರೀಮತಿ ಸುನಂದಾ ಕಪರಟ್ಟಿ, ಈರಪ್ಪಾ ಶಿವಾಪೂರ ಇವರಿಗೂ ನನ್ನ ತುಂಬು ಹೃದಯದ ಧನ್ಯವಾದಗಳನ್ನು ಈ ಮೂಲಕ ಸಲ್ಲಿಸುತ್ತೇನೆ. ನನ್ನ ಅಧ್ಯಯನದಲ್ಲಿ ಪರೋಕ್ಷ ಮತ್ತು ಅಪರೋಕ್ಷವಾಗಿ ಸಹಾಯ ಸಹಕಾರ ನೀಡಿದ ಎಲ್ಲ ಮಹನೀಯರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

– ರಾಜಶ್ರೀ ನೀಲಕಂಠ ತೋಟಗಿ

ಪರಿವಿಡಿ

ಅಧ್ಯಾಯ ೧ :	ಅಧ್ಯಯನದ ಉದ್ಧೇಶ, ಸ್ವರೂಪ, ವ್ಯಾಪ್ತಿ ಮತ್ತು ವೈದಾನಿಕತೆ	೧ – ೬
ಅಧ್ಯಾಯ ೨ :	ಗೋಕಾಕ ತಾಲ್ಲೂಕಿನ ಕಾವ್ಯ ಪರಿಸರ	೭–೪೨
ಅಧ್ಯಾಯ ೩ :	ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯ	೪೩–೭೨
ಅಧ್ಯಾಯ ೪ :	ಮಹಿಳಾ ಕಾವ್ಯದ ವಸ್ತು ವೈವಿಧ್ಯತೆ	೭೩–೯೦
ಅಧ್ಯಾಯ ೫ :	ಸಮಾರೋಪ	೯೧–೯೬
ಅನುಬಂಧಗಳು :		೯೭–೧೦೨
	೧) ಗೋಕಾಕ ತಾಲ್ಲೂಕಿನ ನಕ್ಷೆ	
	೨) ಗೋಕಾಕ ತಾಲ್ಲೂಕಿನ ಕವಿ ಮತ್ತು ಕವಿಯತ್ರಿಯರ ಸೂಚಿ	
	೩) ಆಧಾರ ಗ್ರಂಥಗಳು	

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈದಾನಿಕತೆ

ಕವಿಯ ಅಥವಾ ಕವಿಯತ್ರಿಯ ಭಾವನೆಗಳ ಅನುಭವದ ಅಭಿವ್ಯಕ್ತಿಯೇ ಕಾವ್ಯ; ಅದು ಕವಿ ಹಾಗೂ ಕವಿಯತ್ರಿಯ ಸೃಷ್ಟಿಶೀಲ (Creative) ಅಭಿವ್ಯಕ್ತಿ; ಸಮಾಜ–ಪ್ರಕೃತಿಯ ಪುನರ್‌ಸೃಷ್ಟಿ. ಸೃಷ್ಟಿಶೀಲತೆ ಅಥವಾ ಸೃಜನದಲ್ಲಿ ಕೊನೆ ಎಂಬುದೇ ಇಲ್ಲ. ತೊಡಕು–ತೊಂದರೆ, ರೋಗ–ರುಜಿನ, ದುಃಖ–ದಾರಿದ್ರ್ಯ ಸಾವುಗಳಿಗೆ ಎದುರಾಗಿ ಬದುಕಬೇಕೆಂಬುದೇ ಕಾವ್ಯ. ಬದುಕಿನ ಸಮಸ್ಯೆಗಳನ್ನು ಆಹ್ವಾನವೆಂದು ಸ್ವೀಕರಿಸಿ, ಎದುರಿಸಿ ನಿಲ್ಲಬೇಕೆಂಬುದೇ ಕಾವ್ಯದ ಒಳತುಡಿತ. ಸೃಷ್ಟಿಶೀಲ ಕವಿ ಮತ್ತು ಕವಿಯತ್ರಿ ಮಾತ್ರ 'ಪಟ್ಟಪಾಡನ್ನು ಹುಟ್ಟು ಹಾಡಾಗಿ' ಹೊಮ್ಮಿಸಬಲ್ಲರು. ಈ ಅನುಭವಗಳ ಆತ್ಮಾಭಿವ್ಯಕ್ತಿಯೇ ಕವಿತೆ ಎನಿಸಿಕೊಳ್ಳುತ್ತದೆ. ಈ ನೆಲೆಯಲ್ಲಿ ಕಾವ್ಯ ರಚನಾತ್ಮಕವಲ್ಲ; ಸೃಷ್ಟ್ಯಾತ್ಮಕ, ಇದನ್ನೇ ಬೇಂದ್ರೆಯವರು ಕಟ್ಟಿದರೆ ಕವನವಲ್ಲ. ಹುಟ್ಟಿದರೆ ಕವನ ಎನ್ನುತ್ತಾರೆ. ಕಾವ್ಯಕ್ಕೆ ಜೀವನದ ನಲಿವುಗಿಂತ ನೋವು ಮುಖ್ಯ; ಸಂಯೋಗಕ್ಕಿಂತ ವಿಯೋಗ ಮುಖ್ಯ; ಶೃಂಗಾರಕ್ಕಿಂತ ವಿಪ್ರಲಂಬವೇ ಮುಖ್ಯ; ಸುಖಾಂತಕ್ಕಿಂತ ದುಃಖಾಂತವೇ ಮುಖ್ಯ. ಪರಿಣಾಮಕಾರಕ. ನಮ್ಮ ಅಪ್ರಜ್ಞಾವಲಯದಲ್ಲಿಯೇ ನೋವನ್ನು, ದುಃಖವನ್ನು ಅನುಭವಿಸುತ್ತೇವೆ. ಪೂಜಿಸುತ್ತೇವೆ; ಆ ಅನುಭವದ ಅನುಭೂತಿಯೇ ಕಾವ್ಯದ ಒಟ್ಟು ಗ್ರಹಿಕೆಯಾಗುತ್ತದೆ. ಇಂತಹ ಕಾವ್ಯದ ಅಧ್ಯಯನವನ್ನು ಪ್ರಸ್ತುತವಾಗಿ ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯದ ಹಿನ್ನಲೆಯಲ್ಲಿ ಅಭ್ಯಸಿಸಬೇಕಾಗಿದೆ.

ಭಾರತದಂತಹ ಪುರುಷ ಪ್ರಧಾನ ಸಂಸ್ಕೃತಿಯಿರುವ ದೇಶದಲ್ಲಿ ಮಹಿಳೆಯರು ಲೇಖನಿ ಹಿಡಿದು ಸಾಹಿತ್ಯ ರಚನೆ ಮಾಡಿರುವುದು ಬಹು ದೊಡ್ಡ ಸಾಧನೆಯಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ಕನ್ನಡ ಕವಿಯತ್ರಿಯರು ಗಣನೀಯ ಪ್ರಮಾಣದಲ್ಲಿ ಕಾಣುವುದಿಲ್ಲ. ಕಂತಿ, ಅಕ್ಕಮಹಾದೇವಿ, ಹನ್ನೆರಡನೇ ಶತಮಾನದಲ್ಲಿ ಅಕ್ಕನ ಜೊತೆಯಲ್ಲೆ ಭಾಷಿಕ ಅಭಿವ್ಯಕ್ತಿಯಲ್ಲಿ ತೊಡಗಿಕೊಂಡ

[illegible]

ಇತರ ವಚನಕಾರ್ತಿಯರು ಅನಂತರದ ಕೆಲವು ಶತಮಾನಗಳು ಕಳೆದ ಮೇಲಷ್ಟೇ ಬಂದ ಸಂಚಿ ಹೊನ್ನಮ್ಮ, ಶೃಂಗಾರಮ್ಮ, ಹೆಳವನಕಟ್ಟೆ ಗಿರಿಯಮ್ಮ ಮುಂತಾದ ಮಹಿಳೆಯರನ್ನು ಬಿಟ್ಟರೆ ಹೊಸಗನ್ನಡ ಸಂದರ್ಭದಲ್ಲಿ ಅನೇಕ ಜನ ಮಹಿಳಾ ಲೇಖಕಿಯರು ಸಾಹಿತ್ಯ ಕೃಷಿ ಗೈದಿರುವುದು ನೋಡಬಹುದಾಗಿದೆ.

ಸ್ತ್ರೀಯರು ಪುರುಷರಿಗಿಂತ ಭಿನ್ನವಾಗಿ ಬರೆಯುವುದು ಒಂದು ಗುಣವೇ ಹೊರತು ದೋಷ ಅಲ್ಲವೆಂಬ ವಿನೂತನ ತಿಳುವಳಿಕೆ ಹುಟ್ಟಿದ ಮೇಲೆ ಯಾವುದೇ ಹಿಂಜರಿಕೆ, ಕೀಳರಿಮೆ ಇಲ್ಲದೇ ಬರೆಯುವ ಸಂದರ್ಭ ಉಂಟಾಯಿತು ಎಂಬುದು ಗಮನಿಸಬೇಕಾದ ಸಂಗತಿ.

ತಿರುಮಲೆರಾಜಮ್ಮ, ಅನುಪಮಾ ನಿರಂಜನ, ತ್ರಿವೇಣಿ, ಎಂ.ಕೆ.ಇಂದಿರಾ, ಶಾಂತಾದೇವಿ ಮಾಳವಾಡ, ಶಾಂತಾದೇವಿ ಕಣವಿ, ಕಮಲಾ ಹಂಪನಾ, ಎಚ್.ಎಸ್.ಪಾರ್ವತಿ, ಶ್ಯಾಮಲಾದೇವಿ, ಕಲ್ಯಾಣಮ್ಮ, ಕೊಡಗಿನ ಗೌರಮ್ಮ, ಹೆಚ್ ವಿ. ಸಾವಿತ್ರಮ್ಮ, ವೀಣಾ ಶಾಂತೇಶ್ವರ, ವೈದೇಹಿ, ರಾಜಲಕ್ಷ್ಮೀ, ಎನ್. ರಾವ್.ಶ್ರೀಮತಿ ನೇಮಿಚಂದ್ರ, ಗೀತಾನಾಗಭೂಷಣ, ಮಲ್ಲಿಕಾಘಂಟಿ, ಸರಸ್ವತಿ ಚಿಮ್ಮಲಗಿ ಹೀಗೆ ಮಹಿಳಾ ಸಾಹಿತಿಗಳ ಪಟ್ಟಿ ವಿಸ್ತಾರವಾಗುತ್ತಾ ಹೋಗುತ್ತದೆ.

ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲೂ ಹೊಸಗಾಳಿ, ಹೊಸಬೆಳಕು, ಹೊಸ ಸಾಧ್ಯತೆಗಳನ್ನು ಹುಟ್ಟುಹಾಕುತ್ತಾ ಹೊಸ ಧ್ವನಿಯನ್ನು ತಂದು ಕೊಡುತ್ತಿರುವ ಈಗಿನ ಸ್ತ್ರೀ ಸಂಸ್ಕೃತಿಯು, ಸಾಹಿತ್ಯವಾಹಿನಿಯು ವಿಭಿನ್ನ ದಿಕ್ಕಿಗೆ ಹೊರಳುವಂತೆ ಮಾಡುತ್ತಿದೆ.ಇಂತಹ ವೈವಿಧ್ಯಮಯವಾದ ಪರಿಸರದಲ್ಲಿ ತನ್ನ ಸೊಬಗನ್ನು ಸೂಸುತ್ತಿರುವ ನಾಡಿನಲ್ಲಿ ಬೆಳಗಾವಿ ಜಿಲ್ಲೆಯ ಗೋಕಾಕ ತಾಲ್ಲೂಕು ಒಂದಾಗಿದೆ. ಈ ಗೋಕಾವಿ ನಾಡು 'ಕರದಂಟಿನ' ಸಿಹಿ ನಾಡು. ಇಲ್ಲಿ ಅನೇಕ ಕವಿ, ಕವಿಯತ್ರಿಯರು ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಈ ಪ್ರದೇಶದ ವರ್ಣನೆ ನನಗೆ ಮುಖ್ಯವಲ್ಲ. ಆ ಪ್ರಾದೇಶಿಕತೆಯ ಹಿನ್ನಲೆಯಲ್ಲಿ ರಚಿತವಾದ ಕಾವ್ಯ ಪರಿಸರ ನನಗೆ ಮುಖ್ಯವಾಗಿದೆ. ಇಲ್ಲಿಯ ಪರಿಸರದಲ್ಲಿ ಕಾವ್ಯ ಯಾವ ರೀತಿಯಲ್ಲಿ ಸೃಷ್ಟಿಯನ್ನು ಪಡೆದುಕೊಂಡಿದೆ ಎಂಬುದನ್ನು ಗುರುತಿಸಬೇಕಾಗಿದೆ. ಆದ ಕಾರಣ ಈ ಪರಿಸರದ ಮಹಿಳಾ ಕಾವ್ಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಗೋಕಾಕ ತಾಲ್ಲೂಕಿನಲ್ಲಿ ಕವಿಯತ್ರಿಯರು ಸಾಕಷ್ಟಿದ್ದರೂ ಬೆಳಕಿಗೆ ಬಂದಿರುವುದು ಅತಿ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಎಲೆಯ ಮರೆಯ ಕಾಯಿಯಂತೆ ತಮ್ಮ

ಪ್ರತಿಭೆಯನ್ನು ಮೆರೆಯುತ್ತಿರುವ ಕವಿಯತ್ರಿಯರ ಕೊಡುಗೆಗಳನ್ನು ಅವರ ಸಾಹಿತ್ಯ ಸಾಧನೆಯನ್ನು ತಮ್ಮ ಅಸ್ತಿತ್ವವನ್ನು, ಅಸ್ಮಿತೆಯನ್ನು ಮೆರೆಯುವ ಹಲವಾರು ಕವಿಯತ್ರಿಯರನ್ನು ಪರಿಚಯಿಸಿ, ಅವರ ಕಾವ್ಯವನ್ನು ವಿಮರ್ಶಿಸುವುದು, ವ್ಯಾಖ್ಯಾನಿಸುವುದು ಈ ಲೇಖನದ ಉದ್ದೇಶ.

ಇಲ್ಲಿಯವರೆಗೆ ಗೋಕಾಕ ತಾಲ್ಲೂಕಿನ ಕವಿಯತ್ರಿಯರ ಕುರಿತು ಅಧ್ಯಯನ ನಡೆದಿಲ್ಲ. ಗೋಕಾಕ ತಾಲ್ಲೂಕಿನ ಕವಿಗಳ ಕುರಿತು ಅಧ್ಯಯನ ಜರುಗಿದೆ. ಉದಾ : ಗೋಕಾಕ ತಾಲ್ಲೂಕಿನ ಪರಿಚಯಾತ್ಮಕವಾಗಿ ಬಹಳಷ್ಟು ಕೃತಿಗಳು ಬಂದಿವೆ. 'ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ' (೨೦೦೪– ಸಂಪಾದಕರು ಪಿ.ಜಿ.ಕೆಂಪಣ್ಣವರ) 'ಗೋಕಾವಿ ಸಿರಿಸಂಪದ' (೨೦೦೮– ಸಂಪಾದಕರು ಪ್ರೊ. ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ), 'ಗೋಕಾಕ ತಾಲ್ಲೂಕಿನ ಸಾಂಸ್ಕೃತಿಕ ಅಧ್ಯಯನ' (೨೦೦೮– ನಾಗರಾಜ ಮುರಗೋಡ), 'ಗೋಕಾಕ ತಾಲ್ಲೂಕಿನ ಸಾಹಿತ್ಯ' (ಸಿ.ಕೆ.ನಾವಲಗಿ), 'ಬೆಳಗಾವಿ ಸಿರಿ' (೨೦೦೩–ಸ್ಮರಣ ಸಂಚಿಕೆ), 'ಪರಿಸರ' (ಸಂಪಾದಕರು – ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ, ಎಂ.ಆರ್.ದೊರೆಸ್ವಾಮಿ), 'ಗಡಿನಾಡು ಬೆಡಗು' (ಸಂಪಾದಕರು ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ) ಕವಿಯತ್ರಿಯರ ಕುರಿತು 'ಬೆಳಗಾವಿ ಜಿಲ್ಲೆಯ ಲೇಖಕಿಯರು' (ಅನುಸೂಯಾ ಸಿದ್ರಾಮ) ಮುಂತಾದವರು ಬರೆದ ಅಲ್ಲೊಂದು ಇಲ್ಲೊಂದು ಲೇಖನಗಳು ಬಂದಿದ್ದರೂ ಕೂಡ ಗೋಕಾಕ ತಾಲ್ಲೂಕಿನ ಸಮಗ್ರ ಕವಿಯತ್ರಿಯರ ಪರಿಚಯಾತ್ಮಕ, ವಿಶ್ಲೇಷಣಾತ್ಮಕ, ವಿಮರ್ಶಾತ್ಮಕವಾದ ಒಂದು ಗ್ರಂಥದ ಅವಶ್ಯಕತೆಯನ್ನು ಮನಗಂಡು ಕವಿಯತ್ರಿಯರು ಹಿಂದಿನ ಕವಿಗಳಿಂದ ಏನು ಪ್ರೇರಣೆ ಪಡೆದಿದ್ದಾರೆ? ಎಷ್ಟು ಸ್ವಂತಿಕೆಯನ್ನು ಮೆರೆದಿದ್ದಾರೆ? ಮುಂದಿನ ಕವಿಗಳಿಗೆ ಏನು ಕಾಣಿಕೆ ಸಲ್ಲಿಸಿದ್ದಾರೆ ಎಂಬುದರ ಅಭ್ಯಾಸ ಅವಶ್ಯಕತೆಯಿತ್ತು. ಅದನ್ನು ಮನಗಂಡು 'ಗೋಕಾಕ ತಾಲ್ಲೂಕಿನ ಕವಿಯತ್ರಿಯರು' ಎಂಬ ವಿಷಯವನ್ನು ಆಯ್ದುಕೊಂಡಿದ್ದೇನೆ.

ನಿಬಂಧದ ರಚನೆಯಲ್ಲಿ ಕೆಲವು ಉದ್ದೇಶಗಳನ್ನು ಕುರಿತು ಚರ್ಚಿಸಲಾಗಿದೆ. ಅವುಗಳನ್ನು ಈ ರೀತಿಯಲ್ಲಿ ನೋಡಲಾಗಿದೆ.

೧) ಗೋಕಾಕ ತಾಲ್ಲೂಕಿನ ಕಾವ್ಯ ಪರಂಪರೆಯನ್ನು ಕುರಿತು ವಿಮರ್ಶಾತ್ಮಕವಾಗಿ ಚರ್ಚಿಸುವುದು.

೨) ಆಧುನಿಕ ಕಾಲಘಟ್ಟಗಳಲ್ಲಿ ಇಲ್ಲಿಯ ಕಾವ್ಯದ ಮನೋಧೋರಣೆ, ಸಂವೇದನಾ ಶೀಲ ಅಭಿವ್ಯಕ್ತಿಯನ್ನು ಗುರುತಿಸುವುದು.

೩) ಮಹಿಳಾ ಕಾವ್ಯಪರಂಪರೆ ನಡೆದು ಬಂದ ಬಗೆಯನ್ನು ವಿಶ್ಲೇಷಿಸುವುದಾಗಿದೆ.

೪) ಮಹಿಳಾ ಕಾವ್ಯದ ಮನೋಧೋರಣೆಯನ್ನು ಅರ್ಥೈಸುವುದು.

೫) ಮಹಿಳಾ ಕಾವ್ಯದ ಪ್ರಮುಖ ನೆಲೆಯನ್ನು ಗುರುತಿಸುವುದು.

೬) ಪ್ರಾದೇಶಿಕ ಕಾವ್ಯದ ವೈವಿಧ್ಯತೆಯನ್ನು ಕಲೆ ಹಾಕುವುದು.

೭) ಕನ್ನಡ ಸಾಹಿತ್ಯಕ್ಕೆ ಗೋಕಾಕ ಪ್ರಾದೇಶಿಕ ಜನಪದ ಕವಿಗಳ ಕೊಡುಗೆಯನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ.

೮) ಈ ಪರಿಸರದಲ್ಲಿ ಆಗಿ ಹೋದ ಜೈನ ಕವಿಗಳ ಕುರಿತು ವಿಶೇಷ ಅಧ್ಯಯನ ನಡೆಸುವುದು.

ಈ ಅಧ್ಯಯನದ ಸ್ವರೂಪವನ್ನು ಈ ರೀತಿಯಲ್ಲಿ ಮುಂದುವರಿಸಲಾಗಿದೆ. ಗೋಕಾಕ ತಾಲ್ಲೂಕಿನ ಕವಿಯತ್ರಿಯರು ಎಂಬ ತಲೆಬರಹವನ್ನು ಕೊಟ್ಟು ಅಧ್ಯಯನವನ್ನು ಮಾಡಲಾಗಿದೆ. ಇದರಲ್ಲಿ ಮೊದಲನೆ ಅಧ್ಯಾಯವು ಒಟ್ಟು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವೈಧಾನಿಕತೆ ಕುರಿತು ಚರ್ಚಿಸಲಾಗಿದೆ. ಎರಡನೇಯ ಅಧ್ಯಾಯವು ಗೋಕಾಕ ತಾಲ್ಲೂಕಿನ ಕಾವ್ಯ ಪರಂಪರೆ. ಈ ಅಧ್ಯಾಯನದಲ್ಲಿ ಪ್ರಾದೇಶಿಕತೆಯ ಹಿನ್ನಲೆ ಹಾಗೂ ಅಲ್ಲಿಯ ಜೈನಕವಿಗಳು, ಜನಪದ ಕವಿಗಳು ಹಾಗೂ ಆಧುನಿಕ ಕಾಲ ಘಟ್ಟದಲ್ಲಿಯ ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಈ ಪಂಥದ ಕವಿಗಳು ನಡೆದು ಬಂದ ಬಗೆಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಲಾಗಿದೆ.

ಮೂರನೆಯ ಅಧ್ಯಾಯವು ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯವಾಗಿದ್ದು ಇಲ್ಲಿಯ ಕಾವ್ಯದ ಪ್ರಮುಖವಾದ ಆಶೆಯ ಹಾಗೂ ಮಹಿಳೆಯರು ಯಾವ ರೀತಿಯಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆಂಬುದನ್ನು ಗುರುತಿಸಲಾಗಿದೆ. ನಾಲ್ಕನೆಯ ಅಧ್ಯಾಯವು ಮಹಿಳಾ ಕಾವ್ಯದ ವಸ್ತು ವೈವಿಧ್ಯತೆ ಕುರಿತು ಚರ್ಚೆ ಬೆಳೆಸಲಾಗಿದೆ. ಈ ಮಹಿಳಾ ಕಾವ್ಯದ ಭಾಷೆ, ಶೈಲಿ, ಛಂದಸ್ಸು ಮುಂತಾದವುಗಳ ಕುರಿತು ಅಧ್ಯಯನ ನಡೆಸಲಾಗಿದೆ. ಐದನೆಯ ಅಧ್ಯಾಯವು ಸಮಾರೋಪವಾಗಿದ್ದು ಒಟ್ಟು ಅಧ್ಯಯನದ ಫಲಿತಗಳನ್ನು ಅದರ ಫಲಶ್ರುತಿಯನ್ನು ಸೋದಾಹರಣವಾಗಿ ಚರ್ಚಿಸಿ ಆ ಮೂಲಕ ಬೇರೆ ಪ್ರದೇಶದ ಕಾವ್ಯ ರಚನೆಗಿಂತ ಇಲ್ಲಿಯ ಪ್ರಾದೇಶಿಕ ಕಾವ್ಯ ಹೇಗೆ ಭಿನ್ನವಾಗಿ ಕಾಣಿಸಿಕೊಳ್ಳುತ್ತದೆ ಎಂಬುದನ್ನು ಎತ್ತಿ ಹೇಳಲಾಗಿದೆ.

[illegible]

ಕೊನೆಯ ಅನುಬಂಧ ಭಾಗವು ೩ ಭಾಗಗಳಿಂದ ಕೂಡಿದ್ದು, ಒಂದನೆಯ ಭಾಗ ಗೋಕಾಕ ತಾಲ್ಲೂಕಿನ ನಕ್ಷೆ, ಎರಡನೆಯ ಭಾಗ ಕವಿಗಳು ಮತ್ತು ಕವಿಯತ್ರಿಯರ ಸೂಚಿ. ಮೂರನೆಯ ಭಾಗವು ಆಧಾರಗ್ರಂಥದಿಂದ ಕೂಡಿದೆ. ಹೀಗೆ ಈ ಎಲ್ಲ ವಿಷಯವನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಗೋಕಾಕ ಪರಿಸರದಲ್ಲಿಯ ಮಹಿಳಾ ಸಾಹಿತ್ಯದ ಹೊಸ ಹೊಸ ಸಾಧ್ಯತೆಯನ್ನು ವೈಧಾನಿಕತೆಯ ಹಿನ್ನಲೆಯಲ್ಲಿ ಗುರುತಿಸುತ್ತಾ ಅಧ್ಯಾಯನವನ್ನು ಮುಂದುವರಿಸಲಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಐದು ಅಧ್ಯಾಯಗಳು ಒಳಗೊಂಡಿದ್ದು, ಮೂರು ಪ್ರಮುಖವಾದ ಅನುಬಂಧಗಳನ್ನು ಒಳಗೊಂಡ ಈ ಅಧ್ಯಯನದ ಒಟ್ಟು ಶಿಲ್ಪರೂಪ ಈ ರೀತಿಯಲ್ಲಿ ರೂಪಗೊಂಡಿದೆ.

ಅಧ್ಯಾಯ – ೨

ಗೋಕಾಕ ತಾಲ್ಲೂಕಿನ ಕಾವ್ಯ ಪರಿಸರ

೨

ಗೋಕಾಕ ತಾಲ್ಲೂಕಿನ ಕಾವ್ಯ ಪರಿಸರ :

ಕರ್ನಾಟಕ ರಾಜ್ಯದಲ್ಲಿ ಬೆಳಗಾವಿ ಜಿಲ್ಲೆಗೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ಸ್ಥಾನವಿದೆ. ಕರ್ನಾಟಕದಲ್ಲಿ ಅತೀ ದೊಡ್ಡ ಜಿಲ್ಲೆಯೆಂಬ ಹೆಗ್ಗಳಿಕೆಯ ಪಡೆದ ಬೆಳಗಾವಿ. ಸ್ವಾತಂತ್ರ್ಯ ಹೋರಾಟಗಾರರು, ವೀರಯೋಧರು, ಸಾಹಿತಿಗಳು ಹೀಗೆ ಹಲವು ರೀತಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಉಳಿಸಿಕೊಂಡ ಜಿಲ್ಲೆ ಈ ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳು ಒಳಗೊಂಡಿವೆ. ಆ ಹತ್ತು ತಾಲೂಕಿನಲ್ಲಿ ಗೋಕಾಕ ತಾಲ್ಲೂಕು ಒಂದಾಗಿದೆ.

ಗೋಕಾಕ ತಾಲ್ಲೂಕು ಎಲ್ಲ ರಂಗದಲ್ಲಿಯು ಹೆಸರುವಾಸಿಯಾದ ತಾಲ್ಲೂಕು ಕೇಂದ್ರ. ಇಂತಹ ನಾಡಿನಲ್ಲಿ ನೂರಾರು ಕವಿ-ಕಲಾವಿದರು ಬಾಳಿ ಬದುಕಿ ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡಿದ್ದಾರೆ. ಮತ್ತು ನೀಡುತ್ತಿದ್ದಾರೆ. ಆದ ಕಾರಣ ಆ ಕವಿಗಳು ನೀಡಿದ ಕಾವ್ಯವನ್ನು ಅವರು ಬಾಳಿ ಬದುಕಿದ ಪರಿಸರದ ಹಿನ್ನಲೆಯಲ್ಲಿ ವಿವೇಚಿಸುವ ಮನೋಧೋರಣೆ ನನ್ನದಾಗಿದೆ.

ಅಧ್ಯಯನದ ದೃಷ್ಟಿಯಿಂದ ಗೋಕಾಕ ತಾಲೂಕಿನ ಕಾವ್ಯ ಪರಿಸರವನ್ನು ೧) ಜೈನಕವಿಗಳು ೨) ಜನಪದ ಕವಿಗಳು ೩) ಆಧುನಿಕ ಕಾಲದ ಕವಿಗಳು – ಇದರಲ್ಲಿ ನವೋದಯ ಕವಿಗಳು, ಪ್ರಗತಿಶೀಲ ಪಂಥದ ಕವಿಗಳು, ನವ್ಯ ಕವಿಗಳು, ನವ್ಯೋತ್ತರ ಕವಿಗಳು ಎಂಬಿತ್ಯಾದಿಯಾಗಿ ಅಭ್ಯಸಿಸುವ ಅವಶ್ಯಕತೆ ಇದೆ.

ಈ ಪರಿಸರದಲ್ಲಿ ಸಾಹಿತ್ಯ ಸೃಷ್ಟಿಯ ಮೂಲವನ್ನು ಗುರುತಿಸಲು ಹೊರಟರೆ ಅದು ಕ್ರಿ.ಶ. ೧೧ನೆಯ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಎಲ್ಲ ಸಾಹಿತ್ಯ ಕ್ಷೇತ್ರಕ್ಕೆ ಜನಪದ ಸಾಹಿತ್ಯವೇ ಮೂಲವಾದರೂ ಸಹ, ಆ ಜನಪದ ಸಾಹಿತ್ಯ ಸೃಷ್ಟಿಯು ರಚನೆಯಾದ ಕಾಲವನ್ನು ನಿರ್ದಿಷ್ಟವಾಗಿ ಗುರುತಿಸಲು ಕೆಲವು ಅಡೆತಡೆಗಳಿವೆ. ಹೀಗಾಗಿ ಈ ಪರಿಸರದಲ್ಲಿ ರಚಿತವಾದ ಕಾವ್ಯ ಮಾರ್ಗವನ್ನು ನಾವು ಜೈನಧರ್ಮದ ಮೂಲಕ ಗುರುತಿಸಲು ಸಾಧ್ಯವಿದೆ. ಆದ ಕಾರಣ ಗೋಕಾಕ ತಾಲ್ಲೂಕಿನಲ್ಲಿ ಮೊದಲು ಕಾವ್ಯ

ರಚಿಸಿದ ಕೀರ್ತಿ ಜೈನರಿಗೆ ಸಲ್ಲುತ್ತದೆ. ಈ ಮಾತನ್ನು ಕಲ್ಲೋಳಿ ಮತ್ತು ಕೊಣ್ಣೂರ ಶಾಸನ ಮತ್ತು ಪಾರ್ಶ್ವಪಂಡಿತನ ಪಾಶ್ವನಾಥಪುರಾಣ ಸಾಹಿತ್ಯ ಕೃತಿಯಿಂದ ದೃಢೀಕರಿಸಲಾಗಿದೆ.

ನಂತರ ಕಾಲ ಘಟ್ಟದಲ್ಲಿ ಜನಪದ ಕವಿಗಳು ಕಂಡು ಬರುತ್ತಾರೆ. ತದ ನಂತರ ಆಧುನಿಕ ಕಾವ್ಯ ರಚಿಸಿದ ಕವಿಗಳು ಕಂಡು ಬರುತ್ತಾನೆ. ಹೀಗಾಗಿ ನಾವು ಮೊದಲು ಜೈನಕವಿಗಳು ರಚಿಸಿದ ಕಾವ್ಯವನ್ನು ಅನುಲಕ್ಷಿಸಿ ನಂತರ ಆಯಾ ಕಾಲ ಘಟ್ಟದಲ್ಲಿ ಕಾವ್ಯ ರಚಿಸಿದ ಕವಿಗಳ ಕಾವ್ಯವನ್ನು ಕುರಿತು ಚರ್ಚೆಯನ್ನು ಬೆಳೆಸಲಾಗಿದೆ.

೧. ಜೈನಕವಿಗಳು :

ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಯಾವುದೇ ಒಂದು ಧರ್ಮ ಒಂದಿಲ್ಲ ಒಂದು ರೀತಿಯಲ್ಲಿ ಕಾವ್ಯವನ್ನು ರಚಿಸಿದ ಬಗೆಯನ್ನು ನಾವು ಗ್ರಹಿಸಬಹುದಾಗಿದೆ. ಇಂತಹ ಕಾವ್ಯ ಮಾರ್ಗವನ್ನು ಕನ್ನಡ ಸಾಹಿತ್ಯದಲ್ಲಿ ಮೊದಲು ರಚಿಸಿದ ಕೀರ್ತಿಯು ಸಹ ಜೈನಧರ್ಮಕ್ಕೆ ಸೇರಿದ್ದು ಅಷ್ಟೇ ಸತ್ಯವಾದ ಮಾತು. ಹೀಗಾಗಿ ಆ ಧರ್ಮದ ಬೋಧನೆಯ ಜೊತೆಗೆ ಅಹಿಂಸಾತತ್ವ ಮುಂತಾದವು ಅವರ ಕಾವ್ಯದಲ್ಲಿ ಹರಳು ಗಟ್ಟಿ ನಿಂತಿವೆ. ಆ ಧರ್ಮದಲ್ಲಿ ಮುನಿಗಳು ಕವಿಗಳಾದ ಎಷ್ಟೋ ಉದಾಹರಣೆಗಳು ಇವೆ. ಆ ಕವಿಗಳು ರಚಿಸಿದ ಕಾವ್ಯ ಮಾರ್ಗವನ್ನು ಎತ್ತಿ ಹಿಡಿಯಬೇಕಾಗಿದೆ. ಹೀಗಿರುವಾಗ ಅಂತಹ ಕವಿಗಳು ಈ ಗೋಕಾಕ ನಾಡಿನ ಪರಿಸರದಲ್ಲಿ ಬಾಳಿ ಬದುಕಿ ಸಾಹಿತ್ಯ ರಚಿಸಿದ್ದಾರೆ. ಅವರು ಬರೆದ ಎಷ್ಟೋ ಕೃತಿಗಳು ಇವತ್ತು ಕಾಲಗರ್ಭದಲ್ಲಿ ಮುಳುಗಿ ಹೋಗಿವೆ. ಆದರೆ ಅವರು ಬರೆದ ಕೃತಿಗಳ ಹೆಸರು, ಅವರು ಜನಿಸಿದ ಊರು ಮುಂತಾದವುಗಳು ನಮಗೆ ಶಾಸನ ಮತ್ತು ಸಾಹಿತ್ಯಿಕ ಕೃತಿಗಳಿಂದ ತಿಳಿದು ಬರುತ್ತವೆ. ಅಂತಹ ಕವಿಗಳ ರಚಿಸಿದ ಕಾವ್ಯ ಮಾರ್ಗವನ್ನು ಈ ರೀತಿಯಲ್ಲಿ ಪರಿಶೀಲಿಸಲಾಗಿದೆ.

ಗೋಕಾಕ ತಾಲ್ಲೂಕಿನ ಜೈನರ ಕಾಶಿಯೆಂದು ಹೆಸರು ಪಡೆದ ಕಲ್ಲೋಳಿ ಮತ್ತು ಕೊಣ್ಣೂರ ಎಂಬ ಊರಲ್ಲಿ ಈ ಜೈನಕವಿಗಳ ಬಗ್ಗೆ ಅನೇಕ ದಾಖಲೆಗಳು ದೊರೆಯುತ್ತವೆ. ಘಟಪ್ರಭೆಯ ನದಿಯ ದಡದಲ್ಲಿ ಇರುವ ಊರು ಕೊಣ್ಣೂರು. ಪ್ರಾಚೀನ ಕಾಲದಲ್ಲಿ ಜೈನರ ಮುಖ್ಯ ನೆಲೆಯಾಗಿತ್ತು. ಆ ಊರಿನಲ್ಲಿ ಇವತ್ತಿಗೂ ಸಹ ಜೈನ ಧರ್ಮದ ಅನೇಕ ಕುರುಹುಗಳು ಕಂಡು ಬರುತ್ತವೆ. ಇಂತಹ ಊರಲ್ಲಿ ಅನೇಕ ಕವಿಗಳು ಜನಿಸಿ ಸಾಹಿತ್ಯ ಕೃಷಿ ಮಾಡಿದ್ದಾರೆ. ಅವರುಗಳು

೧. "ಸೋರಿಗಾಂಕ (ಕ್ರಿ.ಶ. ೧೦೮೮)"[೧]

ಸೋರಿಗಾಂಕನು ಕ್ರಿ.ಶ. ೧೦೮೮ ರಲ್ಲಿ ಗೋಕಾಕ ತಾಲ್ಲೂಕಿನ ಕೊಣ್ಣೂರಿನಲ್ಲಿ ಬಾಳಿ ಬದುಕಿದ ಜೈನಕವಿ ಇತನನ್ನು ಕುರಿತು ಕೊಣ್ಣೂರಿನ ಶಾಸನದಲ್ಲಿ ಉಲ್ಲೇಖವಿದೆ. ಆದರೆ ಇವರು ಬರೆದ ಯಾವ ಕೃತಿಗಳು ಲಭ್ಯವಾಗಿಲ್ಲ.

೨. "ಬಲ್ಲ, ಕಲ್ಲ ಮತ್ತು ಚಾಮುಂಡ (ಕ್ರಿ.ಶ. ೧೦೮೮)"[೨]

ಸೋರಿಗಾಂಕ ವಿಭು ಎಂಬ ಜೈನ ಕವಿಯ ಮಕ್ಕಳು. ಇವರು ಸಹ ಶ್ರೇಷ್ಠ ಕವಿಗಳಾಗಿದ್ದರೆಂದು, ಕೊಣ್ಣೂರಿನ ಶಾಸನ ತಿಳಿಸುತ್ತದೆ. ಇವನ ಕೃತಿಗಳು ಸಹ ದೊರೆತಿಲ್ಲ.

೩. "ಶ್ರುತಕೀರ್ತಿ (ಕ್ರಿ.ಶ. ೧೦೮೮)"[೩]

ಶ್ರುತಕೀರ್ತಿಯನ್ನು ಕುರಿತು ಕೊಣ್ಣೂರಿನ ಶಾಸನ ಈ ರೀತಿಯಲ್ಲಿ ವರ್ಣಿಸುತ್ತದೆ.

"ಅತಿ ಚತುರ ಕವಿ ಚಕೋರ ಪ್ರ ।

ತಲೆಧರೆಸ್ವೇರನೆಯನಮಿಂಟಿದಪ್ರದುದಂ ॥

ಬಿತಕರ್ಣ್ಣಚಂಚುಪುಟದಿಂ ॥

ಶ್ರುತಕೀರ್ತಿ ಮುನೀಂದ್ರ ಚಂದ್ರವಾಕ್ಚಂದ್ರಿಕೇಯ "[೪]

ಎಂದು ಕವಿಯನ್ನು ಈ ಶಾಸನ ಬಣ್ಣಿಸಿದೆ. ಆದರೆ ಇತನು ಬರೆದಿರುವ ಕೃತಿಯು ಲಭ್ಯವಿಲ್ಲದಿರುವುದು ವಿಷಾದದ ಸಂಗತಿಯಾಗಿದೆ.

ಗೋಕಾಕದಿಂದ ಸುಮಾರು ೧೩ ಕಿ.ಮೀ. ದೂರದಲ್ಲಿರುವ ಕಲ್ಲೋಳಿಗ್ರಾಮ. ಐತಿಹಾಸಿಕವಾದ ಪ್ರಸಿದ್ಧ ಜೈನರ ಕೇಂದ್ರವಾಗಿದೆ. 'ಇಂದ್ರವೇಣಿ' ಹಳ್ಳದ ದಡದಲ್ಲಿ ಬೆಳೆದ ಗ್ರಾಮದಲ್ಲಿ ೪ ಬಸದಿಗಳಿರುವ ಸಾಧ್ಯತೆಗಳಿವೆ. ಇಂತಹ ಜೈನರ ಕೇಂದ್ರದಲ್ಲಿ ಹಲವು ಮುನಿಗಳು ಕವಿಗಳಾಗಿ ಮಹತ್ವದ ಕೃತಿಗಳನ್ನು ರಚಿಸಿದ್ದಾರೆ. ಅವರುಗಳು

೪. "ವೀರನಂದಿ (ಕ್ರಿ.ಶ. ೧೧೫೩)"[೫]

ಇತನು ಸಹ ಗೋಕಾಕ ತಾಲ್ಲೂಕಿನ ಕೊಣ್ಣೂರಿನ ಜೈನಕವಿ ಇವನು ೨೫ ಮೇ ೧೧೫೩ ರಲ್ಲಿ 'ಆಚಾರದಾರ' ಎಂಬ ಕೃತಿಯನ್ನು ರಚಿಸಿದ ಬಗ್ಗೆ ಕೊಣ್ಣೂರಿನ ಶಾಸನದಲ್ಲಿ ಉಲ್ಲೇಖವು ಇದೆ. ಆದರೆ ಆ ಕೃತಿಯು ಇಲ್ಲಿಯವರೆಗೆ ದೊರೆತಿಲ್ಲ.

೫. "ವಾದಿರಾಜ (ಕ್ರಿ.ಶ. ೧೩ ನೇ ಶತಮಾನ)"[೬]

ಇವನು ಗೋಕಾಕ ತಾಲ್ಲೂಕಿನ ಕಲ್ಲೋಳಿಯ ಜೈನಕವಿ 'ತರ್ಕತ್ರಯ' ವೆಂಬ ಗ್ರಂಥವನ್ನು ಬರೆದು ವಾದಿರಾಜ ಎಂಬ ಹೆಗ್ಗಳಿಕೆಯನ್ನು ಪಡೆದುಕೊಂಡವ. ಈತ ರಚಿಸಿದ ಕೃತಿ ಉಪಲಬ್ದವಾಗಿಲ್ಲ.

೬. "ಮುನಿಚಂದ್ರ (ಕ್ರಿ.ಶ. ೧೩ ನೇ ಶತಮಾನ)"[೭]

ಇವನು ಸಹ ಗೋಕಾಕ ತಾಲ್ಲೂಕಿನ ಕಲ್ಲೋಳಿಯ ಜೈನಕವಿ. ಆದರೆ ಇತ ಬರೆದ ಯಾವ ಗ್ರಂಥವು ದೊರೆತಿಲ್ಲ.

೭. "ದೇವನಂದಿ (ಕ್ರಿ.ಶ. ೧೩ ನೇ ಶತಮಾನ)"[೮]

'ಸಾಹಿತ್ಯ ವಿದ್ಯಾಸ್ತಾರಕ' ಎಂಬ ಬಿರುದನ್ನು ಪಡೆದುಕೊಂಡ ಕವಿ. ಇತನು ಸಹ ಕಲ್ಲೋಳಿಯಲ್ಲಿ ಬಾಳಿ ಬದುಕಿದವನು. ಇತನ ಕೃತಿಯೂ ಸಹ ಲಭ್ಯವಿಲ್ಲ.

೮. "ಭಾವಸೇನ (ಕ್ರಿ.ಶ. ೧೩ ನೇ ಶತಮಾನ)"[೯]

ಇವನು ಸಹ ಕಲ್ಲೋಳಿಯ ಗ್ರಾಮದವನು. ಆದರೆ ಇತನ ಕುರಿತು ಹೆಚ್ಚಿನ ವಿವರಗಳಿಲ್ಲ.

೯. "ವೀರನಂದಿ (ಕ್ರಿ.ಶ. ೧೩ ನೇ ಶತಮಾನ)"[೧೦]

'ಸುಕವಿ' ಎಂಬ ಬಿರುದನ್ನು ಪಡೆದುಕೊಂಡವ. ಇತನು ಸಹ ಕಲ್ಲೋಳಿಯಲ್ಲಿ ವಾಸವಾದ ಕವಿ. ಇತನ ಕುರಿತು ಹೆಚ್ಚಿನ ವಿವರಗಳು ಲಭ್ಯವಿಲ್ಲ.

೨. ಜನಪದ ಕವಿಗಳು :

ಯಾವುದೇ ಸಾಹಿತ್ಯದ ಮೊದಲ ತಾಯಿಬೇರು ಜನಪದ ಸಾಹಿತ್ಯ. 'ಜನವಾಣಿ ಬೇರು ಕವಿವಾಣಿ ಹೂವು' ಎಂಬಂತೆ ಗೋಕಾಕ ತಾಲ್ಲೂಕಿನ ಕಾವ್ಯ ಪರಿಸರವನ್ನು ಜನಪದ ಕವಿಗಳಿಂದ ಪರಿಶೀಲಿಸಲಾಗಿದೆ.

೧) "ಗೋಕಾವಿ ಸಿದ್ಧ ಸೇವಕ (೧೮೦೦-೧೮೮೦)"[೧೧]

ಇತ ಸಂಚಾರಿ ಕವಿ. ಡೊಳ್ಳಿನ ಹಾಡು, ಹಂತಿಯ ಹಾಡುಗಳು, ಲಾವಣಿಗಳನ್ನು ರಚಿಸಿದ್ದಾರೆ. ಈ ಕವಿಯ ಕುರಿತು ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

೨) "ಕುಲಗೋಡ ತಮ್ಮಣ್ಣ (೧೮೩೦-೧೮೭೫)"[೧೨]

ಕುಲಗೋಡ ತಮ್ಮಣ್ಣ ಗೋಕಾಕ ತಾಲ್ಲೂಕಿನ ಕುಲಗೋಡದವನು. ಇತ ಶ್ರೀಕೃಷ್ಣ ಪಾರಿಜಾತ ಬಯಲಾಟ ಪರಂಪರೆಗೆ ಮೂಲ ಪುರುಷನಾದವನು. ತನ್ನೂರಿನದೈವವನ್ನೇ ಅಂಕಿತವಾಗಿರಿಸಿ ಜಾವಳಿ ಪದ್ಯಗಳನ್ನು ರಚಿಸಿದ್ದಾರೆ. ಇತನ ಕುರಿತು ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

೩) "ಗೋಕಾಕದ ಅನಂತಾಚಾರ್ಯ (೧೮೦೦-೧೮೮೦)"[೧೩]

ಇತನು ಸಂಸ್ಕೃತ ಮತ್ತು ಸಂಗೀತದಲ್ಲಿ ಪ್ರಸಿದ್ಧಿ ಪಡೆದ ಜಾನಪದ ಕವಿ. 'ಅನಂತಾದ್ರೀಶ' ಎಂಬ ಅಂಕಿತದಿಂದ ಪದ್ಯಗಳನ್ನು ಪಾರಿಜಾತದ ಹಾಡುಗಳನ್ನು, ಲಾವಣಿಗಳನ್ನು ಬರೆದಿದ್ದಾರೆ. 'ಶ್ರೀ ವೆಂಕಟೇಶ ಪಾರಿಜಾತ' ರಚಿಸಿದ್ದಾರೆ.

೪) "ಗೋಕಾವಿ ಮಲ್ಲೇಶಪ್ಪ (೧೮೩೨-೧೯೧೭)"[೧೪]

ಗೋಕಾವಿ ಮಲ್ಲೇಶಪ್ಪ ಪತ್ತಾರ ಅಯ್ಯಪ್ಪನ ಮಗ. ಈ ಕವಿಯ ಹಸ್ತಪ್ರತಿಗಳು ಈಗಲೂ ಗೋಕಾವಿ ಪತ್ತಾರದ ಮನೆಗಳಲ್ಲಿವೆ. ಇತನು ರಚಿಸಿದ ಮೈತ್ರಿ, ರಾಮಭೀಮ, ವಟಸಾವಿತ್ರಿ ಪ್ರಸಿದ್ಧವಾದ ಲಾವಣಿಗಳು ಇತನ ಮೊಮ್ಮಗ ಕಾಳಪ್ಪ ಮಗ ಲಕ್ಷ್ಮಣನೂ ಕವಿಯಾಗಿದ್ದನು. 'ನಾಗೇಶಿ' ಪಂಗಡ ಹಾಡುಗಳನ್ನು ರಚಿಸಿದ ಕವಿಗಳಿವರು.

೫) "ಗೋಕಾವಿ ಯಲ್ಲಪ್ಪ (೧೮೫೦-೧೯೦೦)"[೧೫]

ಗಿರಣಿ ಯಲ್ಲಪ್ಪ ಎಂಬ ಹೆಸರುವಾಸಿಯಾದ ಇತನು ಗೋಕಾಕ ಸಮೀಪದ ಅಡಿಬಟ್ಟಿ ಗ್ರಾಮದವನು. ಇತನು ಕಟ್ಟಿಚೆನ್ನನ ಚರಿತ್ರೆಯನ್ನು ಲಾವಣಿಯನ್ನಾಗಿಸಿ ಪರಿವರ್ತಿಸಿ ಪ್ರಸಿದ್ಧಿ ಪಡೆದಿದ್ದಾರೆ.

೬) "ಕವಿರತ್ನ ಕ್ಯಾಮಣ್ಣ (೧೮೫೦-೧೨-೪-೧೯೩೮)"[೧೬]

ಎರಡೂ ಕಣ್ಣುಗಳಿರದ ಕ್ಯಾಮಣ್ಣ ಬರೀ ಹೇಳಿಕೆ ಕೇಳಿಕೆಗಳ ಮೇಲಿಂದ ಭಕ್ತಿ, ಜ್ಞಾನ, ವೈರಾಗ್ಯಪರ ಲಾವಣಿ ರಚಿಸಿದ್ದಾನೆ. 'ಸಾತು – ಕ್ಯಾಮಣ್ಣ'ನ ಲಾವಣಿಗಳು ಒಟ್ಟು ೧೭ ಪ್ರಕಟವಾಗಿವೆ. ಸಹಸ್ರಾರು ಲಾವಣಿಗಳನ್ನು, ಗೀಗೀ ಪದಗಳನ್ನು ಪ್ರಚಾರ ಮಾಡಿದ ಕೀರ್ತಿ ಕ್ಯಾಮಣ್ಣನದು.

[illegible]

೭) "ಗೋಕಾವಿ ಬನಪ್ಪ"[೧೭]

ಈತನು ಗೀಗೀ ಪದಗಳನ್ನು ಗೋಕಾಕದ 'ನಾಗೇಶಿ' ಮಠವನ್ನು ಪ್ರತಿಷ್ಠಾಪಿಸಿ ತನ್ನ ರಚನೆಗಳನ್ನು ಇನ್ನಿತರರಿಗೆ ಕಲಿಸುತ್ತಿದ್ದನು.

ಹಾಗೆಯೇ 'ಸುಣದೋಳಿ ಸಿದ್ರಾಮ' (೧೮೮೦-೧೯೩೫), 'ಮನ್ನಿಕೇರಿ ಲಕ್ಷ್ಮಣ' (೧೮೯೬-೧೯೪೦), 'ಯಾದವಾಡದ ಹುಸೇನಿ' (೧೮೯೦-೧೯೭೮) ಮುಂತಾದವರು ಲಾವಣಿ ಕವಿಗಳು ಮತ್ತು ಲಾವಣಿ ಹಾಡುಗಾರರು ಇದೇ ಮಣ್ಣಲ್ಲಿ ಉದಯಿಸಿ ತಾವಿದ್ದ ಕಾಲವನ್ನು ತಮ್ಮ ಕಾವ್ಯ ಪ್ರಭೆಯಿಂದ ಬೆಳಗಿದರು.

ಗೋಕಾಕ ತಾಲ್ಲೂಕಿನ ಜನಪದ ಸಾಹಿತ್ಯ ನೂರಾರು ಜನಪದ ಕವಿಗಳಿಂದ (ಕ್ರಿ.ಶ.ಸು. ೧೮೦೦ ರಿಂದ ೧೯೫೦) ಅವಧಿಯಲ್ಲಿ ನಡೆಯಿತು. ಈ ಇನ್ನೂರು ವರ್ಷಗಳ ಅವಧಿಯಲ್ಲಿ ಜನಪದ ಸಾಹಿತ್ಯದ ಹಲವು ಪ್ರಕಾರಗಳಾದ ಲಾವಣಿ, ಗೀಗೀ, ಭಜನೆ ಹಾಡು, ಮೊಹರಂಪದ, ಡೊಳ್ಳುಪದ, ಹೋಳಿಪದ, ಸೋಬಾನೆಪದ, ಕುಟ್ಟುವಪದ, ಬೀಸುವ ಹಾಡು, ಹಂತಿಹಾಡು, ಭಲೇರಿಹಾಡು, ಜೋಗುಳಹಾಡು, ಮಂಗಳಾರತಿಪದ ಮುಂತಾದ ರೀತಿಯಲ್ಲಿ ಗೋಕಾಕದ ಜನಪದ ಸಾಹಿತ್ಯ ವಿಶಿಷ್ಟ ಪ್ರಕಾರಗಳಲ್ಲಿ ಸೃಷ್ಟಿಯಾಗಿವೆ.

೩. ಆಧುನಿಕ ಕಾಲದ ಕವಿಗಳು :

'ಕನ್ನಡ ನವೋದಯ ಆರಂಭದಿಂದ ಮಾತ್ರ ಈ ತಾಲ್ಲೂಕಿನಲ್ಲಿ ಗುರುತರವಾದ ಗದ್ಯಲೇಖಕರು ಹಾಗೂ ಕವಿಗಳು ಹುಟ್ಟಿಕೊಂಡುದು ಗಮನಾರ್ಹ ಸಂಗತಿ.' ಹೀಗೆ ಹಲವಾರು ಪ್ರಕಾರಗಳಲ್ಲಿ ಈ ನಾಡಿನ ಸಾಹಿತ್ಯ ರಚನೆ ವಿಶಿಷ್ಟ ಶೈಲಿಯಲ್ಲಿ ರಚನೆಯಾಯಿತು. ಹೊಸಗನ್ನಡದ ಯುಗದ ಹರಿಕಾರರಾದ ಬಿ.ಎಂ.ಶ್ರೀ, ಕುವೆಂಪು, ಬೇಂದ್ರೆ, ಮಾಸ್ತಿ, ಮಧುರಚೆನ್ನರ ಪ್ರಭಾವ ತಾಲ್ಲೂಕಿನ ಕವಿಗಳ, ಸಾಹಿತಿಗಳ ಮೇಲಾಯಿತು. ಜನಪದ ಸಾಹಿತ್ಯದಿಂದ ಕಾವ್ಯ ಪರಂಪರೆ ಶಿಷ್ಟ ಸಾಹಿತ್ಯ ಕಾವ್ಯ ಪರಂಪರೆಯೆಡೆಗೆ ನಮ್ಮ ತಾಲ್ಲೂಕಿನ ಕವಿಗಳು ದಾಪುಗಾಲು ಹಾಕಿದರು. ಜನಪದ ಸಾಹಿತ್ಯ ಮೂಲದಲ್ಲಿರಿಸಿ, ಹೊಸ ಪರಂಪರೆಯೆಡೆಗೆ ಕವಿಗಳು ತಮ್ಮ ಕಾವ್ಯವನ್ನು ಸೃಷ್ಟಿಸಿ ವಿಶಿಷ್ಟತೆಯನ್ನು ತಂದುಕೊಟ್ಟರು. ಅಂತಹ ಗೋಕಾಕ ತಾಲ್ಲೂಕಿನ ಕಾವ್ಯ ಪರಂಪರೆಯುನ್ನು ಕವಿಗಳ ಸಾಹಿತ್ಯಿಕ ಮನೋಧೋರಣೆಯನ್ನು ಕಾವ್ಯ ಪರಿಸರವನ್ನು ಈ ರೀತಿಯಲ್ಲಿ ವಿಮರ್ಶಿಸಲಾಗಿದೆ.

ನವೋದಯ ಕವಿಗಳು :

ನವೋದಯದ ಸಂದರ್ಭದಲ್ಲಿ ನಾಡಿನ ಕವಿಗಳು ನಾಡು-ನುಡಿಗಳ ಪ್ರೀತಿ, ಪರಂಪರೆಯ ಅಭಿಮಾನ, ಸ್ವಾತಂತ್ರ್ಯದ ಆವೇಶ, ಜನಪದ ಸಾಹಿತ್ಯದ ಪ್ರೇರಣೆ ಆಂಗ್ಲಭಾಷೆಯ ಸಾಹಿತ್ಯದ ಪ್ರಭಾವ ಈ ಎಲ್ಲವುಗಳನ್ನು ಮೈಗೂಡಿಸಿಕೊಂಡು ಬರೆದರು. ಅಂತಹ ಕವಿಗಳನ್ನು ಈ ರೀತಿಯಲ್ಲಿ ಕಲೆಹಾಕಲಾಗಿದೆ.

೧) ಬೆಟಗೇರಿ ಕೃಷ್ಣಶರ್ಮ (೧೯೦೦-೧೯೮೨)

ಕನ್ನಡದ ಪ್ರಮುಖ ಕವಿಗಳಲ್ಲಿ ಆನಂದಕಂದರು ಪ್ರಮುಖರು. ನವೋದಯ ಕಾವ್ಯ ಪರಂಪರೆಗೆ ಸೇರಿದ ಆನಂದಕಂದರು ಕನ್ನಡ ಕಾವ್ಯ ಪ್ರಪಂಚಕ್ಕೆ ನೀಡಿದ ಕೊಡುಗೆ ಅನನ್ಯವಾಗಿದೆ. ಅದಕ್ಕೆ ಕಾರಣಗಳು ಸ್ಪಷ್ಟವಾಗಿವೆ. ಕನ್ನಡ ನವೋದಯ ಸಾಹಿತ್ಯದ ಆರಂಭಕಾಲದಲ್ಲಿ ಕರ್ನಾಟಕ ಸಾಂಸ್ಕೃತಿಕವಾಗಿ ಮೂರು ಮುಖ್ಯ ಭಾಗಗಳಲ್ಲಿ ಹಂಚಿಹೋಗಿತ್ತು. ಒಂದು ಕಡೆ ಮಂಗಳೂರು, ಇನ್ನೊಂದು ಕಡೆ ಮೈಸೂರು ಮತ್ತೊಂದು ಕಡೆ ಧಾರವಾಡ ಈ ಸಾಂಸ್ಕೃತಿಕ ಹಂಚಿಕೆ ಕೇಂದ್ರಗಳಾಗಿದ್ದವು. ಈ ಮೂರು ಭಾಗಗಳಲ್ಲೂ ಹೆಚ್ಚು ಕಡಿಮೆ ಒಂದೇ ಕಾಲಕ್ಕೆ ಹೊಸ ರೀತಿಯ ಬರವಣಿಗೆ ಆರಂಭವಾಯಿತು. ಈ ಮೂರು ಭಾಗಗಳಿಂದ ಬಂದ ಸಾಹಿತ್ಯ, ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ, ಭೌಗೋಳಿಕ ಕಾರಣಗಳಿಂದಾಗಿ ಭಿನ್ನವಾಗಿತ್ತು. ಆದರೂ ಆ ಭಿನ್ನತೆಯನ್ನು ಮೀರಿದ ಒಂದು ಐಕ್ಯವೂ ಇತ್ತು. ದೇಶದ ಸ್ವಾತಂತ್ರ್ಯ ಚಳುವಳಿ, ಗಾಂಧೀವಾದ, ಕರ್ನಾಟಕ ಏಕೀಕರಣ, ಭಾಷೆ ಸಂಸ್ಕೃತಿಗಳ ಪುನರುಜ್ಜೀವನ, ಸುಧಾರಣವಾದ, ಇಂಗ್ಲೀಷ ರೊಮ್ಯಾಂಟಿಕ್ ಕಾವ್ಯದ ಪ್ರಭಾವ ಇತ್ಯಾದಿಗಳ ಆ ಕಾಲದ ಸಾಹಿತ್ಯಕ್ಕೆ ಒಟ್ಟಿನಲ್ಲಿ ವಿಶಾಲವಾದ ಏಕತೆಯನ್ನು ಒದಗಿಸಿದವು. ಆದರೆ ಈ ಉದ್ದೇಶ ಪ್ರಕಟವಾದ ರೀತಿಗಳು ಮಾತ್ರ ಆಯಾ ಭಾಗಗಳಿಗೆ ವಿಶಿಷ್ಟವಾಗಿದ್ದವು. ಆಯಾ ಭಾಗಗಳು ಎದುರಿಸಿದ ಕರ್ಷಣಗಳ ತೀವ್ರತೆಯೂ ಬೇರೆಯಾಗಿತ್ತು. ಹಾಗೆಯೇ ಅಭಿವ್ಯಕ್ತಿಯ ಪ್ರೇರಣೆಗಳೂ ಬೇರೆಯಾಗಿದ್ದವು. ಈ ಬಿನ್ನತೆಯಿಂದಾಗಿಯೇ ಅವುಗಳ ಕಾವ್ಯ ಸತ್ವ ಹಾಗೂ ಒಳರಚನೆಗಳಲ್ಲಿ ಸೂಕ್ಷ್ಮವಾದ ಹಲವಾರು ವ್ಯತ್ಯಾಸಗಳ್ಳು ಕಾಣಿಸಿಕೊಂಡಿವೆ. ಕನ್ನಡ ಕಾವ್ಯ ಪರಂಪರೆಯ ಅಭ್ಯಾಸದ ದೃಷ್ಟಿಯಿಂದ ಈ ವ್ಯತ್ಯಾಸಗಳು ಮಹತ್ವವಾಗಿದೆ. ಈ ಹಿನ್ನಲೆಯಲ್ಲಿ ಆನಂದಕಂದರ ಕಾವ್ಯವನ್ನು ಪರಿಶೀಲಿಸಲಾಗಿದೆ.

ಆನಂದಕಂದರಿಗೆ ಕಾವ್ಯದ ಗೀಳು ಅವರ ಕಲ್ಪನೆಗೆ ಭಾಷೆಯ ರೂಪಕೊಟ್ಟಿದು ತಮ್ಮ ಎಂಟನೇಯ ವರ್ಷದ ವಯಸ್ಸಿನಲ್ಲಿ ನೆರೆಮನೆಯ 'ಅಣ್ಣು' ಎಂಬ ಹುಡುಗನ

[illegible]

ಕಿಡಿಗೇಡಿತನವನ್ನು ಬಣ್ಣಿಸಲು ಕವಿತೆಯನ್ನು ಬರೆಯಲು ಪ್ರೇರಣೆಯಾಯಿತು. ಅವಶ್ಯದ ಒಂದು ನುಡಿ ಹೀಗಿದೆ!

ಅಣ್ಣು ನೋಡಿದು ಕಣ್ಣು ಕಿಸಿವುದು
ಮಣ್ಣು ಹತ್ತಿದ ದೋತ್ರವನ್ನು ಲೆಂಬುದು
ಹೆತ್ತ ತಾಯಿಯ ಎತ್ತಿ ಒಗೆವುದು
ಮತ್ತೆ ಮಂದಿಯನ್ನು ಕಂಡು ಒತ್ತಿ ಬಯ್ವುದು"

(ಮುದ್ದನ ಮಾತು)

೧೯೧೮ ರಲ್ಲಿ ಭಾಮಿನೀ ಷಟ್ಪದಿಯಲ್ಲಿ ಬರೆದ ಅವರ "ಭಕ್ತಿ ಕುಸುಮಾವಳಿ" ಎಂಬ ಪದ್ಯ ಧಾರವಾಡದಿಂದ ಹೊರಡುತ್ತಿದ್ದ 'ಪ್ರಭಾತ' ಎಂಬ ಸಂಪೂರ್ಣ ಕವಿತಾಮಯವಾದ ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. ಇದು ಕೃಷ್ಣಶರ್ಮರ ಮೊದಲ ಪ್ರಕಟಿತ ಕವನವಾಗಿದೆ. ಈ ಕವಿತೆಯ ವಸ್ತು ಮತ್ತು ಅಭಿವ್ಯಕ್ತಿ ವಿಧಾನಗಳೆರಡೂ ಹಳೆಯವೇ ಆಗಿದ್ದರೂ ಬಳಕೆಯಾದ ಭಾಷೆಯಲ್ಲಿ ಹೊಸತನದ ಸೆಳಕುಗಳಿವೆ. ಆನಂದಕಂದರು ಕನ್ನಡ ನುಡಿಯ ಕುರಿತಾಗಿ ಸುಂದರ ಗೀತೆಗಳನ್ನು ರಚಿಸಿದ್ದಾರೆ.

"ಎನಿತು ಇನಿದು ಈ ಕನ್ನಡ ನುಡಿಯು
ಮನವನು ತಣಿಸುವ ಮೋಹನ ಸುಧೆಯು
'ಕರ್ನಾಟಕಾಂಬೆ ನೀ ಧನ್ಯೆ ಧನ್ಯೆ,
'ನಾನಿದನೆ ಹಾಡುವೆನು ಹಾಡು'
ನನ್ನದು ಈ ಕನ್ನಡ ನಾಡು"

(ಕನ್ನಡ ನಾಡಿನ ಹಾಡು-ಅರುಣೋದಯ)

ಹೀಗೆ ಛಂದಸ್ಸಿನ ಬಂಧದಿಂದ ಮುಕ್ತವಾಗಿ ಸಹಜವಾಗಿ ಕನ್ನಡ ನಾಡಿನ ಹಿರಿಮೆ, ಗರಿಮೆಯನ್ನು ವ್ಯಕ್ತಪಡಿಸುವ ಸುಮಧುರ ಕವನಗಳಾಗಿವೆ.

"ಆನಂದಕಂದ ಅವರ 'ಕೊಳಲ ನುಡಿಸು' ಎಂಬ ಕವಿತೆಯನ್ನು ಕುರಿತು ಪ್ರೊ. ಕೀರ್ತಿನಾಥ ಕುರ್ತುಕೋಟಿಯವರು 'ಈ ಕವಿತೆಯಲ್ಲಿ ಅಸಾಮಾನ್ಯವಾದದ್ದು ಏನೂ ಇಲ್ಲ. ಆದರೆ ಭಾಷೆಯ ಅಚ್ಚುಕಟ್ಟು, ಪದಮೈತ್ರಿ, ಮುಗಿತಾಯವಿಲ್ಲವೆಂಬ ಭ್ರಮೆಯನ್ನು ಹುಟ್ಟಿಸುವ ಆದಿಪ್ರಾಸದ ಯೋಜನೆ, ನಾದದ ಸಹಾಯದಿಂದಲೇ ಚಿತ್ರಗಳನ್ನು ಮೂಡಿಸುವ ಕುಶಲ ಕಲೆ ಇವುಗಳಿಂದ ಇದು ಒಳ್ಳೆಯ ಕವಿತೆಯಾಗಿದೆ.

ಇಂಥ ಕಾವ್ಯಕ್ಕೆ ದೊಡ್ಡದ್ದನ್ನು ಸಾಧಿಸುವ ಮಹತ್ವಾಕಾಂಕ್ಷೆ ಇಲ್ಲದಿದ್ದರೂ ಕಾವ್ಯ ಪರಂಪರೆಯನ್ನು ನಿರ್ಮಿಸುವ ಲವಲವಿಕೆ ಇರುತ್ತದೆ ಎಂದು ಹೇಳುತ್ತಾರೆ."[೧೮]

ನಲ್ವಾಡುಗಳು ಆನಂದ ಕಂದ ಅವರ ಕವನ ಸಂಕಲನದಲ್ಲಿ ಅತೀ ಮಹತ್ವವಾದ ಕೃತಿಯಾಗಿದೆ. ಜನಪದದ ಲಯಬದ್ಧವಾದ ನಡಿಗೆಯಲ್ಲಿ ಜನಪದರ ಬದುಕಿನ ವಿವಿಧ ಮಜಲುಗಳನ್ನು ಪರಿಚಯಿಸುತ್ತ ಹೋಗುವುದು ಇಲ್ಲಿಯ ಕವನಗಳ ವಿಶೇಷ. ಇಲ್ಲಿ ಪ್ರಮುಖವಾಗಿ ತಾರುಣ್ಯದ ಕಾವು, ದಾಂಪತ್ಯ ಜೀವನ, ಪ್ರೇಮದ ಪರಿಪಕ್ವತೆಯನ್ನು ಪ್ರೀತಿಯ ವಿವಿಧ ಸ್ವರೂಪಗಳನ್ನು ಈ ಕೃತಿಯು ಪ್ರಕಟಿಸುತ್ತದೆ.

"ನಾಸಂತಿಗೆ ಹೋಗಿನ್ನಿ–ಆಕಿ ತಂದಿದ್ದಳೋ ಬೆಣ್ಣಿ
ಹಿಂಡು ಹೆಣ್ಣಿನಾಗರೆಯ ಸರಿ ಒಂದು ಸವಿಸಕ್ಕರಿಕಣ್ಣಿ"

(ಬೆಣ್ಣಿಯಾಕಿ–ನಲ್ವಾಡುಗಳು)

"ಎದಿಯ ತ್ವಾಟದಾಗ ಪ್ರೀತಿ ಬೀಜ ಸಸಿ
ಬಿಟ್ಟು ಬೆಳಿಯಲಾಕ
ಕಾಮನನ್ನು ಕಳಿಸ್ಯಾನ ದೇವತಾ
ನೀರು ಹನಿಸಲಾಕ"

(ನಲ್ವಾಡುಗಳು : ಮೊದಲು ನಮ್ಮ ನಮನಾ)

ಎಂದು ಕವಿ ತನ್ನ ಪ್ರೀತಿಯ ವಿವಿಧ ಛಾಯೆಗಳನ್ನು ತನ್ನ ಕವನದ ಮೂಲಕ ವ್ಯಕ್ತಪಡಿಸಿದ ರೀತಿ ಪದೇ ಪದೇ ಜನಪದ ನುಡಿಗಟ್ಟನ್ನು ನೆನಪಿಸುತ್ತದೆ. 'ವಿರಹಿಣಿ' ಮತ್ತು 'ನಲ್ವಾಡುಗಳು' ಎರಡೂ ಅತ್ಯಂತ ಶಕ್ತವಾದ ಗೀತೆಗಳನ್ನು ಒಳಗೊಂಡಿವೆ. 'ಗೀತದೊಳಗಿನ ಒಲವು ಯಾತರೊಳಗೂ ಇಲ್ಲ' ಎನ್ನುವ ಬೇಂದ್ರೆಯವರ ಮಾತಿನ ಸಾಕ್ಷಿಗಳಂತಿವೆ ಈ ಹಾಡುಗಳು.

ವಿರಹಿಣಿ ಕವನ ಸಂಕಲನ ಹೆಸರೇ ಸೂಚಿಸುವಂತೆ ವಿರಹಿಯೋರ್ವಳ ಬದುಕನ್ನು ಸಮರ್ಥವಾಗಿ ಚಿತ್ರಿಸುತ್ತದೆ. ಈ ಕವನಗಳಲ್ಲಿಯ ಭಾಷೆಯ ಒಡಪು ಗೇಯತೆಗಳಿಂದಾಗಿ ವಿರಹಿಣಿಯ ಭಾವಗಳು ಮನಸ್ಸನನ್ನು ತಟ್ಟುತ್ತದೆ. ವಿರಹಿಣಿಯ ಕವಿತೆಗಳಂತೆ ಭಾವ ಉತ್ಕಟತೆಯಿಂದ ಕೂಡಿದ್ದರೂ ಇಲ್ಲಿಯ ಕವಿತೆಗಳು ಹೆಚ್ಚು ನೈಜವಾಗಿವೆ. ಇವು ವಾಸ್ತವ ಜೀವನದ ತಳಹದಿಯಿಂದ ಕೂಡಿವೆ. ಮನೆಯಿಂದ

ದೀಪ ಬೆಳಗುವ ನಲ್ಲೆ ಮನೆಯ ಕತ್ತಲನ್ನು ಓಡಿಸಿ ಮನಸ್ಸಿನ ಕತ್ತಲನ್ನು ದೂರ ಮಾಡುತ್ತಾಳೆ. ಆ ಭಾವ ಇಲ್ಲಿ ಸುಂದರವಾಗಿ ಅಭಿವ್ಯಕ್ತಗೊಂಡಿದೆ.

ಕಾರಹುಣ್ಣಿಮೆ ಕವನ ಸಂಕಲನ ಪ್ರಕೃತಿ ಮತ್ತು ಕವಿಯ ನಡುವಿನ ಭಾವ ವಿನಿಮಯಕ್ಕೆ ಸಂಬಂಧಪಟ್ಟರೂ ಸಹ ಅಭಿವ್ಯಕ್ತಿ ವಿಧಾನದಲ್ಲಿ ಕವಿಯ ಅಂತಃಸತ್ವ, ಚೇತನಶಕ್ತಿ ಚೆನ್ನಾಗಿ ಗೋಚರಿಸಿದೆ. 'ಒಡನಾಡಿ' ಎಂಬ ಇಡಿ ಸಂಕಲನವೇ ಆನಂದಕಂದ ಅವರ ಆಶಾವಾದಿತ್ವದ ಒಂದು ಪ್ರತೀಕವೆನ್ನಬಹುದು. ಅವಿರತಯಜ್ಞ ಆನಂದರ ಸಾಧ್ಯತೆಗಳನ್ನು ಸೂಚಿಸುವ ಪದ್ಯ. ಆನಂದಕಂದರು ಕಾವ್ಯ ಬರೆಯುವುದರಲ್ಲಿಯೇ ತಮ್ಮ ಪ್ರಯತ್ನ ಮುಂದುವರೆಸಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಇನ್ನೂ ವಿಶಿಷ್ಟವಾದ ಕವನಗಳು ರಚನೆಯಾಗುತ್ತಿದ್ದವು.

ಉತ್ತರ ಕರ್ನಾಟಕದಲ್ಲಿ ಮಹತ್ತರವಾದ ಸಾಹಿತ್ಯ ಕೃಷಿಗೈದ ಆನಂದಕಂದರು ಬೇಂದ್ರೆಯವರಿಗೆ ಸಮಾನರಾದ ಸಹೃದಯ ಕವಿ. ಆನಂದಕಂದರು ಇಷ್ಟೆಲ್ಲಾ ಕವನ ರಚಿಸಿದರೂ ಅವರ ಕವನಗಳು ಇವತ್ತು ಪ್ರತಿಯೊಬ್ಬ ಜನಪದರು ಹಾಡುತ್ತಾರೆ. ಆದರೆ ಅದರ ರಚನೆಯನ್ನು ಮಾಡಿದ ಕರ್ತೃವಿನ ಹಿನ್ನಲೆ ಅವರಿಗೆ ಅರಿವಿಲ್ಲ. ಅಂದರೆ ಇವರ ಎಷ್ಟೋ ಪದ್ಯಗಳು ಹುಕ್ಕೇರಿ ಬಾಳಪ್ಪ ಹಾಡಿದ್ದರಿಂದ ಅವುಗಳೆಲ್ಲ ಹುಕ್ಕೇರಿ ಬಾಳಪ್ಪನ ಹಾಡುಗಳೇ ಎಂಬ ಪ್ರತೀತಿ ಜನಸಾಮಾನ್ಯರಲ್ಲಿದೆ. ಹೀಗಾಗಿ ಕವಿ ಗೌಣವಾಗಿ ಕವನ ಶ್ರೇಷ್ಠತೆಯನ್ನು ಪಡೆದುಕೊಂಡ ವಿಚಿತ್ರವಾದ ಅಂಶ ಕಂಡು ಬರುತ್ತದೆ. ಮತ್ತೊಂದು ಪ್ರಮುಖವಾದ ಅಂಶ ಇವರ ಕವನಗಳು. ಜನಪದ ಕವನಗಳೆಂದು ನಂಬಿದ್ದು ಸಹ ಕಂಡು ಬರುವುದರಿಂದ ಕವಿಯ ಹೆಸರು ಇಲ್ಲಿ ಮುಖ್ಯವಾಗಿ ಗೋಚರಿಸುವುದಿಲ್ಲ.

ಈಶ್ವರ ಸಣಕಲ್ಲ :

ಈಶ್ವರಚಂದ್ರ ಸಣಕಲ್ಲರು ಗೋಕಾಕ ತಾಲ್ಲೂಕಿನ ಯಾದವಾಡದಲ್ಲಿ ೧೯೦೯ ಡಿಸೆಂಬರ್ ೨೦ ರಂದು ಜನಿಸಿದರು. ಜೀವನುದ್ದಕ್ಕೂ ಕಷ್ಟ ಕಾರ್ಪಣ್ಯಗಳನ್ನು ಕಾಣುತ್ತಲೇ ಜೀವನ ಯಾತ್ರೆಯನ್ನು ಮುಗಿಸಿದ ಕವಿ ಜೀವ ಸಣಕಲ್ಲರದು. ಸಣಕಲ್ಲರ ಒಟ್ಟು ಸಾಹಿತ್ಯದ ರಚನೆಯಲ್ಲಿ ಅವರ ಹೆಸರು ಅಜರಾಮರವಾದುದು ಅವರ ಕವಿತ್ವದಿಂದ ಮಾತ್ರ.

ಐದು-ಆರನೆಯ ವರ್ಗದಲ್ಲಿರುವಾಗಲೇ ಆರಂಭಗೊಂಡ ಸಣಕಲ್ಲರ ಕವನ ರಚನೆ ೧೯೭೬ ರ ವರೆಗೂ ಸಾಗಿ ಬಂದಿದೆ. ೧೯೩೧ ರಲ್ಲಿ ಇದಕ್ಕೂ ಮೊದಲು

[illegible]

[illegible]

[illegible]

[illegible]

[illegible]

ಅವರ ಕವನಗಳು ಅಲ್ಲಲ್ಲಿ ಪ್ರಕಟಗೊಂಡಿದ್ದರೂ ಪ್ರಬುದ್ಧ ಕರ್ನಾಟಕದ ಸಂಕ್ರಾಂತಿ ಸಂಚಿಕೆಯಲ್ಲಿ ಪ್ರಕಟವಾದ 'ಕೋರಿಕೆ' ಕವನದ ಮೂಲಕ ಸಾಹಿತ್ಯ ಲೋಕಕ್ಕೆ ಹೆಜ್ಜೆಯನ್ನಿಟ್ಟರು. ಒಂದು ಸಂಕಲನವೂ ಪ್ರಕಟವಾಗದೆ, ಒಂದು ಶುಭೋದಯದಲ್ಲಿ ಪ್ರಸಿದ್ಧಿ ತಂದು ಕೊಟ್ಟ ಈ ಕವನ ಅನಂತರ ಭಾರತದ ಅನ್ಯಭಾಷೆಗಳಿಗೂ ಅನುವಾದಗೊಂಡಿದೆ. ಇದರಿಂದ ಪ್ರೇರೇಪಿತರಾದ ಸಣಕಲ್ಲರು ಪ್ರಬುದ್ಧ ಕರ್ನಾಟಕ, ಜಯ ಕರ್ನಾಟಕ, ರಂಗಭೂಮಿ, ಸಮಾಜ, ಕಥಾಂಜಲಿ ಮುಂತಾದ ಪತ್ರಿಕೆಗಳಿಗೆ ನಿಯಮಿತವಾಗಿ ಬರೆಯತೊಡಗಿದರು.

ನಂತರದ ಕಾಲಾವಧಿಯಲ್ಲಿ ಸಣಕಲ್ಲ ೩ ಕವನ ಸಂಕಲನಗಳು ಪ್ರಕಟಗೊಂಡವು. ಅವರ ಮೊದಲ ಕವನ ಸಂಕಲನ 'ಕೋರಿಕೆ' ೪೯ ಕವನಗಳನ್ನೊಳಗೊಂಡಿದೆ. ಡಾ. ಪ.ಗು. ಹಳಕಟ್ಟಿಯವರು ಈ ಪುಸ್ತಕದ ಪ್ರಕಾಶಕರು. ೧೯೩೪ ರಲ್ಲಿ ಪ್ರಕಟವಾಯಿತು. ಎರಡನೆಯ ಕವನ ಸಂಕಲನ 'ಬಟ್ಟೆ' ೩೯ ಕವನಗಳನ್ನೊಳಗೊಂಡ ೧೯೬೨ ರಲ್ಲಿ ಕೃಷ್ಣಾ ತೀರದ ಸೌರಭ ಮಾಲೆಯ ಪ್ರಥಮ ಪುಷ್ಪವಾಗಿ ಪ್ರಕಟವಾಯಿತು. ಈ ಕವನ ಸಂಕಲನ ೧೯೬೨, ೧೯೬೪ ರಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವರ್ಗಗಳಿಗೆ ಪಠ್ಯವಾಗಿ ಒಟ್ಟು ೩ ಮುದ್ರಣ ಕಂಡಿತು. ಮೂರನೆಯ ಹುಲ್ಕಲ್ಗೆ ಕಿಡಿ ವಿಶೇಷವಾಗಿ 'ಬಟ್ಟೆ' ಸಂಕಲನದಿಂದ ಕೆಲವನ್ನು ಮಾತ್ರ ಕೋರಿಕೆ ಸಂಕಲನದಿಂದ ಆಯ್ದುಕೊಳ್ಳಲಾದ ಒಟ್ಟು ೧೯ ಕವನಗಳ ಸಂಗ್ರಹ. ೧೯೮೦ ರಲ್ಲಿ ಧಾರವಾಡದ 'ಜಾಗ್ರತ ಭಾರತ'ದಿಂದ ಪ್ರಕಟವಾಗಿದೆ.

ಸಣಕಲ್ಲರ ಪ್ರಕಟಿತ ಕವನಗಳಿಗಿಂತ ಅವರ ಅಪ್ರಕಟಿತ ಕವನಗಳ ಸಂಖ್ಯೆ ಅಧಿಕವಾಗಿದೆ. ಪ್ರಕಟಿತಕವನಗಳ ಒಟ್ಟು ೮೮ ರಷ್ಟಾದರೆ (ಸಂಕಲನಗಳಲ್ಲಿರುವ ಮಾತ್ರ) ಅಪ್ರಕಟಿತ ಕವನಗಳ ಸಂಖ್ಯೆ ೧೪೦ ಇದೆ. ಒಟ್ಟು ಕವನಗಳ ಸಂಖ್ಯೆ ೨೨೮ ರಷ್ಟಾಗುತ್ತದೆ. ಅಪ್ರಕಟಿತ ಕವನಗಳನ್ನು ಸಣಕಲ್ಲರ ನಾಲ್ಕು ಸಂಕಲನವಾಗುವಂತೆ ಹೊಂದಿಸಿದ್ದಾರೆ. ಅವುಗಳಿಗೆ ಪ್ರೇಮ ದರ್ಶನ, ಲೋಕದರ್ಶನ, ಶರಣದರ್ಶನ ಮತ್ತು ವಿಶ್ವದರ್ಶನ ಎಂಬುದಾಗಿ ಶೀರ್ಷಿಕೆ ಸೂಚಿಸಿದ್ದಾರೆ. ಇದನ್ನು ಗಮನಿಸಿದರೆ ಸಣಕಲ್ಲರದು ಎರಡು ಪ್ರಕಟಿತ ನಾಲ್ಕು ಅಪ್ರಕಟಿತ ಒಟ್ಟು ಆರು ಸಂಕಲನಗಳಾಗುತ್ತದೆ.

ಸಣಕಲ್ಲರ ಕಾವ್ಯ ಚಿಗುರೊಡೆದದ್ದು ಅವಧಿಯು ನವೋದಯ ಪಂಥದಲ್ಲಿಯೇ. ರಾಷ್ಟ್ರೀಯ ಜೀವನ ಸಂಘರ್ಷಗಳ ನಡುವೆ ತಮ್ಮ ಭಾವನೆಗಳನ್ನು ಕವಿತೆಗಳಲ್ಲಿ ರಚಿಸಿದ್ದಾರೆ.

"ವಿಸ್ತಾರ ಪಂಜರವು ನಮ್ಮದದುರ್ಗ
ಅದೆಯಾಯ್ತು ನಮಗೊಂದು ರಂಜಿಸುವ ಸ್ವರ್ಗ
ಅಲ್ಲೆ ನಿತೋ ಹಕ್ಕಿಗಳು
ಹರಡುತಲಿ ಪಕ್ಕಗಳ
ಸುತ್ತಲೂ ಹಿಂಡಾಗಿ ಹಾರುತಿರುತಿಹವು
ಬಿತ್ತರದ ಹಾಡುಗಳ ಹಾಡುತಿರುತಿಹವು"

(ಹಕ್ಕಿಯ ಹಾಡು)

ಭಾರತೀಯ ಸಾಹಿತ್ಯ ಚಳವಳಿಯ ಸ್ಥೂಲ ಚಿತ್ರಣವನ್ನು ಈ ಕವನ ಬಿಂಬಿಸುತ್ತದೆ.

"ಜಗವೆಲ್ಲ ನಗುತಿರಲಿ
ಜಗದಳವೂ ನನಗಿರಲಿ
ನಾ ನಳಲು ಜಗವೆನ್ನನೆತ್ತಿಕೊಳದೇ?"

(ಕೋರಿಕೆ – ಪ್ರ.೧)

"ಕವಿ ಬೇಂದ್ರೆಯವರು ಸಣಕಲ್ಲರ ಮೊದಲ ಸಂಕಲನ 'ಕೋರಿಕೆ' ಗೆ ಮುನ್ನುಡಿ ಬರೆಯುತ್ತ, ಶ್ರೀ ಈಶ್ವರ ಸಣಕಲ್ಲ ಇವರು ಹಳ್ಳಿಯಲ್ಲಿ ಹುಟ್ಟಿ ಬೆಳೆದವರು. ಬಯಕೆಯಿದ್ದರೂ ಬೇಕಾದಷ್ಟು ಶಿಕ್ಷಣ ಪಡೆಯದವರು. ಬೇಡವಾಗಿದ್ದರೂ ಬಡತನದ ಬಲೆಯ ಹೊರಗೆ ಕಾಲಿಕ್ಕಲು ಬಾರದವರು ಹೀಗೆ ಹುಟ್ಟಿನಿಂದ "ಬಡವರಾದರೂ ಕೆಚ್ಚಿನಿಂದ ಕವಿಗಳು" ಎಂದು ಸರಿಯಾಗಿಯೇ ಗುರುತಿಸಿದ್ದಾರೆ."[೧೯] ಕವಿ ಸಣಕಲ್ಲರ ಕವನಗಳಲ್ಲಿಯ ಕಲ್ಪನೆಗಳು ಚಿತ್ತಾಕರ್ಷಕವಾದವುಗಳಾಗಿವೆ.

"ನೋಡಿದೊಡೆ ಮೂಳೆಗಳ
ಹಂದರದಮೈಯು!
ಒಳಗಿನಾತ್ಮದ ಗುಡುಗಿ
ಗದರುತಿದೆ ಮಹಿಯು!"

(ಬಟ್ಟೆ – ಗಾಂಧಿ ಮಹಾತ್ಮನು, ಪು. ೫೬–೫೯)

ಗಾಂಧಿ ಮಹಾತ್ಮನ ಭವ್ಯ ವ್ಯಕ್ತಿತ್ವದ ಆಕರ್ಷಕ ಚಿತ್ರಣವನ್ನು ಈ ಕವನದಲ್ಲಿ ಪ್ರತಿಧ್ವನಿಸುತ್ತದೆ. ನವೋದಯ ಕಾವ್ಯ ಹಂದರದಲ್ಲಿಯೇ ತನ್ನ ಕವನಗಳಿಗೆ ಭಾವಗಳಿಗೆ

ರೂಪುಕೊಟ್ಟ ಪ್ರತಿಭಾವಂತ ಕವಿ ಈಶ್ವರ ಸಣಕಲ್ಲ. ತಾವು ಕಂಡುಂಡ ಜೀವನದ ಅನುಭವಗಳನ್ನು ಕಾವ್ಯ ಸೃಷ್ಟಿಯ ಮೂಲಕ ಕಾವ್ಯ –ಜೀವನ ಒಂದೇ ಎಂದು ಭಾವಿಸಿ, ಉದಾತ್ತ ಮಾನವತೆಯನ್ನು ಜೀವಂತ ರಸ ಕವಿತೆ ಎಂಬುದಾಗಿ ನಂಬುತ್ತಾರೆ.

ಬಾಳೇಶ ಲಕ್ಷೆಟ್ಟಿ :

ಬಾಳೇಶ ಲಕ್ಷೆಟ್ಟಿಯವರು 'ಭಾಗ್ಯೋದಯ', 'ಧ್ಯೇಯವಾದಿ', 'ಎಸಳು', 'ಪುಣ್ಯಸ್ಮೃತಿ', 'ಸೇವೆಸ್ಮರಣೆ', 'ಯಕ್ಷಪ್ರಶ್ನೆ', 'ಗಾಳಿಪಟ', 'ಜಗಕ್ಕೆಲ ಹಬ್ಬೇತಿ ನಿನಿಕೀರ್ತಿ' ಮುಂತಾದ ಕವನ ಸಂಕಲನದ ಮೂಲಕ ಗಮನ ಸೆಳೆದ ಅಪರೂಪ ಕವಿ. ಜನಪದ ಶೈಲಿಯಲ್ಲಿ ತಮ್ಮ ಕಾವ್ಯ ರಚನೆಯ ಕೃಷಿಯನ್ನು ಮಾಡುತ್ತಿರುವ ಬಾಳೇಶ ಅವರು ಹಲವು ಕವನ ಸಂಕಲನದಲ್ಲಿ ಭಕ್ತಿಯ ತೀವ್ರತೆ, ನಿಸರ್ಗಪ್ರಜ್ಞೆ, ವೈಚಾರಿಕ ಚಿಂತನೆ, ದಾಂಪತ್ಯ ಜೀವನದ ಹಲವು ಮಜಲುಗಳನ್ನು ಅಭಿವ್ಯಕ್ತಿಸಿದ್ದಾರೆ. ಬದುಕಿನ ಭವನೆಯ ಒಡನಾಟದಲ್ಲಿ ಕವಿ ಗಂಭೀರವಾಗಿ ಚಿಂತಿಸಿದ್ದಾನೆ. ಮತ್ತೇ ಅವುಗಳಿಂದ ಹೊರಬಂದು ಹೊಸಮಾರ್ಗವನ್ನು ಹುಡುಕಿಕೊಂಡಿದ್ದಾನೆ. ಕವಿ ತನ್ನ ಸುತ್ತಲಿನ ಪರಿಸರ ಅಲ್ಲಿಯ ಬದುಕಿಗೆ ತೆರೆದಿಟ್ಟ ಮನಸ್ಸು, ಅಲ್ಲಿನ ಏರಿಳಿತ, ನೋವು–ನಲಿವುಗಳಿಗೆ ತಟ್ಟನೆ ಸ್ಪಂದಿಸುತ್ತವೆ.

ಪ್ರಕೃತಿಯಲ್ಲಿ ಒಂದಾಗಿರುವ ನಿಸರ್ಗದ ಪರಿಕಲ್ಪನೆಯನ್ನು ಕವಿ ತನ್ನ ಕವನದ ಮೂಲಕ ಈ ರೀತಿಯಲ್ಲಿ ಸೆರೆ ಹಿಡಿದಿದ್ದಾನೆ.

"ಸೂರ್ಯನ ಬಿಂಬದ ಹೊಳೆಯುವ ಕಣ್ಣೊಂದು
ಭೂಮಿ ಮ್ಯಾಲ ಬಿದ್ದ್ಹರ
ಕಣವಿ ಕಂದರ ಸುತ್ತಿ ಹಳ್ಳಕೊಳ್ಳಗಳಲ್ಲಿ
ಬೆಳಕಿನ ಮಳೆಯೇ ಸುರದದ!"
(ಜಗಕ್ಕೆಲ್ಲ ಹಬ್ಬೇತಿ ನಿನಕೀರ್ತಿ–ಸೂರ್ಯಬಿಂಬದ
ಹೊಳೆಯುವ ಕಣ್ಣು, ಪುಟ–೧)

ಎಂದು ಪ್ರಕೃತಿಯ ದರ್ಶನವನ್ನು ಸುಂದರವಾದ ಕಾವ್ಯಾಭಿವ್ಯಕ್ತಿಯಲ್ಲಿ ಕಟ್ಟಿಕೊಡುತ್ತಾನೆ ಕವಿ.

"ನನ್ನ ತಲೆ ತುಂಬ ಗೆದ್ದಲಿಗಳೆ ತುಂಬಿ
ನೇರ ಮೆದಳಿಗೂ ಹೊಕ್ಕು ಮೇಯುತಿರಲು

ನೀ ಮೂಡಿ ಬಂದೆ

ಹಚ್ಚಹಸುರಿನ ಪೈರು ಪಚ್ಚೆಯಾಗಿ"

(ಗಾಳಿಪಟ –ಹೃದಯಮಿಡಿತ, ಪುಟ–೧೨)

ತನ್ನ ಹೃದಯದ ಮಿಡಿತದಿಂದ ಕವಿ ತನ್ನಲ್ಲಿ ಉಂಟಾದ ಮಾನಸಿಕ ಯಾತನೆ, ದ್ವಂದ್ವ, ಆಶಾವಾದದ ಜೀವಂತಿಕೆಯ ಸತ್ವ ಮುಂತಾದವುಗಳು ಹರಳುಗಟ್ಟಿ ನಿಂತಿವೆ. ಬದುಕಿನ ಜಡತೆಯನ್ನು ರೂಪಾತ್ಮಕವಾಗಿ ಈ ಕವನದ ಮೂಲಕ ಬಾಳೇಶ ಲಕ್ಷೆಟ್ಟಿಯವರು ಹೆಣದಿದ್ದಾರೆ. ಅಲ್ಲಿ ನೋವು–ನಲಿವು, ಸುಖ–ದುಃಖ ಮುಂತಾದವುಗಳು ಭಾವ ತೀವ್ರತೆಯಲ್ಲಿ ಕಂಡು ಬಂದಿವೆ.

ಜೀವನಾದರ್ಶದ 'ಗಾಳಿಪಟ' ಹಾರಿಬಿಟ್ಟ ಕವಿ ಅದು ಧೂಳಿಪಟವಾಗದಿರಲೆಂದು 'ಮೈಯೆಲ್ಲ ಕಣ್ಣಾರೆ ಕನಸುಗಳಿಗಿಕ್ಕಿ ಕೊಳ್ಳಿ, ಬಾನಿಗೇರಿಸಿ...... ಹೃದಯ ಹಸಿರುಗೊಳಿಸಿ ಸಂಭ್ರಮ ಪಡುತ್ತಿದ್ದಾಗಲೇ ಅದು ಹದ್ದಿಗಾಹುತಿಯಾಗಿ ಬಿದ್ದು ಹೋಗುವುದನ್ನು ಕಂಡು ಚಡಪಡಿಸುತ್ತಾನೆ. ರೋಷದಿಂದ ಕುದಿಯುತ್ತಾನೆ. ಬದುಕಿನ ಇಂಥ ಹಲವಾರು ವೈಪರಿತ್ಯಗಳಿಂದ ಕವಿ ಮನಸ್ಸು ಭ್ರಮೆ ನಿರಸನಗೊಂಡಿದೆ. ಹೀಗೆ ಬಾಳೇಶ ಲಕ್ಷೆಟ್ಟಿಯವರು ತಮ್ಮದೇ ಆದ ಒಂದು ವಿಶಿಷ್ಟ ಲಯದಲ್ಲಿ ಕಾವ್ಯ ರಚಿಸಿ ಹೆಸರು ಮಾಡಿದವರು ಅವರ 'ಜಗಕ್ಕೆಲ್ಲ ಹಬ್ಬೇತಿ ನಿನಕೀರ್ತಿ' ಯೊಳಗೆ ಭಕ್ತಿಯ ಕೌಂಕರ್ಯವಿದೆ. ಶಿವಶಕ್ತಿಯ ಮಾಧುರ್ಯ ಅಡಗಿದೆ. ಪ್ರತಿ ಸಾಲಿನಲ್ಲಿಯೂ ಹೃದಯ ನಿವೇದನೆಯ ನಂದನವಿದೆ. ತನ್ನನ್ನೇ ಸಮರ್ಪಿಸಿಕೊಂಡ ಚೆಂದನವಿದೆ. ಲಕ್ಷೆಟ್ಟಿಯವರ ಕಾವ್ಯ ಜೀವನದ ಮೇಲೆ ಬಾಳಯ್ಯನವರ ಶ್ರೀರಕ್ಷೆ ಮತ್ತೆ ಮೂಡಿ ಬಂದಂತಾಗಿದೆ.

ಶ್ರೀರಾಮ ಇಟ್ಟಣ್ಣವರ :

ಜಾನಪದ ಸೊಗಡನ್ನು ಭಾಷೆಯ ಮೂಲಕ ಅಭಿವ್ಯಕ್ತಿಸುವ ವಿಶಿಷ್ಟ ಲಯಗಾರಿಕೆಯಿಂದ ಭಾಷೆಯ ಅಂದವನ್ನು ಹೆಚ್ಚಿಸಿದ ಅಪರೂಪದ ಕವಿ. 'ಹೋಳಿ ಸಾಲ ಬಳ್ಳಿ' ಎಂಬ ಕವನದ ಸ್ಥಾಯೀಭಾವ ಆಲಮಟ್ಟಿ ಆಣೆಕಟ್ಟಿನಿಂದ ನಿರಾಶ್ರಿತರಾದ ಜನರ ನೋವು, ಬಡತನ ಹಾಗೂ ಸಂಬಂಧಗಳ ಬೆಸುಗೆಯನ್ನು ಅದ್ಭುತವಾಗಿ ಈ ಕವನದ ಸಂಕಲನದಲ್ಲಿ ಚಿತ್ರಿಸಿದ್ದಾರೆ.

ಶ್ರೀಯುತರು 'ನೋಡು ಶಿಶುಗೀತೆ' ಎಂಬ ಕವನ ಸಂಕಲನವನ್ನು ಬರೆದಿದ್ದಾರೆ. ಈ ಸಂಕಲನ ಮೂಲಕ ಮಕ್ಕಳ ಮಾನಸಿಕ ಬೆಳವಣಿಗೆಯ ವಿವಿಧ ಆಯಾಮಗಳನ್ನು

[illegible]

[illegible]

[illegible]

[illegible]

[illegible]

[illegible]

ಸೋದಾರಣವಾಗಿ ಕಟ್ಟಿಕೊಟ್ಟಿದ್ದಾರೆ. 'ಹಾಡೋಣ ಬಾರ' ಕವನ ಸಂಕಲನ ಮೂಲಕ ನವೋದಯ ದಾಟಿಯು ಪ್ರೇಮದ ಹಾಡುಗಳನ್ನು ಸಹೃದಯರಿಗೆ ವಿಶಿಷ್ಟ ರಸಾನಂದವನ್ನುಂಟು ಮಾಡುವಂತೆ ಚಿತ್ರಿಸಿದ್ದಾರೆ. ಇವುಗಳಷ್ಟೇ ಅಲ್ಲದೇ 'ಗಾಳಿ ಎಳ್ಳತೈತ್ತಿ' 'ಹೊತ್ತು ಮುಳುಗುವರು' ಮುಂತಾದ ಕವಿತಾ ಸಂಕಲನಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಕೊಡುಗೆ ನೀಡಿದ್ದಾರೆ. ನವೋದಯದ ದಟ್ಟವಾದ ಪ್ರಭಾವ ಇವರ ಕಾವ್ಯದ ಮೇಲೆ ಬೀರಿದೆ. ಆನಂದಕಂದ ಅವರ ದಟ್ಟವಾದ ಪ್ರಭಾವಕ್ಕೆ ಒಳಗಾಗಿ ಕಾವ್ಯ ರಚನೆ ಮಾಡಿದ ಕವಿ.

ಮಹಾಂತೇಶ ಕಣಗಲಿ :

ಕಣಗಲಿಯವರು ಪ್ರಮುಖವಾಗಿ ಎರಡು ಕವನ ಸಂಕಲನಗಳನ್ನು ರಚಿಸಿದ್ದಾರೆ. 'ಮಿನುಗುತಾರೆ' ಮತ್ತು 'ಜೋಳಮುತ್ತು' ಇವರ ಕವನಗಳಲ್ಲಿ ನಿಸರ್ಗ ಪ್ರೀತಿ ಹಾಗೂ ಸಾಮಾಜಿಕ ದೃಷ್ಟಿ ಎರಡೂ ಇವರ ಕಾವ್ಯ ರಚನೆಯ ಪ್ರೇರಣೆಗಳಾಗಿವೆ. ನಿಸರ್ಗದಿಂದ ಬಾಳಿಗೆ ಕಾಂತಿಯನ್ನು ದೊರೆಯುತ್ತದೆ ಎಂಬುದು ಕವಿಯ ಆಶಯವಾಗಿದೆ. ಮುಗಿಲು ನೆಲವನ್ನಪ್ಪಿ ಸಲಿಲದಲ್ಲಿ ಚಲಿಸಿ ಜೀವತಂತು ಮಿಡಿವ 'ಚೇತೋಹಾರಿ ಮಳೆ' ಯ ಬಗ್ಗೆ ಕವಿಯ ಅನಿಸಿಕೆ ಹೀಗಿದೆ.

"ಜಗದ ಮೊರೆ ಕೇಳಿತು
ಶಿವನ ಕಣ್ಣು ತೆರೆಯಿತು
ಜಡೆಯ ಗಂಗೆ ಇಳಿದಳು
ನೆಲದೊಳೆಲ್ಲ ಸುಳಿದಳು"

(ಜೋಳ-ಮುತ್ತು-ಚೇತೋ ಹಾರಿಮಳೆ, ಪುಟ-೩)

'ಶ್ರಾವಣ ದೈಸಿರಿಯಲ್ಲಿ ನವವಧುವಾಗಿ ಮೆರೆವ ವಸುಂಧರೆಯನ್ನು ಬಗೆದುಂಬಿ ಬಣ್ಣಿಸುತ್ತಾರೆ'. ಕಲ್ಪತರು ಕಲ್ಯಾಣಿ ತೆಂಗಿನ ಗಿಡದ ಚಿತ್ರವನ್ನು ಬರೆಯುವಲ್ಲಿ ಸ್ವಲ್ಪ ಮಟ್ಟಿಗೆ ಹೊಸತನವಿದೆ. ಮಾನವ 'ನಿಸರ್ಗ ಶಿಶು' ವೆಂಬುದನ್ನು ಮರೆತರೆ ಅವನು 'ದಾನವ' ನಾಗುತ್ತಾನೆಂದು ಕವಿಯ ಭಾವನೆ.

'ಹೀಗೆ ಹೂವುಗಳ ಜಾದೂ' ಎಂಬ ಕವನದಲ್ಲಿ ಸೊಗಸಾಗಿ ಚಿತ್ರಿತವಾಗಿದೆ.

"ಈ ಹೂಗಳದಾವಂತ
ಈ ಭೂಮಿ ಇರಲಿಕ್ಕೊಂದು
ಸೊಗಸಿನ ಸೀಮಿ;

ಇಲ್ಲದಿದ್ದರೆ ಯಾರು ಇರತಿದ್ದರು.

ಈ ನೆಲದ ಮ್ಯಾಲೆ?

ಅದೊಂದು ಬಂಜರು ಭೂಮಿ"

(ಜೋಳ-ಮುತ್ತು, ಹೂವುಗಳ ಜಾದೂ, ಪು-೧೧)

ಇವರ ಜೋಳ-ಮುತ್ತು ಕವನದಲ್ಲಿ ವಾಸ್ತವತೆಯ ಭಾವನೆಗಳೊಂದಿಗೆ ಸಮೀಕರಿಸಿ ಕವನ ರಚಿಸಿದ್ದಾರೆ. ಆಶಾವಾದಿತ್ವವನ್ನು ಈ ಕವನದಲ್ಲಿ ಮೆರೆದಿದ್ದಾರೆ.

ಈ ರೀತಿಯಲ್ಲಿ ಮಹಾಂತೇಶ ಕಣಗಲಿಯವರ ಕವನಗಳು ಒಂದು ಬಗೆಯ ವಾಸ್ತವ ಪ್ರಜ್ಞೆ, ಸಾಮಾಜಿಕ ಕಳಕಳಿ ಜಾಗೃತವಾಗಿ ಇವರ ಕೆಲವು ಕವನಗಳಲ್ಲಿ ಟೀಕೆ, ವಿಡಂಬನೆ ಮುಂತಾದವುಗಳು ಓದುಗರ ಗಮನವನ್ನು ಸೆಳೆಯುತ್ತವೆ.

ಹ. ಶಿ. ಬೈರನಟ್ಟಿ :

ಹ.ಶಿ.ಬೈರನಟ್ಟಿಯವರು ಗೋಕಾಕ ತಾಲೂಕಿನ ಕುಲಗೋಡದವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಸಿದ್ಧಹಸ್ತರು. 'ವರ್ತಮಾನ' ಇವರ ಉತ್ತಮ ಕವನ ಸಂಕಲನ 'ಹಾಸ್ಯ ಲೇಖಕ' ರೇಂದೇ ಪ್ರಸಿದ್ಧರು.

ಡಾ. ಎಸ್. ಬಿ. ತೋಟದ :

ಎಸ್. ಬಿ. ತೋಟದವರು 'ಭಾವತರಂಗಿಣಿ' ಕಾವ್ಯ ರಚಿಸಿದ್ದಾರೆ. ಸಾಹಿತ್ಯದ ಇತರೆ ಕ್ಷೇತ್ರಗಳಲ್ಲೂ ಸಿದ್ಧಹಸ್ತರು.

ಹನಮಂತರಾವ್ ಬಿ. ನಾಗಪ್ಪಗೋಳ :

ಇವರ 'ಪ್ರೀತಿಯಿರಲಿ ಬಾಳ ತುಂಬ' ಕವನ ಸಂಕಲನದಲ್ಲಿ ೫೦ ಕವನಗಳಿವೆ. ಅವು ನಾಡು-ನುಡಿಗಳ ಅಭಿಮಾನವನ್ನು ತುಂಬಿಕೊಂಡು ನಿಸರ್ಗದ ಚೆಲವು-ಒಲವು ವನ್ನು ಸ್ಪರ್ಶಿಸುತ್ತಾ, ಮಾನವನ ಕ್ರಿಯಾಶೀಲತೆಯ ಮತ್ತೊಂದು ಮುಖ್ಯ ಅಂಶವಾದ ಪ್ರೀತಿಯನ್ನು ಕವಿ ತನ್ನ ಬಾಳಿನ ಹಲವು ಕಷ್ಟ-ನಷ್ಟಗಳಲ್ಲಿ ಹೇಗೆ ಗ್ರಹಿಸಿದ್ದಾನೆ ಎಂಬುದಕ್ಕೆ ಈ ಕವನ ಸಂಕಲನ ಉತ್ತಮ ಉದಾಹರಣೆಯಾಗಿದೆ.

"ನಿನಗಾಗಿ ನಿತ್ಯ ಹಂಬಲಿಸಿ

ಜೀವ ಬತ್ತಿ ಹೋಗಿದೆ

ನಿನಗಾಗಿ ಕೊರಗಿಕನಲಿ

ಬಾಳು ಬೆಂದು ಬಾಡಿದೆ"

(ಪ್ರೀತಿಯಿರಲಿ ಬಾಳ ತುಂಬ-ಕರುಣೆಸು, ಪು- ೨)

ಎಂದು ಆ ದೇವರಲ್ಲಿ ಮೊರೆಯಿಡುತಾ ತಾನು ನೆನಿಸಿಕೊಳ್ಳುವ ರೀತಿ ಅದ್ಭುತವಾಗಿದೆ. ಪ್ರೀತಿಯ ಉತ್ಕಟವಾದ ಭಾವ ಇವರಲ್ಲಿ ಹೆಚ್ಚಾಗಿ ಕಂಡು ಬಂದಿದೆ. ಅವುಗಳನ್ನು ಈ ರೀತಿಯಲ್ಲಿ ವ್ಯಕ್ತಪಡಿಸಿದ್ದಾರೆ.

"ಮುಸುಕು ತೆರೆದು ಒಮ್ಮೆನೋಡು

ನಾನು ಯಾರು ಅಂತನೀ

ನಾನೆ ನೀನು ನೀನೆ ನಾನು

ಭಯವು ಏಕೆ ಹೇಳು ನೀ"

(ಪ್ರೀತಿಯಿರಲಿ ಬಾಳತುಂಬ-ಮುಸುಕು ಪು.-೪)

ಪ್ರೀತಿಯ ಸೌಂದರ್ಯವನ್ನು ಕವಿ ಓದುಗರಿಗೆ ಮನಸ್ಸಿನ ಮೇಲೆ ಅಚ್ಚಾಗುವಂತೆ ಚಿತ್ರಿಸಿದ್ದಾನೆ. ಅವನ ಒಲುಮೆಯ ಸಿರಿ ಸೊಬಗನ್ನು ಬಾಯಿ ತುಂಬಾ ಕೊಂಡಾಡಿದ್ದಾನೆ.

"ಯಾವ ಸೃಷ್ಟಿಕರ್ತ ನಿನ್ನ ಹೆಣೆದಿಟ್ಟ?

ಚೆಲುವು ಉಕ್ಕಿ ಹರಿದಿದೆ

ಯಾವ ಶಬ್ದಕರ್ತ ನಿನ್ನ ಬರೆದಿಟ್ಟ?

ಒಲವು ಮೂಡಿ ಹಾಡಿದೆ"

(ಪ್ರೀತಿಯಿರಲಿ ಬಾಳ ತುಂಬಾ -ಸೌಂದರ್ಯ, ಪು. ೯)

ಎನ್ನುತ ಕವಿ ತನ್ನನು ತಾನೇ ಒಂದು ಭಾವಗೀತೆಯಲ್ಲಿ ದುಡಿಸಿಕೊಂಡು ರಾಗರೀತಿಯಲ್ಲಿ ವರ್ಣಿಸಿದ್ದಾನೆ. ಇದು ಭಾವ ಬಂಧನದ ಭಾವನೆಯನ್ನು ಅಧಿಕೃತವಾಗಿ ಕವಿಯ ಭಾವನೆಯಿಂದ ಹೊರಹೊಮ್ಮಿದ ಭಾವಗೀತೆಯ ವಿಶಿಷ್ಟ ದಾಟಿಯಲ್ಲಿ ಚಿತ್ರವಾಗಿ ಕಂಡು ಬಂದಿದೆ. ಮನುಷ್ಯ ಮನುಷ್ಯನ ಸಂಬಂಧದ ಭಾವನೆಯ ಬೆಸುಗೆಯನ್ನು ಕವಿ ತನ್ನ ಕವನದ ಮೂಲಕ ಹೊರಸೂಸುತ್ತಾ ನಾದಲಯದಿಂದ ಅರ್ಥದ ನೆಲೆಗೆ ನಮ್ಮನ್ನು ಕೊಂಡ್ಯೈದು ನಿಲ್ಲಿಸುತ್ತಾನೆ.

"ನಿನ್ನೆದೆಯ ಸಾಗರದಲ್ಲಿ
ನೂರೆಂಟು ಅಬ್ಬರ
ಪುಟಿದೇಳುವಾಗ
ತಂಗಾಳಿಯಾಗಿ ತೀಡುವ ಆಸೆ"

(ಪ್ರೀತಿಯಿರಲಿ ಬಾಳ ತುಂಬಾ – ಆಸೆ, ಪು–೪೭)

ಇಂಥ ನೂರಾರು ಆಸೆಗಳನ್ನು ಇಟ್ಟುಕೊಂಡ ಪ್ರೀತಿಯ ದೋಣಿಯಲ್ಲಿ ಸಂಚರಿಸುತ್ತಾ ದಡ ಸೇರುವ ಬಯಕೆಯನ್ನು ಕವಿ ಚೆನ್ನಾಗಿ ಬಿಂಬಿಸಿದ್ದಾನೆ. ಸುಖ-ದುಃಖದಲ್ಲಿಯ ಸಮಪಾಲನ್ನು ತನ್ನವಳಿಗೆ ಕೊಟ್ಟಿದ್ದಾರೆ.

"ನಿನ್ನ ಮನವು ಕಲ್ಲು ಬಂಡೆ
ನನ್ನ ಮನವು ಬೆಣ್ಣೆಯುಂಡೆ
ನೀನೆ ಜೀವ ಎಂದುಕೊಂಡೆ
ಪ್ರೇಮ ಪ್ರೀತಿ ನಂಬಿಕೊಂಡೆ"

(ಪ್ರೀತಿಯಿರಲಿ ಬಾಳ ತುಂಬ –ವೇದನೆ ಪು. ೨೦)

ಮನಸ್ಸಿನ ದ್ವಂದ್ವಗಳನ್ನು ತಳಮಳಗಳನ್ನು ಸುಂದರವಾದ ಒಂದು ಭಾವಗೀತಾತ್ಮಕ ಮಾದರಿಯಲ್ಲಿ ಹನಮಂತ ನಾಗಪ್ಪಗೋಳ ಅವರು ಚರ್ಚಿಸಿದ್ದಾರೆ. ಗೋಕಾವಿ ನಾಡಿನಲ್ಲಿ ಆನಂದಕಂದರನ್ನು ಬಿಟ್ಟರೆ ಇಷ್ಟೊಂದು ಮಧುರಗೀತ ರಚನೆ ಬೇರೆ ಯಾವ ಕವಿಯಿಂದಲೂ ಬಂದಿಲ್ಲ ಎಂಬುದು ಇವರ ಕವನ ಸಂಕಲನಗಳಿಂದ ಅರ್ಥವಾಗುತ್ತದೆ.

೨. ಪ್ರಗತಿಶೀಲ ಪಂಥದ ಕವಿಗಳು :

ಹೊಸಗನ್ನಡದ ಸಾಹಿತ್ಯ ಪ್ರಕಾರಗಳಲ್ಲಿ ಪ್ರಗತಿಶೀಲ ಸಾಹಿತ್ಯ ಪ್ರಕಾರವೂ ಒಂದಾಗಿದೆ. ಇದು ತನ್ನ ಸಾಂಸ್ಕೃತಿಕ ಕೊಡುಗೆಯನ್ನು ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ನೀಡಿದೆ. ಪ್ರಗತಿಶೀಲ ಸಾಹಿತ್ಯ ಎಂದರೆ ಪ್ರಗತಿಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಹಲವು ಸಾಮಾಜಿಕ ಕ್ರಾಂತಿಗಳಿಂದ ಒಡಮೂಡಿ ಬಂದ ಪ್ರಕಾರವಾಗಿದೆ. ಅವುಗಳಲ್ಲಿ ಶಿವಶರಣರ ಕ್ರಾಂತಿ, ಯುರೋಪ ಕ್ರಾಂತಿ ಈ ಸಾಹಿತ್ಯದ ಮೇಲೆ ಬಹಳಷ್ಟು ಪ್ರಭಾವ ಬೀರಿದ್ದು ಕಂಡು ಬರುತ್ತದೆ. ಮಾರ್ಕ್ಸವಾದದ ಭೂಮಿಕೆಯಲ್ಲಿ ಹಲವು ಹೊಸತನವನ್ನು ತನ್ನಲ್ಲಿ

ತುಂಬಿಕೊಳ್ಳುತ್ತಾ ಧೂಮಕೇತುವಿನ ಹಾಗೆ ಭರಾಟೆಯಲ್ಲಿ ಅರಳಿದ ಶ್ರೇಷ್ಠ ಸಾಹಿತ್ಯವಾಗಿದೆ. ಈ ಪ್ರಗತಿಶೀಲ ಸಾಹಿತ್ಯದ ಉದ್ದೇಶ ಸಾಮಾಜಿಕ ವಿಷಮತೆಯ ವಿರುದ್ಧ ಶೋಷಣೆ ವಿರುದ್ಧ ಭೂಮಾಲೀಕರು ಮತ್ತು ಬಂಡವಾಳಶಾಹಿಗಳ ವಿರುದ್ಧ ದುಡಿಯುತ್ತಿರುವ ಕಾರ್ಮಿಕರ ನೋವು-ನಲಿವುಗಳನ್ನು ತನ್ನಲ್ಲಿ ಗರ್ಭಿಸಿಕೊಂಡು ಧ್ವನಿ ಎತ್ತಿದ ಸಾಹಿತ್ಯವಾಗಿದೆ.

ಈ ಪ್ರಗತಿಶೀಲ ಸಾಹಿತ್ಯದ ಪಂಥದಲ್ಲಿ ಇಡೀ ನಾಡಿನಲ್ಲೇ ಮುಂಚೂಣಿಯಲ್ಲಿದ್ದವರು ಬಸವರಾಜ ಕಟ್ಟಿಮನಿಯವರು. ಇವರ ಪ್ರಭಾವ ಇನ್ನುಳಿದ ಆ ಪ್ರದೇಶದ ಬರಹಗಾರರ ಮೇಲೆ ಸಹಜಯುತವಾಗಿ ಬೀರಿತು. ಹೀಗಾಗಿ ಈ ಗೋಕಾಕ ಪರಿಸರದಲ್ಲಿ ಅನೇಕ ಕವಿಗಳು ಈ ಸಾಹಿತ್ಯ ಪಂಥದಲ್ಲಿ ಕಾಣಿಸಿಕೊಳ್ಳುತ್ತಾರೆ.

ಬಸವರಾಜ ಕಟ್ಟಿಮನಿ (೧೯೧೫-೧೯೮೯) :

ಕನ್ನಡ ಪ್ರಗತಿಶೀಲ ಸಾಹಿತ್ಯದಲ್ಲಿ ಅಚ್ಚಳಿಯದ ಹೆಜ್ಜೆ ಗುರುತುಗಳನ್ನು ಮೂಡಿಸಿದ ಬಸವರಾಜ ಕಟ್ಟಿಮನಿ ಹುಟ್ಟಿದ್ದು ಗೋಕಾಕ ತಾಲೂಕಿನ ಹತ್ತಾರು ಮನೆಗಳ ಚಿಕ್ಕ ಗ್ರಾಮ ಮಲಾ-ಮರಡಿಯಲ್ಲಿ ಕಟ್ಟಿಮನಿಯವರ ಮನೋಧರ್ಮ ಕುರಿತು ನಾಡಿನ ಹಿರಿಯ ಕವಿ ಎಂ. ಅಕ್ಬರ ಅಲಿ ಹೀಗೆ ಹೇಳುತ್ತಾರೆ.

"ಕೆಚ್ಚು ಕಲಿತನ ಮತಿ
ಬಿಚ್ಚು ಮುಗ್ಧಿಮಾತು -ಕಥಿ
ಸಾಧುವಿಗೆ
ಸಾಧು ಬಗೆ;
ಬಾದಿಪಗೆ ಬಿಚ್ಚು ಗತ್ತಿ!"[೨೦]

ಕಟ್ಟಿಮನಿಯವರು ಗದ್ಯ ಬರಹದಲ್ಲಿ ಸಾಧಿಸಿದ್ದನ್ನು ಕಾವ್ಯದಲ್ಲಿ ಹುಡುಕುವಂತಿಲ್ಲ. ಕಟ್ಟಿಮನಿಯವರು ೨ ಕವಿತಾ ಸಂಕಲನಗಳನ್ನು ರಚಿಸಿದ್ದಾರೆ. 'ಕಂಪೋಜಿಟರ್ ಮತ್ತು 'ಸ್ವತಂತ್ರವ್ವ' - ಈ ಎರಡು ಕವನ ಸಂಕಲನಗಳಲ್ಲಿ ಬಡತನ, ದಾರಿದ್ರ್ಯ, ಹಸಿವು ಕುರಿತು ಕವಿಯ ಪ್ರತಿಭಟನೆ ಪ್ರಗತಿಗೆ ವಿರುದ್ಧವಾಗಿರುವ ವ್ಯವಸ್ಥೆಯ ವಿರುದ್ಧ ಕೆಂಡ ಕಾರುವ ಗದ್ಯ ಶೈಲಿಯ ಪದ್ಯಗಳು

“ಕುಡುಗೋಲು ಕಸಗೊಂಡು
ಧನ್ಯಾನುಂಗಿದಾನ
ನನಕೈಯಾಗೇನು ಈಗ ಉಳಿದಿಲ್ಲ”

(ಕಂಪೋಜಿಟರ್ ಪು. ೧೧)

ಕುಡುಗೋಲು ಶ್ರಮಿಕರ ಅಸ್ತ್ರ. ಅಂತಹ ಕುಡಗೋಲನ್ನು ನುಂಗುವ ಧನ್ಯಾನ ಹೊಟ್ಟೆಯಲ್ಲಿ ಇದು ಜಮೀನ್ದಾರರ ಅಟ್ಟಹಾಸವನ್ನು ಮೆಟ್ಟುವ ಸಂಕೇತವಾಗಿಯೂ ಬಳಸಬಹುದು. ಉತ್ತರ ಕರ್ನಾಟಕದಲ್ಲಿ ಒಂದು ಗಾದೆ ಮಾತಿದೆ. “ಕುಡುಗೋಲ ನುಂಗಿದವನ ಕುಂಡಿ ಹರಿತೈತಿ ಶೋಷಕನ ಹೊಟ್ಟೆ ಹರಿದೆ ಶೋಷಿತರು ನವ–ಸಮಾಜ ಕಟ್ಟುವ ಕನಸನ್ನು ಕಂಡಿದ್ದು ಸುಳ್ಳಲ್ಲ.”

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅನೇಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಂತೆ ಬಸವರಾಜ ಕಟ್ಟಿಮನಿಯವರು ಇಂದಿರಾಗಾಂಧಿಯವರ ಸರ್ವಾಧಿಕಾರತ್ವ ಪ್ರತಿಭಟಿಸದೇ ಒಬ್ಬ ವ್ಯಕ್ತಿ ಆರಾಧಕರಾಗಿ ‘ಇಂದಿರಾಜಿ’ ಎಂದು ಬರೆದಿರುವ ಪದ್ಯ ಅವರ ಪ್ರಗತಿಶೀಲ ಧೋರಣೆ ಇಲ್ಲಿ ವ್ಯಕ್ತವಾಗಿಲ್ಲ.

“ಓಂ ನವೋ ಇಂದಿರಾದೇವಿ
ಕಾಶ್ಮೀರಪುರವಾಸಿನಿ
ತ್ವಂ ಅಹಂ ಪ್ರಾರ್ಥಯೇ ದೇವಿ!
ಅನ್ನದಾನಂ ಚದೇಹಿಮೆ!
ಎಂಬ ದನಿ ಕೇಳಿತು ಇಂದಿರಾಜಿ!”

(ಕಾಂಪೋಜಿಟರ್ ಪು. ೫)

“ಗರಿಬೀ ಹಟಾವೋ’ ದಂತಹ ಘೋಷಣೆಯನ್ನು ಪ್ರಾಮಾಣಿಕವಾಗಿ ನಂಬಿದ ಬಸವರಾಜ ಕಟ್ಟಿಮನಿಯವರು ಅದರ ಹಿಂದಿರುವ ಹುನ್ನಾರವನ್ನು ಬಗೆಯುವಲ್ಲಿ ಸಫಲರಾಗಲಿಲ್ಲ. ಅಥವಾ ತಾವು ನಂಬಿಕೊಂಡು ಬಂದ ಸಿದ್ಧಾಂತದ ಮೂಲಕವೂ ಇದರ ಬಗ್ಗೆ ಆಲೋಚಿಸಿದಂತಿಲ್ಲ.”[೨೧]

‘ಸ್ವತಂತ್ರವ್ವ’ – ೩೦ ಒಂದು ಗೀತರೂಪಕ. ಸ್ವತಂತ್ರ್ಯಪೂರ್ವದಲ್ಲಿ ಕಂಡ ಕನಸು ಸ್ವಾತಂತ್ರ್ಯ ನಂತರ ನನಸಾಗದಿದ್ದ ಸ್ಥಿತಿಯನ್ನು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

“ರೈತರ ರಾಜ್ಯ ಬರಲಿಲ್ಲ
ಬಡವರ ರಾಜ್ಯ ಬರಲಿಲ್ಲ
ಕೈಯಾಡಿತು
ಬೀಳಲಿಲ್ಲ ಏಟು !
ಕಾಲಾಡಿತು
ಓಡಲಿಲ್ಲ ಕ್ರಾಂತಿಯ ಸಾರೋಟ!”

(ಸ್ವತಂತ್ರವ್ವ–ಸ್ವತಂತ್ರವ್ವ)

ಸ್ವಾತಂತ್ರ್ಯ ನಂತರದಲ್ಲಿ ನಿರಾಶಾ ಭಾವನೆ ಕಂಡು ಬರುತ್ತದೆ. ಬಸವರಾಜ ಕಟ್ಟಿಮನಿಯವರ ಬಿಡಿಕವನಗಳು ಸಂಗ್ರಹದ ಕೊರತೆಯಿಂದ ಅವು ಇಂದು ದೊರಕದೆ ಹೋಗಿವೆ. ಬಸವರಾಜ ಕಟ್ಟಿಮನಿಯರು ಗದ್ಯ ಸಾಹಿತ್ಯಕ್ಕೆ ನೀಡಿದಷ್ಟು ಸಾಧನೆ, ಕಾವ್ಯ ರಚನೆಯಲ್ಲಿ ಅವರ ಸಾಧನೆ ಹೇಳಿಕೊಳ್ಳುವಂತಿಲ್ಲ.

ಮಹಾಲಿಂಗ ಮಂಗಿ :

ಕವಿಯ ಮನಸ್ಸನ್ನು ಕಲಕುವ ತನ್ನ ಸುತ್ತಲಿನ ಸಮಾಜದ ಕರುಳ ವ್ಯವಸ್ಥೆಯ ಕಪ್ಪು ಬಾಹುಗಳು ಜನರ ಅನಂತ ನೋವು, ಅಳಲು, ಅಸಹಾಯಕತೆ, ಅಜ್ಞಾನ, ಕೀಳರಿಮೆ, ಸ್ವಾರ್ಥ, ಸಣ್ಣತನಗಳು ಇವುಗಳು ತೀವ್ರವಾಗಿ ಕಂಡು ಬಂದು ಅವುಗಳಿಗಾಗಿ ಬದಲಾವಣೆಯನ್ನು ಸೂಚಿಸುವ ತುಡಿತ, ಸಂವೇದನೆ, ಚಿಂತನಶೀಲತೆಗಳು ಇವರ ‘ನನ್ನ ನೆಲದ ಭ್ರೂಣಗಳು’ ಕವನ ಸಂಕಲನದಲ್ಲಿ ತೀವ್ರವಾಗಿ ಕಂಡು ಬರುತ್ತವೆ. ಬದುಕಿನ ಭಾವನೆಯನ್ನು ಕವಿ ಸೊಗಸಾಗಿ ತಮ್ಮ ಕವನದಲ್ಲಿ ಈ ರೀತಿ ನೀಡಿದ್ದಾರೆ.

“ನಮ್ಮ ಬದುಕನ್ನು ಒತ್ತೆಯಿಟ್ಟು
ಜೀತಕ್ಕೆ ಜೋತಾಡುವ ನಾವು
ಬಾಳ ಕಳಕೊಂಡವರು
ನಮ್ಮ ತನವನ್ನಿವರು
ಊರ ಅಗಸಿ ಬಾಗಿಲಿಗೆ
ಹರಾಜಿಗಿಟ್ಟರು

ಕೇಳುವವರಾರೂ ಇಲ್ಲದಾಗ

ಸಿಗಿದು ಸಿಪ್ಪೆ ಮಾಡಿ

ತುರಮಂದಿ ತೊಟ್ಟಿಗೆ ಉಗಿದರು."

(ನನ್ನ ನೆಲದ ಭ್ರೂಣಗಳು – ಗತಿ, ಪು–೨೦)

ಎಂದು ಬಾಳಿನ ಅಸಹಾಯಕತೆಯನ್ನು ಕವಿ ಈ ರೀತಿಯಲ್ಲಿ ಬಣ್ಣಿಸಿದ್ದಾನೆ. ಇನ್ನೊಂದು ಇವರ ಪ್ರಮುಖ ಕವನ ಸಂಕಲನ 'ಹಕ್ಕಿಗಳೇಕೆ ಸಾಯುತ್ತೀರೆ?' ಹೆಸರೇ ಸೂಚಿಸುವ ಈ ಕವನ ಕುತೂಹಲ ಕೆರಳಿಸುವಂತಿದೆ ಇದರಲ್ಲಿ ಒಟ್ಟು ೫೬ ಕವನಗಳಿವೆ.

"ಅವರು ಹುಚ್ಚನೆನ್ನುತ್ತಾರೆ

ನನಗೆ"

(ಹಕ್ಕಿಗಳೇಕೆ ಸಾಯುತ್ತಿವೆ? ಹುಚ್ಚನ ಹಾಡು)

ಕವಿ ಕಲಾವಿದರು ಇದ್ದುದ್ದನ್ನು ಇದ್ದಕ್ಕಿದ್ದ ಹಾಗೆ ಪ್ರಕಟಿಸಿದರೆ ಖಂಡಿತವಾಗಿ ಹೇಳಿದರೆ ಅಂಥವರನ್ನು ಹುಚ್ಚರೆಂದು ಕರೆಯುತ್ತ ವಿಷ ಕುಡಿಸುತ್ತ ಶಿಲುಬೆಗೇರಿಸುತ್ತ ಗುಂಡಿಗೆ ಗುರಿ ಮಾಡುತ್ತ ಬಂದ ಸಮಾಜವನ್ನು ಪ್ರಶ್ನಿಸುವಂತೆ ಮಂಗಿ ಅವರು ಈ ಕವನ ಬೆಳೆಯುತ್ತದೆ.

"ನನ್ನ ಕೈ ಸುಟ್ಟರೂ ಅಡ್ಡಿಯಿಲ್ಲ

ನಾಡಿಗೆ ನಾನು ಬೆಂಕಿ ನೀಡುತ್ತೇನೆ

ನನ್ನ ಜನಕ್ಕೆ ಬೆಳಕು ಕೊಡುತ್ತೇನೆ."

(ಹಕ್ಕಿಗಳೇಕೆ ಸಾಯುತ್ತಿವೆ? – ಹುಚ್ಚನ ಹಾಡು)

ಕವಿಯ ನಿರ್ಧಾರದಲ್ಲಿ ಶೋಷಣೆಯಲ್ಲಿ ಬೆಂದ ಬಿಸಿಯಿದ್ದು ಅದು ಆಗಾಗ ಹೂವಿನಂತೆ ಕಾವ್ಯವಾಗಿ ಅರುಳುವುದನ್ನು ನೋಡಬಹುದು. ಶತ–ಶತಮಾನಗಳಿಂದ ಬಡವರು, ದರಿದ್ರರು, ಬಿಕಾರಿಗಳು, ಅನಾಥರು ನೆಲೆಯಿಲ್ಲದವರು ಈ ಭೂಮಿಯನ್ನು ತಾಯಿ ನೆಲವೆಂದು ಗೌರವಿಸುತ್ತ ಬಂದಿದ್ದರೂ ಅಂಥವರಿಗೆ ನೆಲವೇ ಮುನಿದಿದ್ದು ಅವನೆಲ್ಲಾ ನೆಲೆಯಿಲ್ಲದಾಗಿರುವುದನ್ನು 'ಶ್ರದ್ಧೆ–ಶ್ರಮಗಳನ್ನು ಹೊಸೆದು ಕಾಡು ಕಡಿದು ಮಾಡಿದ ಕೃಷಿ. ಹಸಿ ಬೆವರು ಬಿಸಿ ರಕ್ತ ಬೆರೆಸಿ ಬೀಜ ಬಿತ್ತಿದರೂ ಸಸಿಯಾಗದಿರುವುದನ್ನು ಕೆತ್ತಿಸಿ ಕಸಿ ಮಾಡಿದರೂ ಹೂ ಬಿಡದಿರುವುದನ್ನು ಗಮನಿಸಿದ ಕವಿ ಹೃದಯದಲ್ಲಿ

ಸಮಾಜವನ್ನು ಬಾಯಿ ಕಟ್ಟಿಸುವ ತಣ್ಣಗಿಸಿ ಜ್ವಾಲೆಯೂರಿಯುತ್ತಿರುವುದನ್ನು ಗುರುತಿಸಲಾಗಿದೆ.

'ಶೋಷಣೆಗೊಳಗಾಗಿ ಸೋಸಿ ಸೋರಿದೆ ನಮ್ಮ ಶೂನ್ಯ ಬದುಕು' ಈ ಸಂಕಲನದ ಹದಿಮೂರನೆಯ ಪುಟದಲ್ಲಿರುವ 'ಕೆಂಪುಕಾವ್ಯ!' ಈ ಕವಿಯ ಕಾವ್ಯಧೋರಣೆಯನ್ನು ಸೂಚಿಸುತ್ತವೆ.

"ಎಲ್ಲವ್ವನ ಹೆಸರಲಿ ಸೀರೆಯುಟ್ಟು
ಹೊಟ್ಟೆ ಹೊರೆವ ಜೋಗತಿಯರಂತೆ"

(ಹಕ್ಕಿಗಳೇಕೆ ಸಾಯುತ್ತಿವೆ– ಕೆಂಪುಕಾವ್ಯ! ಪು. ೧೩)

"ರಾಜಕಾರಣವೆಂದು ಕವಿ ನಿಸ್ಸಂಕೋಚವಾಗಿ ಹೇಳುತ್ತ ಭಾಷಣ-ಘೋಷಣೆಗಳೆಲ್ಲಾ ಖೊಟ್ಟಿ ಔಷಧದಂತೆ ಸಮಾಜವಾದ, ಸಮತಾವಾದ, ಸುಧಾರಣೆಯ ಭ್ರಾಂತಿ ಹುಟ್ಟಿಸಿ ಇಡೀ ಸಮಾಜ ಹೇಗೆ ವಂಚಿತವಾಗುತ್ತಿರುವದೆಂಬುದನ್ನು ಕವಿಕಟುವಾಗಿಯೇ ಸಮಾಜ ವ್ಯವಸ್ಥೆಯನ್ನು ಟೀಕಿಸಿದ್ದುಂಟು. ಮಹಾಲಿಂಗ ಮಂಗಿ ಅತ್ಯಂತ ಭರವಸೆ ಮೂಡಿಸುವ ಕವಿಯಾಗಿದ್ದು, ಇವರು ಒಳ್ಳೆಯ ಪದ್ಯಗಳನ್ನು ಬರೆಯಬಲ್ಲರೆಂಬುದಕ್ಕೆ ಈ ಕವನ ಸಂಕಲನವೇ ಸಾಕ್ಷಿ."[೨೨]

ಒಟ್ಟಾರೆಯಾಗಿ ಮಹಾಲಿಂಗ ಮಂಗಿಯವರು ಸಾಮಾಜಿಕ ಕಳಕಳಿಯನ್ನು ವಿಭಿನ್ನವಾಗಿ ಜೋಡಿಸಿ ಕಾವ್ಯಕ್ಕೆ ಲವಲವಿಕೆಯೊದಗಿಸುವ ಕಾರ್ಯವನ್ನು ಮಾಡಿದ್ದಾರೆ.

೩. ನವ್ಯ ಕವಿಗಳು :

ನವೋದಯ ಸಾಹಿತ್ಯದ ಪ್ರತಿಭಟನೆಯಾಗಿ ನವ್ಯ ಸಾಹಿತ್ಯ ಮಾರ್ಗರೂಪ ತಾಳಿತು! "ನವ್ಯ ಸಾಹಿತ್ಯವೂ ನವೋದಯ ಸಾಹಿತ್ಯದಂತೆ ಪ್ರೇರಣೆ ಪಡೆದು ರೂಪುಗೊಂಡಿದ್ದರಿಂದ ಪಾಶ್ಚಾತ್ಯ ಸಾಹಿತ್ಯದ ಸಂವಾದಿಯಾಗಿ ಬಂದದ್ದು ಎಂದು ಒ.ಎಲ್.ನಾಗಭೂಷಣಸ್ವಾಮಿ ಅವರು ಅಭಿಪ್ರಾಯಪಡುತ್ತಾರೆ. 'ವಿಮರ್ಶೆಯ ಪರಿಭಾಷೆ' (The Concept of Critics, 1983)"[೨೩] ನವ್ಯ ಸಾಹಿತ್ಯ ಪಾಶ್ಚಾತ್ಯ ಆಧುನಿಕ ತಾತ್ವಿಕ ಚಿಂತನೆಗಳಾದ ಅಸ್ತಿತ್ವವಾದ, ಅಸಂಗತವಾದಗಳನ್ನು ರೂಢಿಸಿಕೊಂಡು ಬೆಳೆಯಿತು. ಇಂಥ ಸನ್ನಿವೇಶದಲ್ಲಿ ಗೋಕಾಕ ಪರಿಸರದಲ್ಲಿ ಹಲವು ಕವಿಗಳು ಕಾವ್ಯ ರಚನೆಗೆ ತೊಡಗಿದರು. ಅವರುಗಳನ್ನು ಈ ರೀತಿಯಲ್ಲಿ ಕಲೆ ಹಾಕಲಾಗಿದೆ.

ಚಂದ್ರಶೇಖರ ಕಂಬಾರ :

ಚಂದ್ರಶೇಖರ ಕಂಬಾರ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ ಜನಿಸಿದರೂ, ಸಾಹಿತ್ಯಿಕವಾಗಿ ಗೋಕಾಕ ನೆಲೆಯಲ್ಲಿ ರೂಪಗೊಂಡು ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಅಂಕೆಯ ಎಲ್ಲ ಕ್ಷೇತ್ರಗಳಲ್ಲಿ ಹೊಸಲೋಕವನ್ನು ಹೊಸ ನಿಲುವನ್ನು ಸೃಷ್ಟಿಸಿದಂತಹ ಕವಿ.

ಕಂಬಾರರ ಮೊದಲ ಕವನ ಸಂಕಲನ ಮುಗುಳು (೧೯೫೮) ತಮ್ಮ ಪ್ರಥಮ ಕವನ ಸಂಕಲನಕ್ಕೆ "ಮುಗುಳು" ಹೆಸರಿಟ್ಟದ್ದನ್ನು ಕುರಿತು ಈ ರೀತಿ ಹೇಳುತ್ತಾರೆ. "ಜೀವನವನ್ನು ಅರ್ಥಮಾಡಿಕೊಳ್ಳುವ ನನ್ನ ದೃಷ್ಟಿಯಲ್ಲಿ ಅಪಕ್ವತೆ ಇರಬಹುದು. ಇದೆಯೆಂಬ ಭಾವನೆ ನನ್ನಲ್ಲಿದ್ದರೂ ನನ್ನದೆನ್ನುವ ಆ ದೃಷ್ಟಿಗಾಗಿ ಪ್ರೀತಿಯೂ ಇದೆ. ಮುಗುಳಿಗೆ ಹೂವಿಗಿರುವಂಥ ಚೆಲವು ಸೌರಭಗಳ ಜವಾಬ್ದಾರಿ ಇಲ್ಲದಿದ್ದರೂ ಅದಕ್ಕೂ ಕೆಲ ಗುಣಗಳ ಅವಶ್ಯಕತೆಯಿದೆ."[೨೪]

"ದೇಶವನ್ನು ಹೊಸದಾಗಿ ಕಟ್ಟುವ ಕಲ್ಪಿತ ಆಹ್ವಾನವನ್ನು ಸ್ವೀಕರಿಸಿ
ಕುಲಬಲದ ಛಲಲಿಂಗ ತರತಮವನುಳಿದು
ಉಸಿರುಸಿರನೂಲಿನೆಳೆ ಹುರಿಯಾಗಿ ಹೊಸೆದು
ಹೊಸ ಧ್ಯೇಯಭಾವಗುರಿ ಬಾವುಟವನ್ನೆತ್ತಿ
ಹಾಡುವೆವು ಕುಕ್ಕಿ ಮೌಢ್ಯತೆಯ ಹಸಿ ನೆತ್ತಿ"

(ಮುಗುಳು, ಹೊಸಹಾಡು, ಪು-೩)

ಅಪಾರ ವಿಶ್ವಾಸವನ್ನು ಆತ್ಮ ವಿಮರ್ಶೆಯನ್ನು ಸ್ವಂತಿಕೆಯನ್ನು ಈ ಮೇಲಿನ ಕವನದಲ್ಲಿ ಗುರ್ತಿಸಬಹುದು. ಕಂಬಾರರ ಕಾವ್ಯದ ಮತ್ತೊಂದು ಮಗ್ಗಲು ಭೂತ, ವರ್ತಮಾನ, ಭವಿಷ್ಯತ್, ನಿರ್ಮಾಣಕ್ಕಾಗಿ ಹಂಬಲಿಸುತ್ತಾರೆ. ಅವರಿಗೆ ಅಪಾರ ಯಶಸ್ಸು ತಂದು ಕೊಟ್ಟ ಕವನ ಸಂಕಲನ 'ಹೇಳತೇನ ಕೇಳ' (೧೯೬೪) ಕಂಬಾರರ ಈ ನಿಲುವಿಗೆ ಉತ್ತಮ ಉದಾಹರಣೆ

"ಊರಿನ ಹುಡುಗೋರು ದೊಡ್ಡಾಟ ಬಿಟಕೊಟ್ಟ
ನಾಟಕವಾಡ್ಯಾಕ ಪಟ್ಟ ಫೈಲಾಕ ।
ಹಸಿಮಕ್ಕಸಲುವಾಗಿ ಗರಡೀಯ ಮನಿ ಕೆಡೇವಿ
ಹೊಸ ಸಾಲಿಕಟ್ಟಿಸೋಣ ಬಲೇ ಶೋಭಾ"

(ಹೇಳತೇನ ಕೇಳ)

ಮೇಲಿನ ಕವನ ಶಿವಾಪುರದಂತಹ ಹಳ್ಳಿಯಲ್ಲಿ ಕಾಲಕ್ಕೆ ತಕ್ಕಂತೆ ಭವಿಷ್ಯತ್ತಿಗೆ ಹೊಂದಿಕೊಳ್ಳುವಂತೆ, ದೊಡ್ಡಾಟ, ನಾಟಕವಾದದ್ದು, ಗರಡೀಮನಿ ಕೆಡವಿ, ಹೊಸ ಸಾಲಿ ಕಟ್ಟಿಸುವ ಕ್ರಿಯೆಗಳು ಹಳ್ಳಿಯ ವಿಕಸನ ಪ್ರಕ್ರಿಯೆಯನ್ನು ದೇಶೀಪ್ರಜ್ಞೆಯಲ್ಲಿ ಸಮುದಾಯನಿಷ್ಟ ಚಿಂತನೆಯನ್ನು ಇಲ್ಲಿ ವ್ಯಕ್ತಪಡಿಸುತ್ತಾರೆ. ಚಂದ್ರಶೇಖರ ಕಂಬಾರ ಅವರ ಇವರ ಒಟ್ಟು ಕವನ ಸಂಕಲನಗಳು ಈ ರೀತಿಯಲ್ಲಿವೆ.

ಮುಗುಳು (೧೯೫೮), ಹೇಳತೇನ ಕೇಳ (೧೯೬೪), ತಕರಾರಿನವರು (೧೯೭೦), ಸಾವಿರದ ನೆರಳು (೧೯೭೯), ಆಯ್ದ ಕವನಗಳು (೧೯೮೦), ಬೆಳ್ಳಿಮೀನು (೧೯೮೯) ಈವರೆಗಿನ ಹೇಳತೇನ ಕೇಳ (೧೯೯೪), ಸಮಗ್ರ ಕಾವ್ಯ (೧೯೬೪-೧೯೯೪), ಅಕ್ಕಕ್ಕು ಹಾಡುಗಳೇ (೧೯೯೬) ಮುಂತಾದವುಗಳ ಪ್ರಮುಖವಾಗಿವೆ.

"ಮ್ಯಾಲಿಂದ ಜಿಗಿದು ತಳಮುಟ್ಟಿ ಮ್ಯಾಲೆದ್ದು ನೆಲಹುಡುಕುವ 'ಅವರ ಶೋಧಕ ಪ್ರವೃತ್ತಿ ತಾತ್ಕಾಲಿಕವಾದುದ್ದಲ್ಲ. ಕನಸು ಮಿರಮಿಸದಿರಲಿ ತುದಿಯ ತಲುಪುವ ತನಕ ತುದಿಯಲ್ಲೇ ಗೊತ್ತಲ್ಲ ಕ್ಷಿತಿಜದಾಚೆ' ಎನ್ನುವಂತೆ ನಿರಂತರವಾದದ್ದು ಸತ್ಯವನ್ನು ಕಾಣುವ ಹಠಮಾರಿತನದ್ದು."[೨೫] ತುದಿಯೆಂಬುದು ತುದಿಯಿಲ್ಲ ಎಂಬ ಹೊಸ ಸಾಧ್ಯತೆಯನ್ನು ಇಲ್ಲಿ ಗ್ರಹಿಸಿಕೊಳ್ಳಬೇಕಾಗುತ್ತದೆ.

'ಸತ್ತವರ ನೆರಳು' ಕವನ ದೇಶೀ ನ್ಯಾಯ ಪದ್ಧತಿಯನ್ನು ಹುಡುಕುವ ಪ್ರಯತ್ನ ಈ ಕವನದಲ್ಲಿ ವ್ಯಕ್ತವಾಗುತ್ತದೆ. ಕುದರೀಸಿದ್ದ, ಗಂಗಾಮಾಯಿ, ಮಂದಾರಮರ ಇಂತಹ ಅನೇಕ ಆಯ್ದ ಕವನಗಳಲ್ಲಿ (೧೯೮೦) ದೇಶೀ ಪ್ರಜ್ಞೆಯನ್ನು ಗುರ್ತಿಸಬಹುದು.

"ಕಂಬಾರರ ಕಾವ್ಯ ಕುರಿತು ಪಿ. ಲಂಕೇಶರ ಅಭಿಪ್ರಾಯ ಹೀಗಿದೆ. ಬೇಂದ್ರೆಯವರ ದಾರಿಯಲ್ಲೇ ಒಮ್ಮೆ ಬರೆಯುತ್ತಿದ್ದ ಕಂಬಾರರು ಭಾಷೆ, ವಸ್ತು, ಆಸಕ್ತಿ ಎಲ್ಲದರಲ್ಲಿಯೂ ಅವರಿಗಿಂತ ಮುಂದೆ ಹೋಗಿದ್ದಾರೆ. ಇದು ಅವರ ಒಟ್ಟು ಸಾಹಿತ್ಯವನ್ನು ಪರಿಶೀಲಿಸಿ ಆಡಿದ ವಿಮರ್ಶನ ಮಾತು."[೨೬]

ಕಂಬಾರರ 'ಚಕೋರಿ' (೧೯೯೪) ಮಹಾಕಾವ್ಯ ಪರಂಪರೆಗೆ ಸೇರುವ ಒಂದು ಹೊಸ ಮಾದರಿಯ ಕವನ ಸಂಕಲನವಾಗಿದೆ. ನಾದ ಮತ್ತು ನುಡಿ ಬಗೆಗಿರುವ ಅವರ ಗಟ್ಟಿಯಾದ ನಂಬಿಕೆಯೇ ಚಕೋರಿ ಕಾವ್ಯ. ಅಕ್ಕುಕು ಹಾಡುಗಳೇ (೧೯೯೪) ಕಾಡು ಕಾಡೆಂದರೆ ಅಂತರಂಗದ ದರ್ಶನ ಮಹತ್ವದ್ದಾಗಿದೆ.

ಕಂಬಾರವರು ಗೋಕಾವಿ ಪ್ರಾದೇಶಿಕ ಭಾಷೆಯನ್ನೇ ತಮ್ಮ ಕವನಗಳ ಮೂಲಕ ತರುತ್ತಾರೆ. ಅಲ್ಲಿಯ ಪ್ರಾದೇಶಿಕತೆಯ ಭಾಷಾ ಲಹರಿ ಕಣ್ಣಿಗೆ ಕಟ್ಟುವಂತಿವೆ. ಉಪಮೆ, ರೂಪಕ, ಅಲಂಕಾರ ಅಲ್ಲಲ್ಲಿ ಮೂಡಿ ಬಂದು ಕವನದ ಸ್ವಾರಸ್ಯವನ್ನು ಹೆಚ್ಚಿಸಿವೆ. ಅವುಗಳ ಅಂತರಂಗದ ನಾದ ಸಹೃದಯರ ಗಮನವನ್ನು ಸೆಳೆಯುತ್ತವೆ. ಈ ನಿಟ್ಟಿನಲ್ಲಿಯೇ ಚಂದ್ರಶೇಖರ ಕಂಬಾರರ ಹೆಸರು ಕನ್ನಡ ಸಾಹಿತ್ಯ ಲೋಕದಲ್ಲಿ ಅಚ್ಚಳಿಯದ ಸಾಧನೆ ಹಾದಿಯಲ್ಲಿದೆ.

ಪ್ರಕಾಶ ಬೆಳಕೂಡ :

ಪ್ರಕಾಶ ಬೆಳಕೂಡ ಅವರು 'ಧ್ವನಿ' ಕವನ ಸಂಕಲನದ ಮೂಲಕ ಬಂಡಾಯ ಕಾವ್ಯ ಪರಂಪರೆಯಲ್ಲಿ ಗುರುಸಿಕೊಂಡ ಕವಿ. " ಬದುಕಿನ ವೈಪರಿತ್ಯಗಳನ್ನು ಕಂಡಾಗ ಸಂವೇದನಾಶೀಲ ಮನಸ್ಸು ರೋಷಾವೇಶಗಳಿಂದ ಕುದಿದು ಕೊಳೆತ ವ್ಯವಸ್ಥೆಯ ವಿರುದ್ಧ ಸಿಡಿದು ನಿಂತು ಅಮೂಲಾಗ್ರ ಬದಲಾವಣೆಗೆ ಹಂಬಲಿಸಿ ದನಿ ಎತ್ತುತ್ತಿವೆ. ಆದರೆ ತನ್ನ ಹೋರಾಟ ಇತಿಮಿತಿಗಳು ತಿಳಿದಾಗ ತೀವ್ರ ನಿರಾಶೆ, ಸೋತ ನೋವು ಹೆಪ್ಪುಗಟ್ಟುತ್ತವೆ. ಸ್ಥಾಯಿಯಾಗಿ ಇಷ್ಟನ್ನು ಶ್ರೀ ಪ್ರಕಾಶ ಬೆಳಕೂಡರ ಕವನಗಳಲ್ಲಿ ಕಾಣುತ್ತೇವೆ"[೨೭]

ತೀವ್ರತೆಯನ್ನು ತನ್ನ ಕವನಗಳಲ್ಲಿ ತೊಡಿಸಿಕೊಂಡಿರುವ ಬೆಳಕೂಡ ಅವರು ಸಮಾಜ, ಧರ್ಮ, ರಾಜಕೀಯ ಮುಂತಾದವುಗಳ ವಿರುದ್ಧ ಬಂಡೆದಿದ್ದಾರೆ. ಅವರು ಒಂದು ಕವನ, ಈ ರೀತಿಯಲ್ಲಿ ಕಂಡು ಬರುತ್ತದೆ.

"ನಾನು ಗೋರಿ ಸೇರುವ
ಮುಂಚೆಯೇ
ನನ್ನ ಕ್ರಾಂತಿಯ
ಒಡಲಾಳದ ಶಿಶುಗಳನ್ನೆಲ್ಲ
ಸಿಲುಬೆಗೇರಿಸುತ್ತ
ಸಮಾಜದ
ಕಣ್ಣುಗಳು ಹದ್ದುಗಳಾಗಿ
ನನ್ನ ಕುಕ್ಕುತ್ತಲಿವೆ"

(ಧ್ವನಿ– ಧ್ವನಿ ಎತ್ತಬೇಕು ಪು. ೧)

ಎಂದು ಸಮಾಜದ ವಿಡಂಬನಾತ್ಮಕ ಧೋರಣೆಯನ್ನು ಸೂಕ್ತವಾಗಿ ಅಭಿವ್ಯಕ್ತಿಸುತ್ತಾರೆ. ಶತಶತಮಾನಗಳಿಂದ ಜಿಡ್ಡುಗಟ್ಟಿದ ಸಾಂಪ್ರದಾಯಿಕ ನಂಬುಗೆಗಳನ್ನು ಗುರುತಿಸುತ್ತಾ ಎಚ್ಚರಿಕೆಯನ್ನು, ನೀಡಿದ್ದಾನೆ. ಇಲ್ಲಿ ಇವರ ಕವಿತೆಗಳು ಖಡ್ಗದಂತೆ ಝಳಪಿಸುವ ಆವೇಶದಿಂದ ಕೂಡಿ ಪ್ರತಿಭಟನೆಯ ಹಾದಿಯಲ್ಲಿ ಬಂಡಾಯದ ಕೂಗನ್ನು ಘೋಷಿಸುತ್ತವೆ.

"ಕ್ರಾಂತಿ ಮಾಡಲು
ಹೊರಟ
ಸಾಹಿತಿ ಗೆಳೆಯನೊಬ್ಬ
ಹುಡುಗಿಯೊಬ್ಬಳ
ಭ್ರಾಂತಿ ಹಿಡಿದುಕುಳಿತ

(ಧ್ವನಿ–ಕ್ರಾಂತಿ–ಪು – ೧೨)

ಇಂತಹ ಭಾರತೀಯ ಪ್ರಜ್ಞೆಯನ್ನು ಕವಿ ಸೊಗಸಾಗಿ ಬಿಂಬಿಸಿದ್ದಾನೆ. ನಮ್ಮ ಇಂದಿನ ಸಂಸ್ಕೃತಿಯನ್ನು ವಿಮರ್ಶಿಸುವ ಕಾವ್ಯವಾಗಿ ಗೋಚರಿಸುತ್ತದೆ. ಹೀಗೆ ಅಲ್ಲಲ್ಲಿ ಚುಟುಕು ಕವನಗಳನ್ನು ಚಾಟಿಯೆಟಿನಂತೆ ಘಾತುಕ ಶಕ್ತಿಗಳಿಗೆ ತೋರಿಸಿದ್ದಾರೆ. ಒಟ್ಟಾರೆಯಾಗಿ ಆಧುನಿಕ ಬಂಡಾಯ ಸಾಹಿತ್ಯದ ದಟ್ಟವಾದ ಪ್ರಭಾವದಲ್ಲಿ ಇವರು ತಮ್ಮ ಕವನಗಳು ಕೃಷಿ ಮಾಡಿದ್ದಾರೆ.

ಎಚ್. ದೇವೇಂದ್ರ 'ಸಿಂಹನ್' :

ಎಚ್ ದೇವೇಂದ್ರ ಅವರು 'ವಿಪ್ಲವ' ಕವನ ಸಂಕಲನದ ಮೂಲಕ ಹೊಸರೆಕ್ಕೆಯನ್ನು ಬಡಿಯುತ್ತ ಸಾಹಿತ್ಯ ಲೋಕಕ್ಕೆ ಬಂದು ಸೇರಿದ ಕವಿ. ಇವರ ಬಹುತೇಕ ಕವನಗಳು ಸಾಮಾಜಿಕ ಕಳಕಳಿಯಿಂದ ಒಡಗೂಡಿಸಿಕೊಂಡಿರುವುದರಿಂದ ಅವರ ಕವನಗಳಲ್ಲಿ ಇಂದಿನ ಸಾಮಾಜಿಕ ವ್ಯವಸ್ಥೆ ಸಜೀವ ದರ್ಪಣವನ್ನು ಕುದಿ ಎಬ್ಬಿಸುತ್ತವೆ.

"ಧೃಡತೆಯಿಂದ ಬಂಡೇಳಬೇಕು
ಕ್ರಾಂತಿಯರೆಡಿಯಾಗಬೇಕು
ಮಾನವೀಯ ಮೌಲ್ಯದ ಅರ್ಥ ತಿಳಿಯದ ಧೂರ್ತರ
ಶೃಂಖಲೆಗಳಿಗೆ ನಮ್ಮ ಕೈಯೊಡ್ಡುವುದು ಬೇಡ

ಶಿಥಿಲವಾದ ಬದುಕನ್ನು ಕೇಂದ್ರೀಕರಿಸಿ

ಕ್ಲಿಷ್ಟಸ್ಥಿತಿಯ ವಿರುದ್ಧ ಹೋರಾಡಬೇಕು".

(ವಿಪ್ಲವ–ಮಾನವೀಯ ಮೌಲ್ಯ ಮತ್ತು ಕ್ರಾಂತಿ ಪು.–೧೭)

ಎನ್ನುವಲ್ಲಿ ಕ್ರಾಂತಿಯ ಹೋರಾಟದ ಧ್ವನಿಯನ್ನು ಹೊರಹೊಮ್ಮಿಸಿದ್ದಾನೆ. ಸ್ವಾರ್ಥಿ, ರಾಜಕೀಯ, ಸಮಾಜದಲ್ಲಿರುವ ಅನಿಷ್ಟಪದ್ಧತಿಗಳನ್ನು ವಿರೋಧಿಸುತ್ತಾನೆ. ವೈಚಾರಿಕವಾಗಿ ಕವನಗಳ ಮೂಲಕ ಚಿಂತಿಸುತ್ತಾನೆ.

"ಜೀವನದಲ್ಲಿ ನೋವುಂಡ ವ್ಯಕ್ತಿ ತನ್ನ ಸುತ್ತಲಿನ ಬದುಕಿನಲ್ಲಿ ನೊಂದವರ ಕಣ್ಣೀರಿಗೆ ಕರಗುತ್ತಾನೆ. ಅವರ ಕಣ್ಣೀರೊರೆಸುವ ಬಗೆ ಕುರಿತು ಚಿಂತಿಸುತ್ತಾನೆ. ಆಗೆಲ್ಲ ಕ್ರಾಂತಿ, ಬಂಡಾಯ, ರಕ್ತ ವಿಪ್ಲವ ಎಂದು ತಲೆ ಬಿಸಿ ಮಾಡಿಕೊಳ್ಳುತ್ತಾನೆ. ಇದಕ್ಕೆ ಎಚ್. ದೇವೇಂದ್ರರು ಹೊರತಾಗಿಲ್ಲ. ಅವರ 'ಕ್ರಾಂತಿ,' 'ಆಕ್ರಂದನ', 'ಬಲಿ', 'ಸಂಸ್ಕೃತಿಯ ಫಲಕದ ಸುತ್ತಾ', 'ವಿಪ್ಲವ', 'ಲೂಟ', ಬಯಕೆಯ ಬಂಧಿ' ಈ ಕವನಗಳಲ್ಲಿ ಮನಸ್ಸನ್ನು ತೆರೆದಿಟ್ಟಿದ್ದಾರೆ. ಹೋರಾಟಕ್ಕೆ ದನಿ ಎತ್ತಿದ್ದಾರೆ."[೨೮]

ಎಚ್ ದೇವೇಂದ್ರ ಅವರ ಕಾವ್ಯ ಮನೋಧೋರಣೆಯು ಬಂಡಾಯ. ಅಲ್ಲಿ ಅಡಗಿರುವುದು ಸಾಮಾಜಿಕ ಅಸಮತೆ. ಅದನ್ನು ಸೋದಾಹರಣವಾಗಿ ಕವಿ ತನ್ನ ಪರಿಸರದಲ್ಲಿ ಕಟ್ಟಿಕೊಟ್ಟಿದ್ದಾರೆ. ಕೆಟ್ಟ ರಾಜಕೀಯ ಮುಖವಾಡವನ್ನು ಎಚ್ಚರಿಸುತ್ತಾನೆ. ವೈಚಾರಿಕವಾಗಿ ಅವರ ಕೆಲಸವನ್ನು ಟೀಕಿಸುತ್ತಾನೆ. ಪ್ರತಿಭಟನೆಯ ಹಾದಿಯನ್ನು ಹಿಡಿಯುತ್ತಾನೆ. ಸಮಾಜವನ್ನು ಸರಿದಾರಿಗೆ ತರಲು ಪ್ರಯತ್ನಿಸುತ್ತಾನೆ.

"ಬಿಳಿ ಟೊಪ್ಪಿಗೆ ಹಾಕಿ ಬೆಲ್ಲದಂತೆ ಮಾತಾಡುವ
ಧೂರ್ತ ಮುಖಂಡರುಗಳಿಗೆ ಒಲಿಯಾಗದಿರಿ
ಎಲೆಕ್ಷನ್‌ದಲ್ಲಿ ಗೆದ್ದು, ತಮ್ಮ ಕಲೆಕ್ಷನ್ ಮಾಡಿಕೊಂಡು
ಓಟು ಕೊಟ್ಟ ಜನಕ್ಕೆ ಬೂಟು ತೋರಿಸುವ
ಹೊಲಸು ಅಭ್ಯರ್ಥಿಗಳಿಗೆ ಓಟು ಕೊಟ್ಟೀರೀ ಎಚ್ಚರ"

(ವಿಪ್ಲವ–ಚುನಾವಣೆ –ಪು. ೪೫)

ಹೀಗೆ ತಮ್ಮ ವಿಶಿಷ್ಟ ಕಾವ್ಯದ ಮೂಲಕ ಬದುಕಿನ ಸಮಸ್ಯೆಯನ್ನು, ಸಮಾಜದ ಅಶಾಂತಿಗೆ ಕಾರಣರಾಗುವ ವ್ಯಕ್ತಿಗಳನ್ನು, ತನ್ನದೇ ಆದ ಒಂದು ಭಾಷಾ ಮಾಧ್ಯಮದ ಮೂಲಕ ಎಚ್. ದೇವೇಂದ್ರ ಅವರು ಸಹೃದಯರಿಗೆ ತಿಳಿಸಿದ್ದಾರೆ.

ಸಮನ್ವಯ ಕವಿಗಳು :

ಸಾಹಿತ್ಯ ಯಾವುದೇ ಪಂಥಕ್ಕೆ ಸೇರಿದ ಕವಿಗಳು ಇವರು. ಎಲ್ಲಾ ರೀತಿಯ ಸಾಹಿತ್ಯ ಪಂಥದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದು, ಯಾವುದೇ ಸಾಹಿತ್ಯ ಪಂಥದಲ್ಲಿ ಅಂಟಿಕೊಳ್ಳದೇ ತಮ್ಮದೇ ಆದ ವಿನೂತನ ದಾಟಿಯ ಕಾವ್ಯ ಕೃಷಿಯನ್ನು ಮಾಡಿದ್ದು ಕಂಡು ಬರುತ್ತದೆ. ಹೀಗಾಗಿ ಅಂತಹ ಕಾವ್ಯ ಕೃಷಿ ಮಾಡಿದ ಹಲವು ಕವಿಗಳು ಈ ಪ್ರಾದೇಶಿಕತೆಯಲ್ಲಿ ಕಂಡು ಬರುತ್ತಾರೆ. ಅವರ ಕಾವ್ಯ ಮಾರ್ಗವನ್ನು ಈ ರೀತಿಯಲ್ಲಿ ವಿಶ್ಲೇಷಿಸಲಾಗಿದೆ.

ಡಾ. ನಿಂಗಣ್ಣಾ ಸಣ್ಣಕ್ಕಿ :

ಡಾ. ನಿಂಗಣ್ಣ ಸಣ್ಣಕ್ಕಿಯವರು ಒಬ್ಬ ಕವಿಯಾಗಿ, ಸಾಹಿತ್ಯ-ಚಿಂತಕರಾಗಿ, ಜಾನಪದ ಸಾಹಿತಿ, ಸಂಶೋಧಕರಾಗಿ ಗುರುತಿಸಿಕೊಂಡವರು. ಇವರು ಜನಿಸಿದ್ದು ಗೋಕಾಕ ತಾಲೂಕಿನ ಹೊನಕುಪ್ಪಿ ಎಂಬ ಕುಗ್ರಾಮದಲ್ಲಿ "ದೇವರ ಕರುಣೆ" ಮತ್ತು 'ಹೊಸಗಾಳಿ' ಇವರು ರಚಿಸಿದ ಕವನ ಸಂಕಲನಗಳು.

ಸಣ್ಣಕ್ಕಿಯವರ ಜಾನಪದ ಸಂಗ್ರಹಗಳು, ಜಾನಪದ ಲೇಖನಗಳ ಸಂಗ್ರಹ ಕೃತಿಗಳು ಜಾನಪದ ಆಸಕ್ತರಿಗೆ ಅಭ್ಯಾಸಿಗಳಿಗೆ ಉಪಯುಕ್ತ ಮಾಹಿತಿ ಒದಗಿಸುತ್ತವೆ. ಜಾನಪದಕ್ಕೆ ಹೆಚ್ಚಿನ ಒಲವು ತೋರಿದ ಇವರು ಹೆಚ್ಚಿನ ಸಂಖ್ಯೆಯಲ್ಲಿ ಜಾನಪದ ಹಾಗೂ ವೈಚಾರಿಕ ಲೇಖನಗಳನ್ನೊಳಗೊಂಡ ಗ್ರಂಥಗಳನ್ನು ರಚಿಸಿದ ಕೀರ್ತಿ ಇವರದಾಗಿದೆ.

ಪ್ರೊ. ಶಿವಲಿಂಗಪ್ಪ ಬಾವಿಕಟ್ಟಿ :

ಅಂಕಲಗಿ ಕಿರಿಯ ಮಹಾವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಶಿವಲಿಂಗಪ್ಪ ಬಾವಿಕಟ್ಟಿಯವರು "ಪ್ರೇಮಾಕ್ಷಿ" ಹೊರೆಯಂಥ ಕವನ ಸಂಕಲನ ಪ್ರಕಟಿಸಿದವರು.

ಶಂಕರ ತಲ್ಲೂರ :

'ಕಲ್ಲು ಮಲ್ಲಿಗೆ' ಕವನ ಸಂಕಲನದಿಂದ ಮೌನ ಮೆರವಣಿಗೆಯವರಿಗೆ ಹಲವಾರು ಕವನ ಸಂಕಲನವಗಳನ್ನು ಹೊರತಂದಿದ್ದಾರೆ.

ಮಹಾದೇವ ಜಿಡ್ಡಿಮನಿ :

ಗೋಕಾಕದ ಯುವಕವಿ ಮಹಾದೇವ ಜಿಡ್ಡಿಮನಿ 'ಗೋಕಾವಿ ಗುಲಾಬಿ' ಕವನ ಸಂಕಲನ ರಚಿಸಿದ್ದಾರೆ. ಗೋಕಾಕದ ಪ್ರಕೃತಿಯ ಸೌಂದರ್ಯ ಇವರ ಕವನಗಳಲ್ಲಿ ಎದ್ದು ಕಾಣುತ್ತವೆ. ವ್ಯಕ್ತಿ ಚಿತ್ರಣ ದೈವದ ಪರಿಕಲ್ಪನೆಗೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ.

ಗುರುಪಾದ ಕುಲಗೋಡ :

ತಮ್ಮ ವಿಶಿಷ್ಟ ಶೈಲಿಯ ಹಾಸ್ಯ ಬರಹಗಳಿಂದ ಗಮನ ಸೆಳೆದ ಇವರು 'ನಕ್ಕು ನೋಡಿ', 'ಪ್ರೇಮಪ್ರಜ್ಞೆ', 'ನಗೆಹನಿ' ಇತ್ಯಾದಿ ಕೃತಿಗಳ ಮೂಲಕ ತಮ್ಮ ಹಾಸ್ಯ ರಚನೆಯನ್ನು ವಿಭಿನ್ನ ಶೈಲಿಯಲ್ಲಿ ರಚಿಸಿದ್ದಾರೆ.

ಪ್ರಕಾಶ ಕೋಟಿನತೋಟ :

ಕೌಜಲಗಿಯಲ್ಲಿ ಜನಿಸಿದ ಇವರು ಅಲೆಗಳು (ಹನಿಗವಿತೆಗಳು) ೧೯೯೧ ರಲ್ಲಿ ರಚಿಸಿದ್ದಾರೆ. ಚಿಂತನಾಶೀಲ ಕವಿಗಳಾಗಿ ಪ್ರಸಿದ್ಧಿಯನ್ನು ಪಡೆದವರು. ಕೌಜಲಗಿಯ ಸಿರಿ ವೈಭವವನ್ನು ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ.

ರಾಜು ಕಂಬಾರ :

ರಾಜು ಕಂಬಾರ ಅವರು ಯುವಕವಿ. ತಮ್ಮ 'ಪ್ರಣಯ ಪಕ್ಷಿ' ಕಾವ್ಯ ಸಂಕಲನದ ಮೂಲಕ ಸಾಹಿತ್ಯ ಪ್ರವೇಶಿಸಿದವರು. ಇವರ ಬಹುತೇಕ ಕವನಗಳು ಪ್ರೀತಿ–ಪ್ರೇಮ–ಪ್ರಣಯಗಳ ಸುತ್ತಲೆ ರಚನೆಗಳಾಗಿವೆ. ಇವುಗಳ ಜೊತೆಗೆ ಪರಿಸರದ ಕಾಳಜಿ, ಸಾಮಾಜಿಕ ತಲ್ಲಣ, ರಾಜಕೀಯ ತಲ್ಲಣ ಹೀಗೆ ಬದುಕಿನ ಮೌಲ್ಯಗಳ ಕಡೆಗೆ ತಮ್ಮ ಹುಡುಕಾಟದ ಹಾದಿಯನ್ನು ಹಿಡಿದಿದ್ದಾರೆ.

"ರೂಪಕ್ಕೆ ಸೋತವನಲ್ಲ
ಪ್ರೇಮಕ್ಕೆ ಸೋಲುವೆನು ಎಲ್ಲ
ನಿನ್ನಯ ಗುಣವನು ಬಲ್ಲೆನುದುಂಬಿ
ಎನ್ನುಸಿರಿರುವುದೆ ಹೂಗಳ 'ರಾಜನ ನಂಬಿ"

(ಪ್ರಣಯ ಪಕ್ಷಿ–ದುಂಬಿಯನ್ಯಾಯ, ಪು–೩)

ತೀರಾ ಸಹಜತೆಯಲ್ಲಿ ದುಂಬಿಯ ಒಡನಾಟವನ್ನು ಕವಿ ಬಯಸಿದ್ದಾನೆ. ಹೂವು ಪೂಜೆಯ ಸಂಕೇತವಾಗಿದೆ. ಅದೇ ರೀತಿ ಪ್ರೇಮದ ನಂಟನ್ನು ಗಟ್ಟಿ ಗೊಳಿಸುವ ರೂಪಕವುವಾಗಿದೆ. ಹೀಗಾಗಿ ಯುವಕವಿ ಸಹಜವಾಗಿ ಆ ಮಾರ್ಗವನ್ನು ಅನುಸರಿಸಿದ್ದಾರೆ.

ಜಯಾನಂದ ಮಾದರ :

ಜಯಾನಂದ ಮಾದರ ಅವರು ವಿಶಿಷ್ಟ ಕಲೆಯ ಕವಿತ್ವವುಳ್ಳವರು. ತಮ್ಮ 'ಜೇನುದನಿ' ಚುಟುಕು ಕವನ ಸಂಕಲನದ ಮೂಲಕ ಹೊರಹೊಮ್ಮಿದ ಪ್ರತಿಭೆ. ಇಲ್ಲಿಯ ಚುಟುಕುಗಳ ಒಂದು ರೀತಿಯಲ್ಲಿ ಓದುಗರಿಗೆ ರಸಾನಂದವನ್ನು ನೀಡುತ್ತವೆ. ಬದುಕಿನ ಎಲ್ಲ ರಂಗದಲ್ಲಿಯು ಹಾಸು ಹೊಕ್ಕಾಗಿವೆ.

"ಸಪ್ಪಳಿಲ್ಲದ ಅವಳ
ನಗೆ
ಹವಳದಷ್ಟೇ
ಸಿಹಿ
ಅದನೀ
ಸವಿ"

(ಜೇನುದನಿ, ಪು-೧೪)

ಹೀಗೆ ವಿಭಿನ್ನವಾಗಿ ಸರಳ ಮಾತುಗಳಿಂದ ಪ್ರೀತಿ, ಪ್ರೇಮ ಮುಂತಾದ ವಿಷಯಗಳ ಮೇಲೆ ಇವರ ಚುಟುಕುಗಳು ಕಂಡು ಬರುತ್ತವೆ.

ರಾಯಪ್ಪ ಗುದಗನವರ :

ರಾಯಪ್ಪ ಗುದಗನವರ ಅವರು ಬಹಳ ವಿಶಿಷ್ಟ ಕವಿ. ನೂರಾರು ಕವನಗಳನ್ನು ರಚಿಸಿದ ಇವರು ಗೋಕಾವಿ ನಾಡಿನ ಅಪರೂಪ ಕವಿಗಳು. ಇವರು 'ಬದುಕ್ಕೊಂದು ಹೋರಾಟ' ಅಪ್ರಕಟಿತ ಕವನ ಸಂಕಲನ ಬಹಳಷ್ಟು ವಿಶೇಷತೆಯನ್ನು ಅಭಿವ್ಯಕ್ತಿಸುತ್ತದೆ. ಸಮಾಜದಲ್ಲಿ ಬಡ ಜೀವಿಗಳ ಬದುಕಿನ ಅಸಹಾಯಕತೆ, ಅನಕ್ಷರತೆ, ಮೌಢ್ಯತೆ ಮುಂತಾದವುಗಳನ್ನು ಬಹಳ ಕುತೂಹಲದಿಂದ ತಮ್ಮ ಕವನಗಳಲ್ಲಿ ಒಡಮೂಡಿಸಿದ್ದಾರೆ. ಅಷ್ಟೇ ಅಲ್ಲದೆ ಗೋಕಾವಿ ನಾಡಿನ ಭರವಸೆಯ ಕವಿಯಾಗಿ ತಮ್ಮ ಹೆಸರನ್ನು ಪಡೆದುಕೊಂಡಿದ್ದಾರೆ.

"ಬದುಕೊಂದು ಹೋರಾಟ
ಬವಣೆ ಅದರ ಚೆಲ್ಲಾಟ
ಸಿಹಿ ಕಹಿಗಳೆರಡು ಅದರೂಟ
ಮುಗಿಸಲೇಬೇಕು ದಿನದಾಟ"

(ಬದುಕೊಂದು ಹೋರಾಟ-ಅಪ್ರಕಟಿತ ಕವನ)

ಈ ಕವನದ ಪ್ರಮುಖ ಸ್ಥಾಯಿಭಾವ ಬಡತನದ ಭವಣೆ ಬಾಳೆಂಬ ಜೀವನದಲ್ಲಿ ಕವಿ ಗ್ರಹಿಸುವ ಬಗ್ಗೆ ವಿನೂತನದಿಂದ ಕೂಡಿದೆ. ಬಾಳನ್ನು ಈ ಕವನ ಮೂಲಕ ಕಟ್ಟಿಕೊಡುವ ಅಂಶ ಬಹಳ ಸ್ಪಷ್ಟವಾಗಿ ಎದ್ದು ಕಾಣುತ್ತದೆ.

ಈಶ್ವರಚಂದ್ರ ಬೆಟಗೇರಿ :

ಕವಿ, ನಾಟಕಕಾರ, ಕಲಾವಿದರಾದ ಈಶ್ವರಚಂದ್ರ ಬೆಟಗೇರಿಯವರು. ಇವರ ಕವನ ಸಂಕಲನ 'ಮಂಗಲಪ್ರಭಾತ', 'ವಿನಯವಾಣಿ' ಅಪ್ರಕಟಿತ ಕವನ ಸಂಕಲನ. ನಿಸರ್ಗ ಮತ್ತು ದೇವರ ಮೇಲಿನ ಭಕ್ತಿ ಸಾಮಾಜಿಕ ಬದುಕಿನ ಸುಂದರವಾದ ಅಭಿವ್ಯಕ್ತಿಯನ್ನು ನಿರ್ಧರಿಸುತ್ತದೆ.

ಚಂದ್ರಶೇಖರ ಅಕ್ಕಿ :

ಗೋಕಾಕ ತಾಲೂಕಿನ ಜೆ.ಎಸ್.ಎಸ್.ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರು. ವೈಚಾರಿಕ ಚಿಂತಕರು ಪುಟ್ಟ ಬಿಡಿಗವನಗಳನ್ನು ಬರೆಯುತ್ತಾ ಬಂದಿದ್ದಾರೆ.

ಒಟ್ಟಾರೆ ಗೋಕಾವಿ ನಾಡಿನಲ್ಲಿ ಕ್ರಿ.ಶ. ೧೧ನೇ ಶತಮಾನದಿಂದ ಇಲ್ಲಿಯವರೆಗೆ ಅನೇಕ ಕವಿಗಳು ತಮ್ಮ ಕಾವ್ಯ ಕೃಷಿ ಮಾಡಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಎಲ್ಲ ಘಟ್ಟಗಳಲ್ಲಿ ತಮ್ಮ ಕಾವ್ಯವನ್ನು ರಚಿಸಿದ್ದಾರೆ. ಆ ಎಲ್ಲ ಕವಿಗಳ ಸಾಹಿತ್ಯದ ಮನೋಧೋರಣೆಯು ಭಿನ್ನ ಭಿನ್ನವಾಗಿ ಕಾಣಿಸಿಕೊಂಡಿವೆ. ಒಂದು ಪರಿಸರದಲ್ಲಿ ಈ ಎಲ್ಲ ಕವಿಗಳು ಕಂಡು ಬಂದರೂ ಅವರ ಕಾವ್ಯದ ಸ್ಥಾಯಿಭಾವವು ವಿಭಿನ್ನವಾಗಿ ಗೋಚರಿಸುತ್ತವೆ. ಈ ಅಧ್ಯಾಯದಲ್ಲಿ ಕಂಡು ಬರುವ ಕೆಲ ಹೊಸ-ಹೊಸ ಸಾಧ್ಯತೆಗಳನ್ನು ಈ ರೀತಿಯಲ್ಲಿ ಕಲೆ ಹಾಕಲಾಗಿದೆ.

೧. ಬದುಕನ್ನು ವಿಭಿನ್ನ ದೃಷ್ಟಿಕೋನದಿಂದ ಚಿತ್ರಿಸಿದ್ದಾರೆ.

೨. ಜನಪದೀಯ ಸತ್ವ ಕಾವ್ಯಕ್ಕೆ ಪ್ರೇರಣೆಯನ್ನುಂಟು ಮಾಡಿವೆ.

೩. ಧರ್ಮದ ಹಿಂದಿನ ಪ್ರೇರಣೆಯಿಂದ ಕಾವ್ಯ ರಚಿಸಿದ್ದಾರೆ.

೪. ಸಾಮಾಜಿಕ ಕ್ರಾಂತಿ ಮಾರ್ಗ ಈ ಪರಿಸರದಲ್ಲಿ ಕಂಡು ಬಂದಿದೆ.

೫. ನವೋದಯದ ಜೊತೆಗೆ ಪ್ರಗತಿಶೀಲ, ನವ್ಯ, ಬಂಡಾಯ ಈ ಎಲ್ಲ ಪಂಥಕ್ಕೆ ಅಂಟಿಕೊಂಡ ಕವಿಗಳು ಕಾಣಿಸಿಕೊಳ್ಳುತ್ತಾರೆ.

೬. ಗೋಕಾಕ ಪ್ರಾದೇಶಿಕ ಭಾಷಾ ಲಹರಿ ಇವರ ಕಾವ್ಯಕ್ಕೆ ಮಾಧ್ಯಮವಾಗಿ ಮೂಡಿ ಬಂದಿದೆ.

೭. ಈ ಪರಿಸರದ ಕಾವ್ಯದಲ್ಲಿ ಕವಿಗಳ ಶೈಲಿ, ಭಾಷೆ, ಛಂದಸ್ಸು ತೀರಾವಿಭಿನ್ನತೆಯಲ್ಲಿ ಕಾಣಿಸಿಕೊಳ್ಳುತ್ತವೆ.

೮. ಜೈನಕವಿಗಳು, ಜನಪದ ಕವಿಗಳು, ಆಧುನಿಕ ಕವಿಗಳ ಮೂಲಕ ಗೋಕಾಕ ತಾಲೂಕಿನ ಕಾವ್ಯ ಪರಂಪರೆಯನ್ನು ಕಂಡು ಕೊಳ್ಳಲಾಗಿದೆ.

ಹೀಗೆ ಇನ್ನೂ ಅನೇಕ ವಿಶೇಷತೆಗಳಿಂದ ಈ ಪರಿಸರದ ಕಾವ್ಯ ಪರಂಪರೆ ಕಂಡುಬರುತ್ತದೆ. ಅವುಗಳ ಮೂಲಕ ಈ ಪರಿಸರದ ಲಯಗಾರಿಕೆ, ಕವಿಗಳು ಕಂಡುಕೊಂಡ ಹೊಸದಾರಿ ಎಲ್ಲವೂ ವಿಶಿಷ್ಟತೆಯಲ್ಲಿ ಕಂಡು ಬರುತ್ತವೆ.

ಅಡಿಟಿಪ್ಪಣಿಗಳು :

೧) **ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ,** ಡಾ. ಬಿ.ಆರ್. ಹಂದೂರ ಪ್ರಕಾಶಕರು, ಶ್ರೀಮತಿ ಮಂಜುಳಾ ಅಡಿಕೆ, ಹುಕ್ಕೇರಿ. ೨೦೦೩–೦೪. ಪು–೨೭೭

೨) ಅದೇ, ಪು–೨೭೭

೩) ಅದೇ, ಪು–೨೭೮

೪) Fleet J.F. J.BBRAS Volumes X P-291, **Inscription's Relating to Ratt's of the Soundatti and Belgaum.**

೫) ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ, ಡಾ. ಬಿ.ಆರ್. ಹಂದೂರ ಪ್ರಕಾಶಕರು, ಶ್ರೀಮತಿ ಮಂಜುಳಾ ಅಡಿಕೆ, ಹುಕ್ಕೇರಿ. ೨೦೦೩–೦೪. ಪು–೨೮೫

೬) ಅದೇ, ಪುಟ – ೩೨೨

೭) ಅದೇ, ಪುಟ – ೩೨೩

೮) ಅದೇ, ಪುಟ – ೩೨೩

೯) ಅದೇ, ಪುಟ – ೩೨೩

೧೦) ಅದೇ, ಪುಟ – ೩೨೩

೧೧) ಗೋಕಾವಿ ಸಿರಿ ಸಂಪದ, (ಸಂ) ಪ್ರೊ.ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ, ಪ್ರಕಾಶಕರು, ಕ್ರಿಯಾಶೀಲ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಗೋಕಾಕ, ೨೦೦೬. ಪುಟ - ೫೭.

೧೨) ಬೆಳಗಾವಿ ಬೆಳಕು, (ಸಂ) ಡಾ. ಎಸ್. ಆರ್. ಗುಂಜಾಳ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೨೦೦೩, ಪು - ೪೪೩.

೧೩) ಗೋಕಾವಿ ಸಿರಿ ಸಂಪದ, (ಸಂ) ಪ್ರೊ.ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ, ಪ್ರಕಾಶಕರು, ಕ್ರಿಯಾಶೀಲ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಗೋಕಾಕ, ೨೦೦೬. ಪು- ೪೬

೧೪) ಅದೇ, ಪು-೪೭

೧೫) ಅದೇ, ಪು-೪೮

೧೬) ಅದೇ, ಪು-೪೮

೧೭) ಅದೇ, ಪು-೪೮

೧೮) ಆನಂದಕಂದ, ರಾಘವೇಂದ್ರ ಪಾಟೀಲ, ಸಾಹಿತ್ಯ ಅಕಾಡೆಮಿ, ನವದೆಹಲಿ ೨೦೦೧. ಪು-೭೩

೧೯) ಈಶ್ವರ ಸಣಕಲ್ಲ, ಬಿ.ಕೆ. ಹಿರೇಮಠ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೪. ಪು-೧೭ ಮತ್ತು ೧೮.

೨೦) ಗೋಕಾವಿ ಸಿರಿ ಸಂಪದ, (ಸಂ) ಪ್ರೊ.ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ, ಪ್ರಕಾಶಕರು, ಕ್ರಿಯಾಶೀಲ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಗೋಕಾಕ, ೨೦೦೬. ಪು-೧೮೭

೨೧) ಬಸವರಾಜ ಕಟ್ಟೀಮನಿಯವರ ಸಾಹಿತ್ಯ, ವಿವಿಧ ಲೇಖಕರು. ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೯೨, ಪು-೭೧

೨೨) ಡಾ. ಬುದ್ದಣ್ಣ ಹಿಂಗಮಿರೆ, ನನ್ನ ನೆಲದ ಭ್ರೂಣಗಳು, ಬೆನ್ನುಡಿ, ಮಹಾಲಿಂಗ ಮಂಗಿ, ಭುವನೇಶ್ವರಿ ಪ್ರಕಾಶನ, ಘಟಪ್ರಭಾ, ೧೯೮೩ ಪುಟ-೫೩.

೨೩) ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ, (ಸಂ) ಸಿ.ಬಿ. ಹೊನ್ನಯ್ಯ, ಜೈ ಭೀಮ ಪ್ರಕಾಶನ, ನಾಗದೇವನಹಳ್ಳಿ - ೨೦೦೮, ಪು-೬೦೦

೨೪) ಬೆಳಗಾವಿ ಬೆಳಕು, (ಸಂ) ಎಸ್. ಆರ್. ಗುಂಜಾಳ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩, ಪು-೬೧೨

೨೫) ಗೋಕಾವಿ ಸಿರಿ ಸಂಪದ, (ಸಂ) ಪ್ರೊ.ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ, ಪ್ರಕಾಶಕರು, ಕ್ರಿಯಾಶೀಲ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಗೋಕಾಕ, ೨೦೦೬. ಪುಟ - ೨೨೭.

೨೬) ಬೆಳಗಾವಿ ಜಿಲ್ಲೆ ಸಾಹಿತ್ಯ ದರ್ಶನ, (ಸಂ) ಡಾ. ಪಿ.ಜಿ. ಕೆಂಪಣ್ಣವರ, ಕನ್ನಡ ಜಾಗೃತಿ ಪುಸ್ತಕ ಮಾಲೆ, ಚಿಂಚಣಿ, ೨೦೦೪, ಪು-೧೦೭.

೨೭) ಪ್ರೊ. ಚಂದ್ರಶೇಖರ ಅಕ್ಕಿ, ಬೆನ್ನುಡಿ ಬರಹ, ಧ್ವನಿ, ಪ್ರಕಾಶ ಬೆಳಕೂಡ, ಮೂಡಲ ಪ್ರಕಾಶನ, ಮೂಡಲಗಿ - ೧೯೮೫.

೨೮) ಪ್ರೊ. ಸಿ.ಡಿ. ಅಕ್ಕಿ, ಎರಡನೆಯ ಮುನ್ನುಡಿ, ವಿಪ್ಲವ, ಎಚ್.ದೇವೇಂದ್ರ, 'ಸಿಂಹನ್' ೧೯೮೪, ಪು-೯.

ಅಧ್ಯಾಯ – ೩

ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯ

೩

ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯ :

ಕನ್ನಡ ಕಾವ್ಯ ಪರಂಪರೆಯು ಹಳಗನ್ನಡ, ನಡುಗನ್ನಡ, ಹೊಸಗನ್ನಡಗಳಲ್ಲಿ ರಚನೆಗೊಳ್ಳುತ್ತ ಬಂದಿವೆ. ಒಂದು ಕಾಲದ ಕವಿ ಅಥವಾ ಕವಿಯತ್ರಿ ಮತ್ತೊಂದು ಕಾಲದ ಕವಿಗೆ ಹಾಗೂ ಕವಿಯತ್ರಿಗೆ "ಖೋ" ಕೊಡುತ್ತ ಹೋದುದು ಕನ್ನಡ ಪರಂಪರೆಯಲ್ಲಿ ಕಾಣಬರುವುದು. ಪರಂಪರೆ ಮತ್ತು ವರ್ತಮಾನ, ಭವಿಷ್ಯಗಳನ್ನು ಒಳಗೊಳ್ಳುತ್ತದೆ. ನಿತ್ಯ ಹರಿಯುವ ನೀರಿನಂತೆ ಭೂತ – ವರ್ತಮಾನಗಳನ್ನು ಒಳಗೊಳ್ಳುತ್ತದೆ ಕಾವ್ಯ. ಈ ಮಾತಿಗೆ ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯ ಪರಂಪರೆಯು ಹೊರತಲ್ಲ.

ಮಹಿಳೆ ಗೃಹಲಕ್ಷ್ಮೀ, ಮನೆಯ ಮಂಗಳ ಗೌರಿ, ಹೆಣ್ಣು ಬಾಳಿನ ಕಣ್ಣು ಇತ್ಯಾದಿಯಾಗಿ ಮಹಿಳೆಯನ್ನು ಪೂಜ್ಯ ಸ್ಥಾನಕ್ಕೆ ಹೋಲಿಸುತ್ತಾರೆ. ಆದರೆ ಕೆಲದಶಕಗಳ ಹಿಂದೆ ಎಲ್ಲೆಡೆ ಮಹಿಳೆಯರಿಗೆ ಅಡಿಗೆಯ ಮನೆಯೇ ಸೀಮಿತವಾದ ಕಾರ್ಯಕ್ಷೇತ್ರವಾಗಿತ್ತು. ಅವಳ ಆಶೆ, ಆಕಾಂಕ್ಷೆಗಳ ಸುಂದರ ಕನಸುಗಳು, ಪ್ರತಿಭೆಯ ಹಲವು ಮುಖಗಳು ಎಲ್ಲವೂ ನಾಲ್ಕು ಗೋಡೆಗಳ ಮಧ್ಯದಲ್ಲಿಯೆ ಕಮರಿ ಹೋಗುತ್ತಿದ್ದವು. ಈ ಅನಿಷ್ಟ ಪದ್ಧತ್ತಿಗೆ ಗೋಕಾಕ ಪರಿಸರದ ಮಹಿಳೆಯರು ಹೊರತಲ್ಲ. ಆದರೆ ಇತ್ತೀಚಿಗೆ ಸಾಕಷ್ಟು ಬದಲಾವಣೆಯಾಗಿರುವುದು ಮಹಿಳೆಯ ಸುದೈವವೇ ಸರಿ. ಇದಕ್ಕೆ ಕಾರಣ ಮಹಿಳೆಯರಲ್ಲಿ ಸುಪ್ತವಾಗಿದ್ದ ಜಾಣ್ಮೆ. ಆ ಜಾಣ್ಮೆಯ ಬಳ್ಳಿ ಚಿಗುರೊಡೆದು ನಾಲ್ಕು ಗೋಡೆಗಳನ್ನು ದಾಟಿ ಹಬ್ಬಿ ಹಂದರವಾಗಿ, ಆಕರ್ಷಿಸಿದಾಗ ಪುರುಷ ಪ್ರಧಾನ ಸಮಾಜ ಗೌರವಿಸಲೇಬೇಕಾಯಿತು.

ಮಹಿಳೆ ತನ್ನ ಸ್ವತಃ ಪ್ರತಿಭೆಯಿಂದ ತನ್ನನ್ನು ತಾನೆ ಸಮಾಜಕ್ಕೆ ಪರಿಚಯಿಸಿಕೊಂಡಳೇ ವಿನಹ, ಯಾರ ಪ್ರೇರಣೆಯಿಂದಲೂ ಅಲ್ಲ ಎಂಬುದು ಹೆಮ್ಮೆಯ

[illegible]

[illegible]

[illegible]

[illegible]

[illegible]

[illegible]

ಸಂಗತಿ. ನಂತರ ಸಮಾಜ ಅವಳನ್ನು ಗೌರವಿಸುವಂತಾಯಿತು. ಇಂದು ಮಹಿಳೆ ಯಾವುದರಲ್ಲಿಯೂ ಕಡಿಮೆಯಿಲ್ಲ. ಪುರುಷರನ್ನೂ ಮೀರಿ ಪ್ರಗತಿ ಪಥದತ್ತ ದಾಪುಗಾಲನ್ನು ಹಾಕಿದ್ದಾಳೆ. ಇದೂ ಅಲ್ಲದೆ ಮಹಿಳೆಯ ಹಸ್ತದಲ್ಲಿ ಅರಳಿದ ಪುಷ್ಪ ಪುರುಷ ಎಂದು ಬೇರೆ ಹೇಳಬೇಕಾಗಿಲ್ಲ. ಈ ಹಿನ್ನೆಲೆಯಲ್ಲಿಯೇ ತೊಟ್ಟಿಲ ತೂಗುವ ಕೈ ಜಗತ್ತನ್ನೇ ಆಳುತ್ತದೆ ಎಂಬ ಅಮೃತವಾಣಿ ಮೂಡಿ ಬಂದಿದೆ. ಇಂದು ಮಹಿಳೆ ಶ್ರೇಷ್ಠ ಸಾಹಿತಿಯಾಗಿ, ಕವಯಿತ್ರಿಯಾಗಿ, ಕಲಾನಿಪುಣೆಯಾಗಿ, ವಿಜ್ಞಾನಿ, ಗಗನಯಾನಿ, ಪ್ರಧಾನಿ, ನ್ಯಾಯವಾದಿ ಇತ್ಯಾದಿ ಪ್ರತಿಯೊಂದು ಕ್ಷೇತ್ರವನ್ನು ಅಲಂಕರಿಸಿ, ಮಹಿಳಾ ಲೋಕವನ್ನೇ ಶ್ರೀಮಂತಗೊಳಿಸಿ ಜನಕೋಟಿಯನ್ನೇ ಅಚ್ಚರಿಪಡಿಸಿದ್ದಾಳೆ. ಒಟ್ಟಿನಲ್ಲಿ ಭೂತ, ಭವಿಷತ್, ವರ್ತಮಾನದಲ್ಲಿ ಮಹಿಳೆ ಪರಿಪಕ್ವ ಎಂಬ ಮಾತು ನಿತ್ಯ ಸತ್ಯವಾಗಿದೆ.

ಆದುದರಿಂದ ಈಗಿನ ಸಾಹಿತ್ಯ ಲೋಕವನ್ನು ಒಳಹೊಕ್ಕು ನೋಡಿದಾಗ ಕೆಲ ವಿರಳಿತಗಳು ಕಂಡು ಬರುತ್ತವೆ. ಅದರಲ್ಲಿಯೂ ಕಾವ್ಯಕ್ಷೇತ್ರದಲ್ಲಿ ಇವತ್ತಿದಿನ ಎಷ್ಟೋ ಮಹಿಳೆಯರು ಹೆಚ್ಚಿನ ವ್ಯಾಸಂಗ ಮಾಡದಿದ್ದರೂ ತಮ್ಮ ಕಲ್ಪನೆಯಿಂದ ಹಾಗೂ ಅನುಭವದಿಂದ ಕವನಗಳನ್ನು ರಚಿಸಿ ಖ್ಯಾತ ಕವಯಿತ್ರಿಯಾಗಿ ಕಂಗೊಳಿಸುತ್ತಿದ್ದಾರೆ. ಅಧ್ಯಾತ್ಮಿಕ, ಸಾಮಾಜಿಕ, ರಾಜಕೀಯ, ಜಾನಪದ, ನೃತ್ಯ ಗೀತೆ, ಹಾಸ್ಯಗೀತೆ, ನೂರಾರು ರೀತಿಯ ಕವನಗಳನ್ನು ಸುಂದರವಾಗಿ ರಚಿಸಿ ಕಾವ್ಯ ಕ್ಷೇತ್ರವನ್ನು ಸಮೃದ್ಧಿಗೊಳಿಸಿದ್ದಾರೆ. ಹಳ್ಳಿಯಿಂದ ದಿಲ್ಲಿಯುವರೆಗೂ ಕವಿಯತ್ರಿಯರು ತುಂಬಿಕೊಂಡಿದ್ದಾರೆ. ಆದಾಗ್ಯೂ ಎಷ್ಟೋ ಕವಿಯತ್ರಿಯರು ತೆರೆಯ ಮರೆಯಲ್ಲಿ ಬಾಡುತ್ತಿದ್ದಾರೆ. ರಾಜಕೀಯ ದರ್ಪಣದ ಪ್ರಭಾವವೋ ಅಥವಾ ತಾತ್ಸಾರ ಭಾವನೆಯ ದೃಷ್ಟಿಕೋನವೋ ಬಡವ ಬಲ್ಲಿದರೆಂಬ ಅಳತೆಗೋಲವೋ, ಬಣ್ಣ ಬಣ್ಣದ ಸೌಂದರ್ಯ ನ್ಯೂನ್ಯತೆಯ ಕಾರಣವೋ ಸ್ಪಷ್ಟವಾಗಿ ಗುರುತಿಸಬೇಕಾಗಿದೆ. ಅಂತೂ ಹೆಚ್ಚಿನ ಸಂಖ್ಯೆಯ ಕವಿಯತ್ರಿಯರು ತೆರೆಯ ಮರೆಯಲ್ಲಿಯೇ ಉಳಿದಿರವುದು ವಿಷಾದದ ಸಂಗತಿ. ಅರ್ಥ ಗರ್ಭಿತವಾದ ರಸವತ್ತಾದ ಕಾವ್ಯ ಶರಧಿ, ಪ್ರತಿಭೆಯ ಕಣಜವಿದ್ದರೂ, ಪ್ರೋತ್ಸಾಹವಿಲ್ಲದ ದುರ್ದೈವಿಗಳಾಗಿದ್ದಾರೆ. ಈ ಸಂಗತಿಯನ್ನು ಸಮಾಜ ಗಮನಿಸಬೇಕಾಗಿದೆ. ಕೇವಲ ತೆರೆಯ ಹೊರಗಿನ ಕಾವ್ಯಧಾರೆಯನ್ನಷ್ಟೆ ದೃಷ್ಟಿಯಲ್ಲಿಟ್ಟುಕೊಳ್ಳದೆ ತೆರೆಯ ಮರೆಯ ಕಾವ್ಯ ಸೌಗಂಧವನ್ನು ಎಲ್ಲೆಡೆ ಪರಿಚಯಿಸಿವಂತಹ ದೂರದೃಷ್ಟಿ ಅಭಯ ಹಸ್ತ ಮುಂದಾಗಿ ಬರಬೇಕಾಗಿದೆ.

ನಮ್ಮ ಗೋಕಾಕ ಪ್ರದೇಶದಲ್ಲಿಯೇ ಸಾಕಷ್ಟು ಕವಿಯತ್ರಿಯರಿದ್ದಾರೆ. ಆದರೆ ನಾಡಿನ ಜನತೆಗೆ ಎಲ್ಲರ ಪರಿಚಯವಿಲ್ಲ. ಅವರ ಸಾಹಿತ್ಯ ಪರಿಚಯ ಸಹೃದಯರಿಗೆ ಅಷ್ಟಾಗಿ ಪರಿಚಿತವಾಗಿಲ್ಲ. ಹೀಗಿರುವುದರಿಂದ ಆ ಮಹಿಳಾ ಕಾವ್ಯದ ಪ್ರಮುಖ ಕವಿಯತ್ರಿಯರ ಪರಿಚಯಾತ್ಮಕವಾಗಿ, ವಿಶೇಷ ಅಧ್ಯಯನದ ಮೂಲಕ ಅವರ ಕಾವ್ಯದ ಸೊಬಗನ್ನು ಅಧ್ಯಯನಕ್ಕೆ ಅಳವಡಿಸಲಾಗಿದೆ. ಜೊತೆಗೆ ಅವರ ಕಾವ್ಯದ ಪ್ರಮುಖವಾದ ಧೋರಣೆಯನ್ನು ವಿಮರ್ಶಾತ್ಮಕವಾಗಿ, ವಿಶ್ಲೇಷಾತ್ಮಕವಾಗಿ, ಸಂಯೋಜನಾತ್ಮಕ, ಪರಿಚಯಾತ್ಮಕವಾಗಿ ಅಧ್ಯಯನವನ್ನು ಮುಂದುವರೆಸಲಾಗಿದೆ.

ಗೋಕಾಕ ಪರಿಸರದಲ್ಲಿ ಪ್ರಾಚೀನವಾಗಿ ಯಾವ ಕವಿಯತ್ರಿಯು ಕಂಡು ಬರುವುದಿಲ್ಲ. ತೀರಾ ಇತ್ತೀಚಿನ ಮಹಿಳೆಯರಲ್ಲಿ ಮಾತ್ರ ನಾವು ಮಹಿಳಾ ಸಾಹಿತ್ಯದ ಪರಂಪರೆಯನ್ನು ಕಾಣಬಹುದಾಗಿದೆ. ಈ ಹಿಂದೆ ಯಾವ ಮಹಿಳೆಯು ಕಾವ್ಯ ರಚನೆಗೆ ಕೈ ಹಾಕಿದ ಸಾಹಸ ಕಂಡುಬರುವುದಿಲ್ಲ. ಹೀಗಾಗಿ ಈ ಪ್ರಾದೇಶಿಕ ಪರಂಪರೆಯನ್ನು ಕೇವಲ ಆಧುನಿಕ ಕನ್ನಡ ಸಾಹಿತ್ಯದಿಂದ ಮಾತ್ರ ಗುರುತಿಸಲಾಗಿದೆ. ಹಾಗೆ ನೋಡಿದರೆ ಜನಪದರಲ್ಲಿ ಎಷ್ಟೋ ಮಹಿಳಾ ಧ್ವನಿಗಳು ಕಾಣಿಸಿಕೊಂಡರು. ಅವುಗಳೆಲ್ಲ ಅಧಿಕೃತವಾದ ಅಂಶ ನಮಗೆ ಕಂಡು ಬರುವುದಿಲ್ಲ. ಹೀಗಿರುವಾಗ ನಾವು ಈಗಿನ ಸಮಕಾಲೀನ ಮಹಿಳಾ ಸಾಹಿತಿಗಳನ್ನೇ ಇಟ್ಟುಕೊಂಡು ಅಧ್ಯಯನವನ್ನು ಮುಂದುವರೆಸಿದೆ.

ಹೀಗಾಗಿ ಈ ಪರಿಸರದಲ್ಲಿ ಅಷ್ಟಾಗಿ ಹೆಚ್ಚಿನ ಸಂಖ್ಯೆಯ ಕವಿಯತ್ರಿಯರು ಕಂಡು ಬರದಿದ್ದರೂ ಕಂಡು ಬಂದ ಕವಿಯತ್ರಿಯ ಕಾವ್ಯದ ಅಂತರಂಗವನ್ನು ಹೊರತೆಗೆಯುವಯತ್ನ ಈ ಅಧ್ಯಾಯದಾಗಿದೆ. ಅದರ ಮೂಲಕ ಗೋಕಾಕ ತಾಲ್ಲೂಕಿನ ಮಹಿಳಾ ಕಾವ್ಯ ಪರಂಪರೆ ನಡೆದುಬಂದ ದಾರಿಯನ್ನು ಅವಲೋಕಿಸಲಾಗಿದೆ.

ಗುರುದೇವಿ ಹುಲೆಪ್ಪನವರಮಠ :

ಗೋಕಾಕ ನಗರದಲ್ಲಿ ಜನಿಸಿ, ಪ್ರಸ್ತುತ ಬೆಳಗಾವಿ ನಗರದಲ್ಲಿ ವಾಸವಾಗಿರುವ ಗುರುದೇವಿ ಹುಲೆಪ್ಪನವರಮಠ ಅವರು ನಗರದ ಪ್ರಮುಖ ಮಹಿಳಾ ಸಾಹಿತಿ,ಕವಿಯತ್ರಿ ಪ್ರಬಂಧ ಸಾಹಿತ್ಯದಲ್ಲಿ ತಮ್ಮ ಸಾಹಿತ್ಯದ ಗೆರೆಗಳನ್ನು ಮೂಡಿಸಿದರೂ, ತಮ್ಮ ಪ್ರಥಮ ಕವನ ಸಂಕಲನ 'ತನುವೆಂಬ ಹುತ್ತದಲ್ಲಿ' ಕಾವ್ಯದ ಮೂಲಕ ಕಾವ್ಯ ಪರಂಪರೆಗೆ ಹೆಜ್ಜೆ ಇಟ್ಟಿದ್ದಾರೆ.

'ತನುವೆಂಬ ಹುತ್ತದಲ್ಲಿ.....' ಯಾವ ಹುತ್ತದಲ್ಲಿ ಯಾವ ಹಾವಿದೆ ? ಯಾರಿಗೆ ಗೊತ್ತು ಎನ್ನುವಂತೆ, ಯಾರ ಮನದಲ್ಲಿ ಏನಿದೆ ? ಎಂಬುದನ್ನು ಅರಿವರಾರು ? ಆದರೂ ತಮ್ಮ ಅಂತರಾಳದ ಗರಿಗೆದರಿದ ಭಾವನೆಗಳಿಗೊಂದು ಅರ್ಥಕಲ್ಪಿಸಿ, ಬದುಕಿಗೊಂದು ಸವಿಯನ್ನು ಉಣ್ಣಿಸಿದ್ದಾರೆ. ಡಾ. ಗುರುದೇವಿ ಹುಲೆಪ್ಪನವರಮಠ.

ಒಬ್ಬ ಕವಿಯ ಕೈ ಮತ್ತೊಬ್ಬ ಕವಿಯ ಜೇಬಿನಲ್ಲಿ ಎನ್ನುವಂತೆ, ತಮ್ಮ ಅಭಿವ್ಯಕ್ತತೆಯನ್ನು ಅವರು "ಆಂಗ್ಲ ಲೇಖಕ ಜಾರ್ಜ್ ಆರ್‌ವೆಲ್ಲ 'Why I Write' ಎಂಬುದಕ್ಕೆ ಹೋಲಿಸಿಕೊಂಡಿದ್ದಾರೆ. ಅದರಿಂದ ಪ್ರೇರಣೆಗೊಂಡಿದ್ದಾರೆ."[೧] ಸಾಹಿತ್ಯ ಸತ್ಯವನ್ನು ಬಿಂಬಿಸುತ್ತದೆ. ರವಿಕಾಣದ್ದನ್ನು ಕವಿಕಂಡನೆನ್ನುವಂತೆ, ದಿನನಿತ್ಯದ ಸತ್ಯವನ್ನು ಓದುಗರೆದುರಿಗೆ ಬಿಚ್ಚಿಟ್ಟಿದ್ದಾರೆ.

"ಗದ್ಯದಲ್ಲಿ ಹೆಚ್ಚು ಗತಿಯಿರುವ ನನಗೆ ಪದ್ಯ ಬರೆವ ಆಸೆ ಎಂಬುದನ್ನು ತಿಳಿಸುತ್ತ ತಮ್ಮ ಮೊದಲ ಕವನಗುಚ್ಛ, ತೊದಲನುಡಿ, ತಪ್ಪಿದ್ದರೆ ಕ್ಷಮಿಸೆಂಬುದನ್ನು ಹೇಳಿರುವ ಈ ಪರಿ ಅವರ ವಿದ್ವತ್ತಿಗೆಯ ಪ್ರತೀಕ. "ಕಾಲಾಯ ತಸ್ಮೈಣಃ' ಯೆನ್ನುವಂತೆ ಪರಿಸ್ಥಿತಿಯೊಂದಿಗೆ ಕಾವ್ಯದ ಹೊಳವು, ಪರಿಗಳೂ ಬದಲಾಗುತ್ತ ಬಂದವು."[೨] "ಮನಸ್ಸು ಕೊಟ್ಟಿರುವ ಕಾವ್ಯದ ಎಂಥ ಅನೇಕ ಸಲ ಸಡಿಲ ಮಾತುಗಳ ಗುಚ್ಛ ಆಗತೊಡಗಿದೆ. ಇದೇನು ಕಾವ್ಯದ ಬಗ್ಗೆ ಇರುವ ತಕರಾರಲ್ಲ. ಕಾಲಕಾಲಕ್ಕೆ ಕನ್ನಡ ಕಾವ್ಯ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಬೆಳೆದದ್ದೇ ಹೀಗೆ."[೩]

ತಾಯಿ, ಮಗಳು, ತಂಗಿ, ಅಕ್ಕ, ಹೆಂಡತಿ, ಪ್ರೇಯಸಿ ಹೀಗೆ ಅನಂತ ಮುಖಗಳಲ್ಲಿ ಕಳೆದು ಹೋಗಿರುವ ಮಹಿಳೆಯನ್ನು ಮನುಷ್ಯಳಂತೆ ಸಮಾಜ ದೃಷ್ಟಿಯಿಂದ ನೋಡಲಾಗದ ಸಮಾಜದ ಬಗ್ಗೆ ಗುರುದೇವಿ ಅವರಿಗೆ ಸಿಟ್ಟಿದೆ. ಮಹಿಳೆ ಮನುಷ್ಯ ಆಗಿ ಬಿಚ್ಚಿಕೊಳ್ಳಲು ಅಸಾಧ್ಯವಾದ ದುರಂತತೆ ಕವಿಯತ್ರಿಯನ್ನು ಕಾಡಿದೆ. ಅವರ ಮೌನದ ಮೋರೆ ಹೋಗುವ ಗುಣ ಪಡೆದಿದ್ದೇನೆ ಎನ್ನುತ್ತಾರೆ.

"ಈ ಭೂಮಿಯ ಮೇಲೆ
ಗಟ್ಟಿಯಾಗಿ ಆಡಲಾರೆ
ಒಳಗನ್ನು ಹೊರಹಾಕಿ
ನಿರಮ್ಮಳಾಗಲಾರೆ"
(ತನುವೆಂಬ ಹುತ್ತದಲ್ಲಿ – ಹೀಗಿರುತ್ತೇನೆ, ಪುಟ–೧)

ಎನ್ನುತ್ತಾರೆ. ಕ್ಷಮಯಾ ಧರಿತ್ರಿಯಾಗಿಯೇ ಉಳಿಯಲು ಬಯಸುವ ಅವಳು

"ಅಂಗೈ ಕನ್ನಡಿಯಲ್ಲಿ
ಪ್ರತಿ ಫಲನಗೊಳ್ಳದಂತೆ
ಬದುಕಬೇಕೆಂದಿದ್ದೇನೆ
ಉಣ್ಣಿಸುವ ವೃತ್ತಿಗಾಗಿ...."

(ತನುವೆಂಬ ಹುತ್ತದಲ್ಲಿ–ಹೀಗಿರುತ್ತೇನೆ, ಪುಟ–೨)

ಇಲ್ಲಿ ಗುರುದೇವಿಯವರು ಬದುಕಿನ ಆಶಾಭಾವನೆಗಳನ್ನು ಇಟ್ಟುಕೊಂಡು ತಮ್ಮ ಒಡಲಾಳದ ಮಾತನ್ನು ಸುಂದರವಾದ ಯುಕ್ತಿಯಲ್ಲಿ ಚಿತ್ರಿಸಿದ್ದಾರೆ. ಸಮಾಜದಲ್ಲಿರುವ ಕೆಟ್ಟ ನೀತಿ–ರೀತಿ ಅಪನಂಬಿಕೆ ಇವುಗಳನ್ನು ತನ್ನ ಕವನಗಳ ಮೂಲಕ ಗುರುದೇವಿಯವರು ಮಧುರತೆಯಲ್ಲಿ ಖಂಡಿರಿಸಿದ್ದಾರೆ.

"ನಿಮ್ಮ ದ್ವೇಷಾಸೂಯೆ ಸೊಕ್ಕುಗಳ
ಕಲ್ಲೆಣ್ಣೆ ನನ್ನೊಳಗೆ ಪ್ರವಹಿಸಿ
ಹತ್ತಿ ಉರಿಯತೊಡಗಿಸಿದಾಗ
ನನ್ನ ಕೋಪಾಗ್ನಿ ಭುಗಿಲ್ಲೆಂದಿತು
ನೋಡು, ಸಹನೆಗೂ ಸೀಮೆಯಿದೆ;
ಸ್ವೀಕರಣಕ್ಕೂ ಮಿತಿಯಿದೆ,
ತಡೆಯಲಾಗಲಿಲ್ಲ"

(ತನುವೆಂಬ ಹುತ್ತದಲ್ಲಿ – ಸಾಗರ ಸ್ವಗತ ಪು – ೧೦)

ಹೀಗೆ, ತನ್ನ ಸಾಮಾಜಿಕ ಬದುಕಿನಲ್ಲಿ ಏರಿಳಿತವಾದಾಗ ಕವಿಯತ್ರಿಯು ತನ್ನ ಕವನಗಳ ಮೂಲಕ ಪ್ರತಿಭಟಿಸಿದ್ದಾಳೆ. ಸಾಮಾಜಿಕ ಕೆಟ್ಟ ಪ್ರವೃತ್ತಿಯನ್ನು ಖಂಡಿಸಿದ್ದಾರೆ. ವೈಚಾರಿಕವಾಗಿ ಚಿಂತನೆಗೆ ತೊಡಗಿದ್ದಾರೆ. "ತಡೆಯಲಾಗಲಿಲ್ಲ, ಎನ್ನುವ ಪದದಲ್ಲಿ ಮಹಿಳಾ ಸಾಹಿತ್ಯ ಧ್ವನಿ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ.

ಶಕುಂತಲಾ ದಂಡಗಿ :

ಕನ್ನಡ ಸಾರಸ್ವತ ಲೋಕಕ್ಕೆ ತಮ್ಮ "ನನ್ನ ಹಾಡು" ಕವನ ಸಂಕಲನದ ಮೂಲಕ ಚಿರಪರಿಚಿತರಾದ ಶಕುಂತಲಾ ಅವರು ಈ ಪ್ರಾದೇಶಿಕ ಮಹಿಳಾ ಪರಂಪರೆಯಲ್ಲಿ ಮುಂಚೂಣಿಯಲ್ಲಿರುತ್ತಾರೆ. ಕೆ.ಎಲ್.ಇ. ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಲಿರುವ ಇವರು, ಹಲವಾರು ಸಾಹಿತ್ಯ ಕಾರ್ಯಗಳಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡಿದ್ದಾರೆ.

"ಜ್ಯೋತಿ ಬೆಳಗುತಿದೆ ಅಕ್ಷರ ಪ್ರತಿಭೆಯೆಂಬ
ಜ್ಯೋತಿ ಬೆಳಗುತಿದೆ
ಮನೆ ಮನಂಗಳ ಒಳಗೆ ಹೊರಗೆ
ಅಜ್ಞಾನ ಅಳಿಸಿ ಸುಜ್ಞಾನವೆಂಬ ದಿವ್ಯ"

(ನನ್ನ ಹಾಡು, ಸಾಕ್ಷರತೆಯ ಗೀತೆ, ಪುಟ – ೨೪)

ಎಂಬ ಕವನವು ನೆರೆಯ ಮಹಾರಾಷ್ಟ್ರ ರಾಜ್ಯದ ಪಠ್ಯಪುಸ್ತಕ ಮತ್ತು ಪಠ್ಯಕ್ರಮದ ಸಂಶೋಧನಾ ಸಮಿತಿಯು ಕನ್ನಡ ಮಾಧ್ಯಮದ ಎಂಟನೆಯ ತರಗತಿಯ ಪಠ್ಯಕ್ಕೆ ಆಯ್ಕೆಗೊಂಡಿರುವುದು ಅಭಿಮಾನದ ಸಂಗತಿ. ಜ್ಯೋತಿ ಎಂಬುದು ಜ್ಞಾನದ ಸಂಕೇತ. ಅದು ಅಜ್ಞಾನದಿಂದ ಸುಜ್ಞಾನದವರೆಗೆ ಹೇಗೆ ನಡೆಸಿಕೊಂಡು ಹೋಗುತ್ತದೆ ಎಂಬುದನ್ನು ಸಾಂಕೇತಿಕವಾಗಿ ನಿರೂಪಿಸಿದ್ದಾರೆ.

ಡಾ. ಸಿ.ಕೆ.ನಾವಲಗಿಯವರ ನನ್ನ ಹಾಡು ಬೆನ್ನುಡಿಯಲ್ಲಿಯ ಮಾತುಗಳು ಅರ್ಥಪೂರ್ಣವಾಗಿ ಮೂಡಿಬಂದಿದೆ. "ಮೂಲತಃ ವಿಜ್ಞಾನ ಪದವೀಧರೆಯಾದ ಶಕುಂತಲಾ ದಂಡಗಿಯವರು ಸಾಮಾಜಿಕ, ರಾಷ್ಟ್ರೀಯ ಕಾಳಜಿಯುಳ್ಳ ವೈವಿಧ್ಯ ಪೂರ್ಣವಾದ ವಿಷಯಗಳನ್ನು ತಮ್ಮ "ನನ್ನ ಹಾಡು" ಸಂಕಲನದಲ್ಲಿ ಬಿಂಬಿಸಿದ್ದಾರೆ. ತಮ್ಮ ಅಂತಃಸ್ಫೂರ್ತಿಯೊಂದಿಗೆ, ಹೊರಗಿನ ಪ್ರೇರಣೆಗಳು, ಸನ್ನಿವೇಶ, ಸಂಘಟನೆಗಳು, ಸತತವಾದ, ಅಭ್ಯಾಸಾದಿಗಳಿಂದ ವಾಗ್ದೇವಿಯ ಅನುಗ್ರಹಕ್ಕೆ ಪಾತ್ರರಾಗಿದ್ದಾರೆಂಬ ಮಾತು ಸಂತಸ ಭರಿಸುತ್ತದೆ."

ಅತ್ಯಂತ ನಿರಾಡಾಂಭರ ಸುಂದರ ಮುಖಪುಟವನ್ನು ಹೊಂದಿದ 'ನನ್ನ ಹಾಡು' ಕವನ ಸಂಕಲನದಲ್ಲಿ ಶಕುಂತಲಾ ದಂಡಗಿಯವರು, ರಾಷ್ಟ್ರಧ್ವಜವನ್ನು ಹೊತ್ತು

ಹೆಮ್ಮೆಯಿಂದ ಹೂಂಕರಿಸುವ ಕುದುರೆಯಂತೆಯೇ ಸಾಕ್ಷರತೆಯ ಹರಿಕಾರರಾಗಿ ಸಾರಸ್ವತ ಲೋಕದಲ್ಲಿ ಮಿಂಚುತ್ತಲಿದ್ದಾರೆ. ಸ್ವಾತಂತ್ರ್ಯದ ನಂತರದ ಸಮಾಜದಲ್ಲಿ ಉಂಟಾದ ದ್ವಂದ್ವ ನೀತಿಯನ್ನು ಪ್ರಶ್ನಿಸುತ್ತಾ, ಅದರಿಂದ ಆಗುವ ತೊಂದರೆಯನ್ನು ಮೆಟ್ಟಿನಿಂತು ಅವುಗಳನ್ನು ಸರಿದಾರಿಗೆ ತರುವ ಪ್ರಯತ್ನ ಈ ಕವನ ಸಂಕಲನದಲ್ಲಿದೆ. ಇವರ ಇನ್ನೂಳಿದ ಕವನಗಳಲ್ಲಿಯೂ ಭಾವತೀವ್ರತೆಯಿಂದ ಪ್ರತಿಭಟನೆಯ ಗಾಳಿಯಿದೆ. ರೋಷವಿದೆ, ವ್ಯಂಗ್ಯವಿದೆ, ಬಂಡಾಯುವಿದೆ ಇವೆಲ್ಲಾ ಒಂದರಲ್ಲಿಯೇ ಹಾಸುಹೊಕ್ಕಾಗಿವೆ.

"ತಮ್ಮ ಅಂತರಂಗದ ಹರವನ್ನು
ನಾನೇನೆಂದು ಹಾಡು ಹಾಡಲಿ
ನಾಡಿನ ವ್ಯಥೆಯ ಹೇಗೆ ಹೇಳಲಿ"
(ನನ್ನ ಹಾಡು – ನಾನೇನೆಂದು ಹಾಡು ಹಾಡಲಿ, ಪುಟ–೧)

ಎಂಬ ಕವನದಲ್ಲಿ ನಾಡಿಗಾಗಿ ಮಡಿದ ಮಹಾತ್ಮರನ್ನು ಮರೆತು ಖರ್ಚಿಗಾಗಿ ಹಾತೊರೆಯುವ ಭ್ರಷ್ಟರಿಂದಾಗಿ ಐಕ್ಯತಾಭಂಗ ಬರುತ್ತಲಿದೆ ಎಂಬ ಕಳವಳ ವ್ಯಕ್ತ ಪಡಿಸುತ್ತಾರೆ. ಇವತ್ತಿನ ರಾಜಕೀಯ ಸ್ಥಿತಿಮಾನದ ವಿವಿಧ ಮಜಲುಗಳನ್ನು, ಅವರ ಸ್ವಾರ್ಥ ರಾಜಕೀಯ ಹಿತಾಸಕ್ತಿಗಳನ್ನು ಸಮೀಪದಿಂದ ಶಕುಂತಲಾ ಅವರು ನೋಡಿ ಅವುಗಳಿಗೆ ತಕ್ಕ ಉತ್ತರವನ್ನು ನೀಡಿದ್ದಾರೆ. 'ಸ್ವಾತಂತ್ರ್ಯ', 'ಎಚ್ಚರಿಕೆ', 'ದಂಗೆ' ಕವನದಲ್ಲಿ

"ಸ್ವಾತಂತ್ರ್ಯದ ಮಹತಿಯನ್ನರಿತು
ಸ್ವತಂತ್ರ ಭಾರತದ ಪ್ರಜೆಗಳು
ಸ್ವಾಭಿಮಾನ ಸ್ವದೇಶ ಪ್ರೇಮದಿ
ಸ್ವಾತಂತ್ರ್ಯಗಳಿಸಿ ಕೊಟ್ಟವರ
ತತ್ವಗಳನು ಪಾಲಿಸಿ ಅವರ
ಹೆಜ್ಜೆಯಲಿ ಹೆಜ್ಜೆಯನಿಡುತ
ಕಲ್ಯಾಣ ರಾಜ್ಯ ಸ್ಥಾಪಿಸೋಣ ನಾವಿಂದು"
(ನನ್ನ ಹಾಡು – ಸ್ವಾತಂತ್ರ್ಯ, ಪುಟ–೨)

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ಸಾಮಾನ್ಯರಿಗೆ ಆ ಸ್ವಾತಂತ್ರ್ಯ ಸಿಕ್ಕಿಲ್ಲ. ಅದಕ್ಕಾಗಿ ಆ ಮಹನೀಯರು ನಡೆದು ಬಂದ ದಾರಿಯಲ್ಲಿ, ಹಾಕಿಕೊಟ್ಟ ಹೆಜ್ಜೆಯಲ್ಲಿ,

ಅವರ ತತ್ವ ಪಾಲನೆಯನ್ನು ಮುಂದುವರೆಸೋಣ ಎನ್ನುವ ಆಶಾವಾದಿತ್ವ ಇವರ ಕವನಗಳಲ್ಲಿ ಅಡಗಿದೆ. ಆ ಮೂಲಕ ಕವಿಯತ್ರಿಯ ರಾಷ್ಟ್ರೀಯ ಹಾಗೂ ಸಾಮಾಜಿಕ ಕಳಕಳಿಯನ್ನು ಪ್ರತಿಬಿಂಬಿಸುತ್ತವೆ.

ಎಲ್ಲೆಡೆ ವ್ಯಾಪಿಸಿರುವ ಭ್ರಷ್ಟಾಚಾರವನ್ನು 'ಕೊಳ್ಳಿದೆವ್ವ' ರೂಪದಲ್ಲಿ ಕಂಡು ತಮ್ಮ ರೋಷ ವ್ಯಕ್ತ ಪಡಿಸಿದ್ದಾರೆ. ತಂದೆ-ತಾಯಿಗಳ ಅಭಿಲಾಷೆಯಂತೆ ಸದ್ಗೃಹಿಣಿಯಾಗುವ ಬಯಕೆಯ ಹೆಣ್ಣು, ನಿರಾಶಳಾಗಿ ಬೀದಿಗಿಳಿದಾಗ ಸಮಾಜದ ಹದ್ದಿನ ಕಣ್ಣಿನಲ್ಲಿ ಸೋತು ಹೋಗುವ ಪ್ರಸಂಗವು 'ಅಮಾನುಷರು' ಕವನದಲ್ಲಿ ಮಾರ್ಮಿಕವಾಗಿ ಚಿತ್ರಿತವಾಗಿದೆ. ಇವತ್ತಿನ ಸಮಾದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವೆಂಬ ಪೆಡಂಭೂತವನ್ನು ನಾಶ ಮಾಡುವ ದಾರಿಯನ್ನು ಸೂಚಿಸಿದ್ದಾರೆ. ಅಲ್ಲಿ ಸಮಾಜ ಸುಧಾರಣೆಯ ಅಂಶವು ಕಣ್ಣಿಗೆ ಕಟ್ಟುವಂತೆ ಮೂಡಿ ಬಂದಿದೆ.

"ಕನ್ನಡ ನಾಡಿನ ಅನ್ನವನುಂಡು
ಕನ್ನಡ ಜಲದಲಿ ಮಿಂದು ಪಾವನ ಗೊಂಡು
ಕನ್ನಡ ಮಂತ್ರವ ಪಠಿಸುತ ನಾವಿಂದು
ಕನ್ನಡಾಂಬೆಯ ಋಣವ ತೀರಿಸೋಣ"

(ನನ್ನ ಹಾಡು – ಕನ್ನಡ ನಾಡು ನುಡಿ, ಪುಟ-೧೧)

ಕನ್ನಡ ನಾಡು – ನುಡಿ – ಸಂಸ್ಕೃತಿಯನ್ನು ಉಸಿರಿನಲ್ಲಿ ಇಟ್ಟುಕೊಂಡು, ಸದಾ ಜನತೆಯನ್ನು ಎಚ್ಚೆತ್ತುಕೊಳ್ಳಲು ಪ್ರೇರಣೆಯನ್ನು ನೀಡುವ ನಿಟ್ಟಿನಲ್ಲಿ ಇವರ ಕವನಗಳು ಸಾಗಿವೆ. 'ಗುರಿ' ಕವನ ಸಂಕಲನದಲ್ಲಿ ವರದಕ್ಷಿಣೆಯೆಂಬ ಅನಿಷ್ಟ ಪದ್ಧತಿಯ ವಿರುದ್ಧ ಹರಿಹಾಯ್ದಿದ್ದಾರೆ. ಸಾಮಾಜಿಕ ನೆಲೆಯಲ್ಲಿ ಈ ಕವನವನ್ನು ಗುರುತಿಸಬೇಕು.

ಶಕುಂತಲಾ ದಂಡಗಿ ಸಮಾಜದ ವಿವಿಧ ಮುಖಗಳನ್ನು ತಮ್ಮ ಭಾವನಾತ್ಮಕ ತುಡಿತದೊಂದಿಗೆ, ಬಹುಮುಖ ವಿಷಯ ವಸ್ತುಗಳತ್ತ ದೃಷ್ಟಿ ಹರಿಸಿದ್ದಾರೆ.

"ವಸಂತ ನಗುನಗುತಲಿ ಬಂದ
ವನಕುಸುಮಗಳಲಿ ತುಂಬುತ ಮಕರಂದ
ವನದೇವತೆ ನೋಡುತನಿಂದ"

(ನನ್ನ ಹಾಡು – ವಸಂತಾಗಮನ, ಪುಟ-೧೫)

ಎಂದು ವಸಂತನನ್ನು ಸ್ವಾಗತಿಸುವ ರೀತಿ, ಇವರ ನಿಸರ್ಗ ಪ್ರೀಯತೆಯ ಸುಂದರವಾದ ಅಭಿವ್ಯಕ್ತಿಯು ಇಲ್ಲಿ ಎದ್ದು ಕಾಣುತ್ತದೆ.

"ಚೆಲುವ ಕುದುರೆ ಈ ಕವನ ವೈಚಾರಿಕ ನಿಲುವನ್ನು ತಾಳಿದ ಕವಿತೆಯಾಗಿದೆ. ಒಂದರ್ಥದಲ್ಲಿ ಕಾಮವಾಸನೆಯ ಬೆನ್ನು, ಇನ್ನೊಂದೆಡೆ ಹರಿಯುವ ಮನಕ ಕಟ್ಟು, ಇಂದ್ರಿಯ ನಿಗ್ರಹದ ಜಂಜಡವನ್ನು ಕಿರಿಯದರಲ್ಲಿ ಬರೆದ ಹಿರಿಯ ವಿವರಗಳು ಇಲ್ಲಿ ಕಾಣುತ್ತಿವೆ. ಬಹುಶಃ ವಚನಕಾರರ ಕೀರ್ತನಕಾರರ ಪ್ರಭಾವ ಇಲ್ಲಿ ಇಲ್ಲದೇ ಇಲ್ಲ! ಕುದುರೆ ಕಾಮದ ಸಂಕೇತ!! ಆದರೂ ಮನದ ಮಹಾದಾಶೆಗಳ ಕಟ್ಟು ಓಂಕಾರಕ್ಕೇರಿ ವೈಯಕ್ತಿಕ ಅಥವಾ ಓದುಗರ ಮನ ಸಮುದ್ರದ ತೆರೆಯಂತೆ ದಂಡೆಗೆ ಒಡೆದು ಲೀನವಾಗುವಂತಿದೆ."[೪]

ಗತಕಾಲದ ಮತ್ತು ವಾಸ್ತವಿಕತೆಯ ಭಿನ್ನತೆಯನ್ನು 'ಮುತ್ತಜ್ಜ'ನ ಮೂಲಕ ಕವಿಯತ್ರಿ ತಿಳಿಯಪಡಿಸುತ್ತಾರೆ. ಗತಕಾಲದ ನೆಮ್ಮದಿಯ ಬದುಕು ಬಾಳಬೇಕಾದರೆ ನಾವೆಲ್ಲಾ ಒಂದಾಗಿ ಬಾಳಬೇಕು ಎನ್ನುವ ಸಂದೇಶವನ್ನು ಸಾರುತ್ತಾರೆ. ಹಳೆದು – ಹೊಸದು ಸಂಗತಿಯನ್ನು ರೂಪಾತ್ಮಕವಾಗಿ ಒಂದು ಮಧುರತೆಯ ಹಿನ್ನೆಲೆಯಲ್ಲಿ ಶಕುಂತಲಾ ಅವರು ಹೇಳ ಬಯಸಿದ್ದಾರೆ.

"ಇರುಳಲಿ ಕಂಡ ಭಾವಿಯಲಿ
ಹಗಲಲಿ ಹೋಗಿ ಬೀಳುವ
ಕಣ್ಣಿದ್ದು ಕುರುಡರಾದ
ಜನರ ನೋಡಿ ಮನವು ನಗುತಿದೆ.."

(ನನ್ನ ಹಾಡು – ವ್ಯಂಗ್ಯ ನಗು, ಪುಟ–೧೯)

ಅಲ್ಲಲ್ಲಿ ಇಂತಹ ಸುಂದರವಾದ ಯುಕ್ತಿಗಳಿಂದ ಓದುಗರನ್ನು ಆಕರ್ಷಿಸುವ ಕವನಗಳಾಗಿವೆ. ಅಲ್ಲಲ್ಲಿ ಗಾದೆ ಮಾತುಗಳಿಂದ ಸಾಮಾಜಿಕ ಅಸಮತೆ ತೊರೆದು ಬದುಕಿನ ಹೊಸ ಆಹ್ವಾನವನ್ನು ನೀಡಿದ್ದಾರೆ. ಮೂಡನಂಬಿಕೆಯಿಂದ, ಅಜ್ಞಾನದಿಂದ, ತನ್ನನ್ನು ಕಳೆದುಕೊಂಡು ನಿಂತಿರುವ ಜನರನ್ನು ನೋಡಿ ಕವಿಯತ್ರಿ, ವ್ಯಂಗ್ಯ ನಗು, ಹಾಸ್ಯವಾಡಿದ್ದಾರೆ.

'ಭಾವೈಕ್ಯತೆ' ಮತ್ತು 'ಜನಸಂಖ್ಯಾ ಸ್ಫೋಟ'ದಂತಹ ಕನವಗಳ ಮುಖಾಂತರ ದೇಶದ ಸಮುಸ್ಯೆಗಳಿಗೆ ರಾಷ್ಟ್ರೀಯ ಭಾವೈಕ್ಯತೆಯ ಮಂತ್ರವ ಜಪಿಸುವ ಮೂಲಕ ಸಮಸ್ಯೆಗಳತ್ತ ಚಿಂತನೆ, ಆತಂಕ ವ್ಯಕ್ತಪಡಿಸಿದ್ದಾರೆ.

[illegible]

[illegible]

[illegible]

[illegible]

[illegible]

[illegible]

ಸಾಕ್ಷರತೆಯ ಮಹತ್ವ ಕುರಿತಂತೆ 'ಸಾಕ್ಷರತೆಯ ಗೀತೆ', 'ಅಕ್ಷರಜ್ಞಾನ', 'ಅಕ್ಷರಭಾಗ್ಯ' ಕವನಗಳಲ್ಲಿ ಜ್ಞಾನದ ಪ್ರಜ್ಞೆಯ ವಿವಿಧ ಮಗ್ಗಲುಗಳನ್ನು ಚಿತ್ರಿಸಿದ್ದಾರೆ.

"ಜ್ಯೋತಿ ಬೆಳಗುತಿದೆ ಅಕ್ಷರ ಪ್ರಭೆಯೆಂಬ
ಜ್ಯೋತಿ ಬೆಳಗುತಿದೆ
ಮನೆ ಮನಂಗಳ ಒಳಗೆ – ಹೊರಗೆ
ಅಜ್ಞಾನ ಅಳಸಿ ಸುಜ್ಞಾನವೆಂಬ ದಿವ್ಯ"

(ನನ್ನ ಹಾಡು – ಸಾಕ್ಷರತೆಯ ಗೀತೆ, ಪುಟ–೨೪)

ಎಂಬ ಕವನಗಳ ಮೂಲಕ ಅಕ್ಷರಗಳ ಜ್ಞಾನವನ್ನು ಪಡೆದು ಸಾಕ್ಷರರಾಗಿ ಬದುಕಿ ಜೀವನ ಹರದಾರಿಯನ್ನು ಸುಜ್ಞಾನದ ಮೂಲಕ ಈಜಿ ದಡ ಸೇರುವ ಭಾವನೆಯನ್ನು ಈ ಕವನಗಳು ವ್ಯಕ್ತಪಡಿಸಿವೆ.'ಮಾವ ಬಂದಾನ', ಮೂರು ದಿನದ ಸಂತೆ: 'ಅಕ್ಷರಭಾಗ್ಯ' 'ಬರ್ತಿರೇನ್ರಿ' ಕವನಗಳು ಜನಪದ ಶೈಲಿಯಲ್ಲಿ ರೂಪಿತವಾದಂತಹ ಕವಿತೆಗಳು. ಇದೇ ರೀತಿಯಲ್ಲಿ ಕವಿತೆಗಳು ಮೂಡಿ ಬಂದಿದ್ದರೆ ಕಾವ್ಯದ ಸೊಗಸು ವರ್ಧಿಸುತ್ತಿತ್ತು.

ಒಟ್ಟಿನಲ್ಲಿ, ಶಕುಂತಲಾ ಅವರ ಕಾವ್ಯ ಧೋರಣೆ ಸಾಮಾಜಿಕ ಸ್ವಾಸ್ಥ್ಯವನ್ನು ಬಯಸುತ್ತ, ಅಲ್ಲಿರುವ ಕಂದಾಚಾರವನ್ನು ಹೊರಗೆಳೆದು ಬದುಕನ್ನು ಹೊಸ ನೆಲೆಯಲ್ಲಿ ಆಶ್ವಾದಿಸುವ ಮನಸ್ಸನ್ನು ಕಾಯ್ದುಕೊಂಡ ಕವನಗಳಾಗಿವೆ. ಮುಂದುವರಿದು ವಚನ ಭ್ರಷ್ಟ ಕವನದಲ್ಲಿ ಮಾತಿನ ತಪ್ಪೊಪ್ಪಿಗೆ ವೈವಿಧ್ಯತೆಯಿಂದ ಕೂಡಿದೆ.

"ಮುದಿ ಹಕ್ಕಿ ಮಡಿಲಲಿ
ಮರಿ ಹಕ್ಕಿ ಕುಣಿದಿತ್ತು
ಮುದದಿ ಪ್ರೇಮಾನುರಾಗದಲಿ
ಮಿಂದು ಮನಮಿಡಿದಿತ್ತು"

(ನನ್ನ ಹಾಡು – ವಚನ ಭ್ರಷ್ಟ, ಪುಟ–೨೮)

ಇವತ್ತಿನ ಕಾವ್ಯ ಜಗತ್ತು ಯಾವ ದಾರಿ ಹಿಡಿದಿದೆ ಎಂಬುದನ್ನು ಸಹಜತೆಯಲ್ಲಿ ಪ್ರಶ್ನಿಸುತ್ತಾ ಅದರಿಂದ ಹೊಸ ಸಾಹಿತ್ಯ ಹೇಗೆ ರೂಪಗೊಳ್ಳಲಿಕ್ಕೆ ಅವಕಾಶವಾಯಿತು ಎಂಬ ಅಂಶವನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. ಪ್ರಸ್ತುತ ಕಲಿಯುಗದ ಚಿತ್ರಣವನ್ನು ಹಕ್ಕಿಗಳ ಮುಖಾಂತರ ಮನಮಿಡಿಯುವಂತೆ 'ವಚನಭ್ರಷ್ಟ' ಕವನ ಚಿತ್ರಿಸುತ್ತದೆ. ರೆಕ್ಕೆ

ಬಲಿತ ಹಕ್ಕಿ, ಹೆತ್ತ ಕರುಳನ್ನೇ ಮರೆತು ವಚನಭ್ರಷ್ಟನಾಗಿ ಪ್ರಾಯಶ್ಚಿತ ಮಾಡಿಕೊಳ್ಳುವ ಪರಿ ಸಹೃದಯರ ಮನ ಕರಗುವಂತೆ ಬಿಂಬಿತವಾಗಿದೆ.

ನಿಸರ್ಗಾನಂದವನ್ನು ಸವಿಯುವ 'ಉಷೆ', 'ಕಾಡು', 'ನೋಟ' ಕವನಗಳು ಸೃಷ್ಟಿಯ ಭವ್ಯತೆಯನ್ನು ವೈಭವದ ಸೊಗಸನ್ನು ನಿಸರ್ಗವನ್ನು ರಕ್ಷಿಸುವ ಜೀವನದ ಮೂಲತತ್ವವನ್ನು ಕವಿಯತ್ರಿ ಅತ್ಯಂತ ಸೊಗಸಾಗಿ ಚಿತ್ರಿಸಿದ್ದಾರೆ. 'ನಾಟ್ಯ ರಾಣಿಯ' ನಾನೇನು ಮಾಡಲಿ ನುಡಿ ಅರ್ಥಗರ್ಭಿತವಾಗಿದೆ. 'ಭ್ರೂಣಹತ್ಯೆ', 'ಬಾಳು', 'ದಾರಿ', 'ದೇಹವೇ ದೇಗುಲ', 'ತೆರಿಗೆಜ್ವರ' ಕವನಗಳಲ್ಲಿ ವಾಸ್ತವಿಕತೆಯ ಅರಿವಿದೆ.

'ಬಡಾಯಿಕೋರರು' ಕವನ ದೇಶವನ್ನು ಮುನ್ನೆಡೆಸುವರು ಬಡಾಯಿಕೊಚ್ಚುವ ಬಡವರನ್ನು ಪರಿತಪಿಸುವ, ಬಣ್ಣದ ಬದುಕಿಗೆ ಮಾರು ಹೋಗುವ ಪ್ರಸ್ತುತವಾಗಿ ನಡೆಯುವ ಸನ್ನಿವೇಶವನ್ನು ಈ ಕವನ ಚಿತ್ರಿಸುತ್ತದೆ. ಈ ಕವನಗಳನ್ನು ಮಾತಿನ ದಾಟಿಯಲ್ಲಿ ಬರೆಯುವುದಕ್ಕಿಂತ ಕವಿಯಿತ್ರಿ ಕಾವ್ಯ ದೃಷ್ಟಿಯಲ್ಲಿ ಬರೆದಿದ್ದರೆ ಕವನಗಳಿಗೆ ಗಟ್ಟಿತನ ಬರುತ್ತಿತ್ತೆನೋ ಎಂಬ ಅಂಶ ಗೋಚರಿಸುತ್ತದೆ.

'ಬೆತ್ತಲೆಸೇವೆ' ಜನರ ಮೂಢನಂಬಿಕೆಯನ್ನು ಬದಿಗಿಟ್ಟು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವ ಹಂಬಲವನ್ನು ಸೂಚಿಸುವ ಕವಿಯತ್ರಿ, ಇನ್ನೊಂದೆಡೆ ವಿಜ್ಞಾನಯುಗ ಕವನದಲ್ಲಿ ಹೊಸ ಹೊಸ ಆವಿಷ್ಕಾರಗಳಿಂದ ಇವತ್ತಿನ ಸಮಾಜರೂಪಗೊಂಡ ಬಗೆಯನ್ನು ಹೇಳುತ್ತಾ ಅದರಿಂದ ಆಗುವ ಹಾನಿ ಆಧುನಿಕ ಸಮಾಜದಲ್ಲಿ ಈ ಎಲ್ಲ ಅಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅದರ ಅಂತರಂಗದ ಹಿನ್ನೆಲೆ ಈ ಕವನದಲ್ಲಿ ಹಾಸೂ ಹೊಕ್ಕಾಗಿದೆ.

"ಈ ಕಲಿಯುಗದಲಿ ಆಕಾಶಕ ಹಾರ್‍ಯಾರ
ಗ್ರಹಗಳ ಮೇಲೆ ನಡೆದಾರ
ದೇವರಿಗೆ ಸವಾಲು ಹಾಕ್ಯಾರ
ದೇವರೇ ನೀನೆಲ್ಲಿರುವಿಯೆಂದು ಕೇಳ್ಯಾರ"

(ನನ್ನ ಹಾಡು– ವಿಜ್ಞಾನಯುಗ, ಪು–೪೨)

ವೈಜ್ಞಾನಿಕವಾಗಿ ಮುನ್ನುಗ್ಗಿದ ಮಾನವ ತಾನು ಸೃಷ್ಟಿಸಿದ ಯಂತ್ರಗಳನ್ನು ಬಳಸಿ ಜೀವನದಲ್ಲಿ ನರಳಾಡಿ ಮರಳಿ ಬಾರದ ದಾರಿಗೆ ಹಿಡಿಯುವ ಪರಿಯನ್ನು

ಈ ಕವನ ಚಿತ್ರಿಸುತ್ತದೆ. ಈ ಮೇಲಿನ ಸಮಸ್ಯೆಗೆ ಸೂಕ್ತವೆನ್ನುವಂತೆ ಈ ಮುಂದಿನ ಕವನ

"ಮಾರಕಾಸ್ತ್ರಗಳ ನೀ ಬಳಸಿದರೇನು
ಬ್ಯಾಂಕಿನಲ್ಲಿ ಹಣ ನೀ ಲೂಟಿ ಮಾಡಿದರೇನು
ಬೆಂಬಿಡದ ಭೂತ ನಿನ್ನನು ಬೆನ್ನಟ್ಟಿದೆ ಗೊತ್ತೇನು
ಅದರಿಂದ ನೀನೇನು ಪಡೆಯಲು
ಸ್ಥಿರವಾಗಿ ಉಳಿಯುವೆಯಾ"

(ನನ್ನಹಾಡು–ಸ್ಥಿರವಾಗಿ ಉಳಿಯುವೆಯಾ? ಪು–೪೫)

ಸಾಮಾಜಿಕ ಜೀವನದಲ್ಲಿ ನಡೆಯುತ್ತಿರುವ ಸುಲಿಗೆ, ಕಳ್ಳತನ ಮುಂತಾದವುಗಳನ್ನು ಜನರಲ್ಲಿ ತಲ್ಲಣವನ್ನುಂಟು ಮಾಡಿವೆ. ಅವುಗಳಿಗೆ ಹೇಗೆ ಉತ್ತರಿಸಬೇಕು ಎಂಬುದನ್ನು ಈ ಕವನ ಸೂಕ್ತವಾಗಿ ಸೂಚಿಸುತ್ತದೆ. ಮನುಜಕುಲಕ್ಕೆ ಸ್ಥಿರವಾಗಿ ಉಳಿಯುವೆಯಾ? ಎಂಬ ಪ್ರಶ್ನಿಸುವ ಪರಿ ಮಾನವನ ಬದುಕಿನ ಸ್ಥಿರತೆಯನ್ನು ಸೂಚ್ಯವಾಗಿ ಈ ಕವನ ಬಿಂಬಿಸುತ್ತದೆ.

'ಕನ್ನಡನಾಡು' ಕವನ ಕನ್ನಡ ನಾಡಿನ ಹಿರಿಮೆ ಗರಿಮೆಯನ್ನು ಭಾಷೆಯ ಅಭಿಮಾನ ತಾಳಿರುವುದು; ಜೀವನವನ್ನು ಸಿಹಿಯಾಗಿ ಪರಿವರ್ತಿಸುವ ಪರಿಯನ್ನು 'ಸಿಹಿಮುತ್ತು' ಕವನ ಸೂಚಿಸುತ್ತದೆ. 'ಭಲ' ಕವನ ಹೆಣ್ಣಿಗೆ ಭಲ ತುಂಬಿ ಮುನ್ನುಗ್ಗುವ ಭಾವನೆಯನ್ನು ವ್ಯಕ್ತಪಡಿಸಿದರೆ 'ಏಕಾಂಗಿ', 'ಒಂಟಿಜೀವ' ಕವನದಲ್ಲಿ ಹೃದಯದ ಮಿಡಿತವಿದೆ.

ಬಸವರಾಜ ಕಟ್ಟಿಮನಿಯವರ ಬದುಕಿನ ಚಿತ್ರಣವನ್ನು 'ಬಕ' ದಲ್ಲಿ ಮೂಡಿದೆ. 'ಲಾಗ' ಎಚ್ಚರಿಕೆಯ ಗಂಟೆ ನೀಡಿದರೆ 'ತ್ಯಾಗ'ದಲ್ಲಿ ಸ್ವರೂಪದ ಅರಿವು ಮೂಡಿದೆ. ದೇಶಪ್ರೇಮ ಸಾರುವ 'ವೀರಯೋಧರು' ಸಹಸ್ರಮಾನ ಕವನವು ಆಶಾಭಾವನೆಯ ಹೊಸ ಸಹಸ್ರಮಾನ ಕಾಣುವ ತುಡಿತ ಬಿಂಬಿತವಾಗಿದೆ.

ಕವಿಯತ್ರಿಗೆ ದೇವರಲ್ಲಿ ಭಕ್ತಿ ಇದ್ದರೂ ವಿಚಾರದ ತೆರೆಸರಿಯಾಗಿದೆ. ಮುಗ್ಧತೆಯಿಂದ ಬಿಡುಗಡೆ ಹೊಂದುವ ಕಚಿಪಿಚಿ ಇವರಲ್ಲಿದೆ. 'ಚೈತ್ರಮಾಸ', 'ಶ್ರಾವಣಮಾಸ' ಕವಿತೆಗಳಲ್ಲಿ ನಿಸರ್ಗಕ್ಕೂ ಭಕ್ತಿಗೂ ತಳಕು ಹಾಕಲಾಗಿದೆ. ಮಂತ್ರಾಲಯ ಗುರು ಸಾರ್ವಭೌಮ ಶ್ರೀ ರಾಘವೇಂದ್ರ ಗುರುಗಳ ಸ್ತುತಿದೊಂದಿಗೆ ನನ್ನ ಹಾಡು

ಮಂಗಲ ಹಾಡಿರುವುದು ಸುಶ್ರಾವ್ಯವಾಗಿದೆ. ಹೀಗೆ ಶಕುಂತಲಾ ದಂಡಿಗಿಯವರು ಬದುಕಿನ ನಾನಾ ಮುಖಗಳನ್ನು ತಮ್ಮ ಕವನಗಳ ಮೂಲಕ ಕಟ್ಟಿಕೊಡುತ್ತಾ, ಗೋಕಾಕ ಪ್ರಾದೇಶಿಕ ಮಹಿಳಾ ಸಾಹಿತಿಯಾಗಿ, ಕವಿಯತ್ರಿಯಾಗಿ ಹೆಸರನ್ನು ಪಡೆದುಕೊಂಡವರು.

ಸುಗಂಧಾ ಡಂಬಳ :

ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ಜನಿಸಿದ ಸುಗಂಧಾ ಡಂಬಳ (ಆಲತಗೆ) ಅವರು ವೃತ್ತಿಯಿಂದ ಒಬ್ಬ ಶಾಲಾ ಅಟೆಂಡರ್‌ರಾಗಿದ್ದರೂ ಪ್ರವೃತ್ತಿಯಿಂದ ಬದುಕಿನುದ್ದಕ್ಕೂ ಸಮಾಜ ಸೇವಕಿಯಾಗಿ, ಬರಹಗಾರ್ತಿಯಾಗಿ, ಕವಿಯತ್ರಿಯಾಗಿ, ವಿವಿಧ ಸಂಘ-ಸಂಸ್ಥೆಗಳಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡವರು. ಬಾಲ್ಯದಲ್ಲಿ ಕಷ್ಟ -ನಷ್ಟಗಳನ್ನು ಅನುಭವಿಸಿದ ಆಲತಗಿಯವರು ಎಸ್.ಎಸ್.ಎಲ್.ಸಿ ನಂತರದಲ್ಲಿ ಗೋಕಾಕದ ಸಿ.ಎಸ್. ಅಂಗಡಿ ಪ್ರೌಢಶಾಲೆಯಲ್ಲಿ ಅಟೆಂಡರ್‌ರಾಗಿ ಸೇವೆ ಸಲ್ಲಿಸಿದವರು. ಅದು ಅವರ ಬಡತನಕ್ಕೆ ಬೆಂಗಾವಲಾಗಿ ನಿಂತಿತು. ಕೆಲಕಾಲ ನಂತರ ದಾಂಪತ್ಯ ಜೀವನಕ್ಕೆ ಕಾಲಿರಿಸಿದ ಅವರ ಪತಿಯವರಾದ ಮಲ್ಲಿಕಾರ್ಜುನ ಡಂಬಳ ಅವರ ಅನಿರೀಕ್ಷಿತ ಸಾವಿನಿಂದ ತತ್ತರಿಸಬೇಕಾದುದು ವಿಧಿಯ ವಿಲಾಸವೇ ಸರಿ. ಬದುಕಿನ ಕಷ್ಟ -ಕೋಟಲೆಗಳನ್ನು ಮರೆಯಲು ಸುಗಂಧಾ ಡಂಬಳವರು ಸಾಹಿತ್ಯ ಕ್ಷೇತ್ರಕ್ಕೆ ಇಳಿದರು.

ಗೋಕಾಕ ತಾಲೂಕಿನ ಮಹಿಳಾ ಕಾವ್ಯ ಕ್ಷೇತ್ರಕ್ಕೆ ಹೊಸ ಹೆಜ್ಜೆಯನ್ನಿಟ್ಟುಕೊಂಡು ಬಂದ ಇವರು ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವಲ್ಲಿ ಉಪಸ್ಥಿತಿಯಿದ್ದು, ತಮ್ಮ ಭಾವ-ಅನುಭಾವಗಳನ್ನು ಅಕ್ಷರಗಳ ಮೂಲಕ ಕಾವ್ಯ ರಂಗೋಲಿ ಹಾಕಲು ಪ್ರಯತ್ನಿಸಿ ಕವಿಯತ್ರಿಯಾಗಿದ್ದಾರೆ. ಅಂದವಾದ ಕಾವ್ಯ ಸಂಗ್ರಹ "ಭಾವೈಕ್ಯ" ಕೃತಿಯೊಂದಿಗೆ ಸಾಹಿತ್ಯಲೋಕಕ್ಕೆ ಪಾದಾರ್ಪಣೆ ಮಾಡಿದ. ಸುಗಂಧಾ ಡಂಬಳ ಅವರು ಉತ್ತಮ ಬರಹಗಾರ್ತಿರೆನ್ನುವಲ್ಲಿ ಎರಡು ಮಾತಿಲ್ಲ. ತಮ್ಮ ಸ್ವರಚಿತ ಕವಿತೆ-ಕವನ ಇತ್ಯಾದಿಗಳನ್ನು ಭಾರತ ದೇಶದ ಮೂಲೆ ಮೂಲೆ ರಾಜ್ಯಗಳಲ್ಲಿ ನಡೆಸಿದ ಬೃಹತ್ ಸಮಾರಂಭಗಳಲ್ಲಿ ವಾಚನ ಮಾಡಿದ ಕೀರ್ತಿ ಸುಗಂಧಾಅವರದು.

'ಭಾವೈಕ್ಯ' ಕವನ ಸಂಕಲನ ಅತ್ಯಂತ ಸರಳವಾಗಿ ತಾತ್ವಿಕ ನಿಟ್ಟಿನಲ್ಲಿ ಒಡನಾಳದಿಂದ ಉಕ್ಕಿರುವ ನಲವತ್ತು ಕವನಗಳ ಗುಚ್ಛ. "ಲೋಕಾನುಭವದ ಸತ್ಯ

ಸಂದೇಶ ಶಾಸ್ತ್ರೀಯ ದೃಷ್ಟಿಯಲ್ಲಿ ಮಹತ್ವ ಪಡೆದಿದೆ. ಕರಿಯನ್ನು ಕನ್ನಡಿಯಲ್ಲಿ ತೋರಿಸುವ ಕೆಲಸ. ಇವರಿಂದಾಗಿದೆ"[೫] ನಾಡುನುಡಿಯ ಕಳಕಳಿಯನ್ನು ತಮ್ಮ "ಕನ್ನಡವೇ ಉಸಿರು" ಕಾವ್ಯದಲ್ಲಿ ಈ ರೀತಿಯಲ್ಲಿ ಅಭಿವ್ಯಕ್ತಿಸಿದ್ದಾರೆ.

"ಸಿರಿಗನ್ನಡ ನೆಲ ಜಲ ಭಾಷೆ
ಸಂಸ್ಕೃತಿಯ ಕಣಜವು ಇನ್ನಿಲ್ಲ ಸಾಗರದಾಚೆ ॥
ಇಂತೀ ಕನ್ನಡ ದೈಸಿರಿಯ ಅರಿತು
ಕನ್ನಡ ಕಡುಗಲಿಗಳೆ ವೀರಾವೇಶದಿ ಎದ್ದೇಳಿ"

(ಭಾವೈಕ್ಯ – ಕನ್ನಡವೇ ಉಸಿರು, ಪು–೧೩)

ನಾಡಿನ ಮಣ್ಣಿನ ಋಣವನ್ನು ತಮ್ಮ ಕವನದ ಮೂಲಕ ತೀರಿಸಲು ಯತ್ನಿಸಿದವರು. ಬಡತನದ ಕಹಿ ಅನುಭವದಲ್ಲಿಯೇ ನಾಡು–ನುಡಿ ಚಿಂತನೆಗೆ ಕೈಹಾಕಿದವರು. ಯಾವುದೇ ರೀತಿಯಲ್ಲಿ ಇವರ ಕವನಗಳು ಸುಗಂಧ ತುಂಬಿದ ಪರಿಮಳದ ಹಾಗೇ ಸೂಸುತ್ತದೆ ಎಂದು ಹೇಳುವ ಮೂಲಕ ಯುವ ಜನತೆಯನ್ನು ಎಚ್ಚರಿಸುವ ಪ್ರಯತ್ನ ಮಾಡಿದ್ದಾರೆ. ಈ ಕವನದಲ್ಲಿ ಕನ್ನಡ ಪರ ಕಾಳಜಿಯನ್ನು ಕವಿಯತ್ರಿ ವ್ಯಕ್ತಪಡಿಸಿದ್ದಾರೆ. ಕವನ ಸಂಕಲನದ ಮೊದಲ ಕವನ 'ಜಾಗೃತಿ'ಯಲ್ಲಿಯೂ ಅದೇ ಪ್ರಯತ್ನವಿದೆ. ಎದ್ದೇಳು, ಜಾಗ್ರುತಳಾಗು, ನಾಡನ್ನು ರಕ್ಷಿಸು ಮುಂತಾದ ಪ್ರೇರಕವಾದ ಅಂಶಗಳು ಸೋದಾಹರಣವಾಗಿ ಇವರ ಕವನಗಳಲ್ಲಿ ಗುರುತಿಸಲಾಗಿದೆ.

"ಏಳುಸಖಿ ಎದ್ದೇಳು
ಜಾಗೃತಳಾಗು ಎದ್ದೇಳು
ಇಂದಿನಾ ದಿನದಲಿ ಲಾಂಛನದಾ ಮೋಡಿಯಲಿ
ಒಳಸಂಚಿನಾ ತೆರೆಯಲಿ ಅಡಗಿದಾಗುಟ್ಟನು
ದಿಟ್ಟತನದಿ ಎದುರಿಸಲು ಟೊಂಕಕಟ್ಟಿ ಎದ್ದೇಳು"

(ಭಾವೈಕ್ಯ–ಜಾಗೃತಿ, ಪು–೧)

ಗೆಳತಿಯನ್ನು ಸಾಂಕೇತಿಕವಾಗಿರಿಸಿಕೊಂಡು ಹೆಣ್ಣಿನ ಮಹತ್ವವನ್ನು ತಿಳಿಸುತ್ತಾ, ಹೆಣ್ಣಿಗೆ ರೋಷಾವೇಶವನ್ನು ನೀಡಿದ್ದು, ಕೃತಿಯ ಮೌಲ್ಯವನ್ನು ಹೆಚ್ಚಿಸುತ್ತದೆ. ಪ್ರಸ್ತುತ ದಿನದಲ್ಲಿ ನಡೆಯುತ್ತಿರುವ ಅನ್ಯಾಯ, ಶೋಷಣೆ, ತಾರತಮ್ಯಗಳ ವಿರುದ್ಧ ಪ್ರತಿಭಟಿಸುವ 'ಜಾಗೃತಿ' ಕವನದಿಂದ ಮಹಿಳೆಯರಿಗೆ ಹೊಸ ಚೈತನ್ಯವನ್ನು ತುಂಬುವ ಪ್ರಯತ್ನ ಮಾಡಿದ್ದಾರೆ.

ಈ ಭಾವೈಕ್ಯ ಕೃತಿ ಸಂಗ್ರಹದ ಆರಂಭದಲ್ಲಿ ಕವಿತೆಗಳು ನಾಡಪದಗಳು ಹೆಚ್ಚಿಂದು ತೋರುತ್ತಿದ್ದಂತೆ ಭಾವ ಪ್ರಧಾನ ಕವಿತೆಗಳಾದ 'ಸ್ನೇಹ', 'ಹೂವಾಡಗಿತ್ತಿ', 'ಶ್ರಾವಣ', 'ಯುಗಾದಿ', 'ದೀಪಾವಳಿ' ಓದುಗರ ಮನವನ್ನು ಗಟ್ಟಿಗೊಳಿಸಿವೆ.

"ಸ್ನೇಹ ಒಂದು ಅಮೃತ ಕಡಲ
ಸವಿದಷ್ಟು ಸ್ನೇಹ ಸೆಲೆ ವಿಶಾಲ
ಸ್ನೇಹದ ಮರ್ಮವನರಿತರೆ ಜಗವೆಲ್ಲ
ವಿಶ್ವವೆ ಮನೆ, ಮನುಕುಲವೆ ಕುಟುಂಬ ಅಹುದಲ್ಲ"

(ಭಾವೈಕ್ಯ –ಸ್ನೇಹ, ಪು–೧೪)

ಸ್ನೇಹ ಒಂದು ಅಮರವಾದ ಬಾಂದವ್ಯದ ಪ್ರತಿರೂಪ. ಇಲ್ಲಿ ಸ್ವಚ್ಛಂದದ ಸಂಗತಿಯು ಸ್ನೇಹ ಅಂಕುರದಲ್ಲಿ ಕಂಡು ಬಂದಿದೆ. ಆ ಸ್ನೇಹ ವಿಶ್ವಕ್ಕೆ ಮಾದರಿಯಾಗಬೇಕೆನ್ನುವ ತುಡಿತ ತೀವ್ರತರವಾಗಿ ಸುಗಂಧಾ ಅವರಲ್ಲಿ ಕಂಡು ಬರುತ್ತದೆ. ಇವತ್ತಿನ ಜಾಗತೀಕರಣದಲ್ಲಿ ಈ ಸ್ನೇಹಬಂಧನ ಸಡಿಲಾಗುತ್ತಾ ಹೋಗುತ್ತಿದ್ದೇ ಎಂಬ ಅನುಮಾನವನ್ನು ಅವರು ವ್ಯಕ್ತಪಡಿಸುತ್ತಾರೆ.

ಒಬ್ಬ ಮಹಿಳಾ ಉದ್ಯೋಗಿನಿಯಾಗಿ ಡಂಬಳವರು ತನ್ನ ಬದುಕಿನುದ್ದಕ್ಕೂ ಕಂಡುಂಡ ನೋವು, ಅವಮಾನ ತೀವ್ರವಾಗಿ ಕಾಡಿದ ದ್ವಂದ್ವಗಳನ್ನು ಅನುಭವಗಳ ಮೂಲಕ ಕಾವ್ಯದಲ್ಲಿ ಅಭಿವ್ಯಕ್ತಪಡಿಸಿದ್ದೂ, ಸ್ತುತ್ಯಾರ್ಹದ ಸಂಗತಿಯಾಗಿದೆ. ಶ್ರೀಮತಿ ಸುಗಂಧಾ ಡಂಬಳರವರು ಕರ್ನಾಟಕ ರಾಜ್ಯದ ಶೈಕ್ಷಣಿಕ ಕ್ಷೇತ್ರದಲ್ಲಿ ತನ್ನದೇ ಆದ ಸಾಧನೆಯ ಅಚ್ಚನ್ನು ಒತ್ತಿದ ಕೆ.ಎಲ್.ಇ. ಸಂಸ್ಥೆಯ ಆಧಾರ ಸ್ಥಂಭಗಳಾದ ತ್ಯಾಗವೀರಲಿಂಗ ರಾಜ, ಸರದಾರ ಶ್ರೀ ವೀರನಗೌಡರು, ಚಿಕ್ಕೋಡಿ ಪಂಡಿತಪ್ಪನವರು, ಶ್ರೀ ಮಹಾರುದ್ರಪ್ಪ, ಸಾಖರೆ, ಹಂಚಿನಾಳರು, ಶ್ರೀ ಬಸವಂತಪ್ಪ ಮಮದಾಪೂರ ಮುಂತಾದ ಸಂಸ್ಥಾಪನಾಧೀರರನ್ನು ಕುರಿತ ಕವಿತೆಗಳು ಇಲ್ಲಿ ವ್ಯಕ್ತವಾಗಿವೆ. ಕೆ.ಎಲ್.ಇ ಸಂಸ್ಥೆಯನ್ನು ಸಂಸ್ಥಾಪಕರನ್ನು ಕುರಿತು ಬರೆದಾದ ಒಂದು ಪ್ರತ್ಯೇಕ ಕೃತಿಯನ್ನು ತಂದಿದ್ದರೆ ಒಳ್ಳೆಯದಿತ್ತೇನೋ ಅನಿಸುತ್ತದೆ. ಏಕೆಂದರೆ "ಭಾವೈಕ್ಯ" ತಲೆಬರಹದ ಈ ಕೃತಿಯಲ್ಲಿ ಸಂಸ್ಥೆ ಹಾಗೂ ವ್ಯಕ್ತಿಯ ಕುರಿತ ಕವನಗಳು ಪ್ರತ್ಯೇಕತೆಯ ಭಾವವನ್ನು ಓದುಗರಲ್ಲಿ ಹುಟ್ಟಿಸಿದ್ದು ನನ್ನನ್ನು ಕೂಡ ಎಚ್ಚರಿಸಿತು.

'ಚೇತನಶಕ್ತಿ' ಕವನದಲ್ಲಿ ರಾಷ್ಟ್ರದೇಳ್ಗೆಗೆ ಭಾವೈಕ್ಯದಿಯಾಗಿ ಮಹಾತ್ಮರು ಹುಟ್ಟಿದಂತಹ ನಾಡಿನಲ್ಲಿ ನವಶಕ್ತಿಗಳು ಒಂದಾಗಿ ಭರತಭೂಮಿಯನ್ನು ರಕ್ಷಿಸುವಂತಹ ಚೇತನವನ್ನು ಈ ಕವನದಲ್ಲಿ ವ್ಯಕ್ತವಾಗಿದೆ. 'ವಿಶ್ವಗುರು' ಕವನದಲ್ಲಿ ಸ್ತ್ರೀ ಸ್ವಾತಂತ್ರ್ಯವನ್ನು ಸಾರಿದ ಕಾಯಕ ತತ್ವದ ಮೂಲಕ ಜನತೆಯನ್ನು ಎಚ್ಚರಿಸಿದ ಸ್ತ್ರೀ ಶೋಷಣೆಗೆ ಪ್ರತಿಭಟಿಸಿದ ವಿಶ್ವಜ್ಯೋತಿ ವಿಶ್ವಗುರು ಇನ್ನೊಮ್ಮೆ ಅವತರಿಸು ಎಂದು ತಮ್ಮ ಕವನದಿಂದ ನಿವೇದಿಸಿದ್ದಾರೆ.

"ಶರಣು ಬಸವ ಪ್ರಭುವೆ
ಶರಣು ವಿಶ್ವಗುರುವೆ
ಬಾರಯ್ಯ ಧರೆಗವತರಿಸಿ ಇನ್ನೊಮ್ಮೆ"

(ಭಾವೈಕ್ಯ-ವಿಶ್ವಗುರು, ಪುಟ-೪)

"ಸ್ವಾತಂತ್ರ್ಯ ಜ್ಯೋತಿ ಸಂಗೊಳ್ಳಿ ರಾಯಣ್ಣ" ಕವನದಲ್ಲಿ ಸ್ವಾಮಿನಿಷ್ಟೆ ದೇಶಭಕ್ತ ಬೆಳಗಾವಿಯ ಕಂದ ರಾಯಣ್ಣನ ಒಂದ್ದೊಂದು ಗಳಿಗೆ ನೆನೆದರೆ ನಿಜದೇಶ ಭಕ್ತಿ ಮೂಡುತ್ತದೆ. ಇಂದಿನ ಜನರ ಮನದಲ್ಲಿ ದೇಶ ನನಗಾಗಿ ಏನು ಮಾಡಿತು ಅನ್ನುವದಕ್ಕಿಂತ ದೇಶಕ್ಕಾಗಿ ನಾನೇನು ಮಾಡಿದೇನು ಅನ್ನುವ ಮನೋಬಲ ಪ್ರತಿಯೊಬ್ಬರಲ್ಲಿಯು ಇದ್ದರೆ, ಎಂಥ ಶ್ರೇಷ್ಟ ದೇಶಭಕ್ತಿ ಉಂಟಾಗುತ್ತದೆ. ಆದರೆ ಇವತ್ತಿನ ಈ ಸಮಾಜದ ಘಾತುಕ ಶಕ್ತಿಗಳಲ್ಲಿ ಅದು ಕಡಿಮೆಯಾಗುತ್ತಿರುವುದನ್ನು ಎಚ್ಚರಿಸಲು ಇವರ ಕವನಗಳಿಂದ ಸಾಧ್ಯವಿದೆ.

"ಸ್ವಾತಂತ್ರ್ಯ ಗೀಗೀಪದ" ದಲ್ಲಿ ಪರಕೀಯರ ಅಟ್ಟಹಾಸವನ್ನು ಮೆಟ್ಟಿದ ಗಾಂಧೀಜಿ, ನೆಹರು, ನೇತಾಜಿ, ಪಟೇಲ, ನವರೋಜಿ ಮುಂತಾದ ಮಹಾತ್ಮರು ತೋರಿದ ಶಾಂತಿ ಅಸ್ತ್ರದಿಂದಾಗಿ ಬೆಂಕಿ ಬಿತ್ತು ಬಿಳಿಯರ ಹೊಟ್ಯಾಗ ಜಯಾ ದೊರಕಿತು ಪಟ್ಟು ಹಿಡಿದಾಗ ಈ ನುಡಿ ಕಾವ್ಯದ ಕಿಡಿಗಳಾಗಿ ಸಾಹಿತ್ಯ ಸಿಂಚನ ಗೊಂಡಿದ್ದಾರೆ.

"ಏಳಿ ಎದ್ದೇಳಿ ಭಾರತೀಯರೆ ಎದ್ದೇಳಿ
ನಿದ್ರೆಯ ಸೋಗಿನಲಿರುವ ಹಿರಿಯರೆ ಎದ್ದೇಳಿ"

(ಭಾವೈಕ್ಯ- ಏಳಿ ಎದ್ದೇಳಿ, ಪು-೮)

ಎಚ್ಚರಿಕೆಯ ಧ್ವನಿಪಾತಳಿ ಇಲ್ಲಿ ರೂಪಗೊಂಡಿದೆ. ಅದು ರಾಷ್ಟ್ರಕ್ಕಾಗಿ ಜನರನ್ನು ಒಂದುಗೂಡಿಸುವ ಉದ್ದೇಶವನ್ನು ಇಟ್ಟುಕೊಂಡ ಇಲ್ಲಿಯ ಕವನ ರಚಿತವಾಗಿದೆ. ಸ್ವಾತಂತ್ರ್ಯವನ್ನು ಪಡೆದರೂ ಹೊಸತೇನನು ಕಾಣದೆ ದೇಶದ ಜಲ್ವಂತ ಸಮಸ್ಯೆಗಳ ಕುರಿತು ಜಾಗೃತ ಮನೋಭಾವನೆಯನ್ನು ವ್ಯಕ್ತಪಡಿಸುತ್ತದೆ.

"ತೊಟ್ಟಿಲತೂಗೋ ಕೈ ಜಗತ್ತ ಆಳತೈತಿ
ಹೆಣ್ಣಿನ ಕೈಯಾಗ ಅರಳಿದ ಪುಷ್ಪಪುರುಷ ಅಂತತಿಳಿತೈತಿ
ಅಡಗೀಮನಿ ಬಿಟ್ಟ ಹೊರಗ ಬರ್ರಿ"

(ಭಾವೈಕ್ಯ – ಸಬಲೆ, ಪು–೧೧)

ಸ್ತ್ರೀ ಸಂವೇದನೆಯ ಒಳತುಡಿತ ಈ ಕವನದಲ್ಲಿ ಎದ್ದು ಕಾಣುತ್ತದೆ. ವೈಚಾರಿಕ ಹಿನ್ನಲೆಯ ಭೂಮಿಕೆಯು ಇದರಲ್ಲಿದೆ. ಸುಗಂಧಾರವರು ಸ್ವತಃ ಒಬ್ಬ ಮಹಿಳೆಯಾಗಿ ಒಬ್ಬ ಹೆಣ್ಣು ಸಬಲೆಯಾಗಬೇಕಾದರೆ ಅಡಗೀಮನಿ ಬಿಟ್ಟ ಹೊರಗ ಬರ್ರಿ ಎಂದು ಮಹಿಳೆಯರನ್ನು ಸಬಲೀಕರಣದತ್ತ ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಈ ಕೃತಿಯಲ್ಲಿ ಶಿಶುಗೀತೆಗಳೂ ಕೂಡ ಬಂದಿವೆ. 'ಹಳ್ಳಿಯ ಗೌಡ' ಮಕ್ಕಳ ಕವಿತೆಯಲ್ಲಿ ಕೊನೆ ಚರಣ ಈ ರೀತಿಯಲ್ಲಿ ಮೂಡಿ ಬಂದಿದೆ.

"ಹೊಳಿದಂಡಿ ಮ್ಯಾಗ ನಮ್ಮ ಹೊಲ
ಬೆಳೆದು ನಿಂತೈತಿ ಬಿಳಿಜೋಳಾ ನಿಲಾ
ಹಚ್ಚ ಹಸಿರ ನೋಡು ಸುತ್ತೆಲ್ಲಾ
ನನ್ನ ಕಂದ ನೀನೇ ಅನ್ನದಾತ ಜಗಕ್ಕೆಲ್ಲ

(ಭಾವೈಕ್ಯ – ಹಳ್ಳಿಯಗೌಡ, ಪು–೩೧)

ಜಾನಪದದ ಸೊಗಡನ್ನು ಬಿಚ್ಚಿಕೊಳ್ಳುತ್ತಾ ಡಾ. ಬೆಟಗೇರಿ ಕೃಷ್ಣಶರ್ಮರನ್ನು ನೆನಪಿಸುತ್ತದೆ. ಆನಂದಕಂದರ ಕವನದ ಒಂದೆರಡು ಸಾಲುಗಳು ಇಲ್ಲಿ ಪುನರಾವೃತ್ತಿಗೊಂಡಿವೆ. ಒಂದರರ್ಥದಲ್ಲಿ ಕವಿಯತ್ರಿ ಕವನ ಕಟ್ಟುವುದರಲ್ಲಿ ಸೋತಿದ್ದಾರೆ ಎಂಬ ಅಂಶ ಸ್ಪಷ್ಟವಾಗಿ ಗೋಚರಿಸುತ್ತದೆ. ಹಳ್ಳಿಯ ಮುಗ್ಧ ಜೀವನದ ಪರಿಸರದ ಹಿನ್ನಲೆಯಲ್ಲಿ ಈ ಕವನ ರಚಿತಗೊಂಡಿದೆ. ರೈತನ ದುಡಿಮೆ, ಆತನ ಕಾರ್ಯ ತೀರಾ

[illegible]

ಸಹಜತೆಯಲ್ಲಿ ಜನಪದ ನುಡಿಗಟ್ಟಿನಿಂದ ಸಹೃದಯ ಮೈ ರೋಮಾಂಚನ ಗೊಳಿಸುವ ಹಾಗೆ ಕಂಡು ಬಂದಿದೆ.

'ಗೋಕಾಕ ಜಲಪಾತ' ಕವನವು ಗೋಕಾಕ ಜಲಪಾತದ ರಮಣೀಯತೆಯ ದೃಶ್ಯವನ್ನು ದೃಶ್ಯ ಕಾವ್ಯವಾಗಿ ಈ ಕವಿತೆ ಮೂಲಕ ಹೊರ ಸೂಸಿದ್ದಾರೆ.

"ಎನಿತು ಸುಂದರ ಗೋಕಾಕ ಜಲಪಾತ
ನೆಲಮುಗಿಲ್ಗಳ ನೊಂದು ಗೂಡಿಸುವ ಸುಂದರನೋಟ"

(ಭಾವೈಕ್ಯ-ಗೋಕಾಕ ಜಲಪಾತ, ಪು-೩೬)

ಎಂಬ ಕವನದ ಮೂಲಕ ಗೋಕಾಕ ಜಲಪಾತದ ಸೊಬಗನ್ನು ವ್ಯಕ್ತಪಡಿಸಿದ್ದಾರೆ. ಶಕ್ತಿ ದೇವತೆಗಳಲ್ಲಿ ಒಂದಾಗಿರುವ ದ್ಯಾಮವ್ವನ ಕುರಿತು ಅವಳ ಜಾತ್ರೆಯ ವೈಭವದ ಹಿನ್ನಲೆಯಲ್ಲಿ ಐದು ವರ್ಷಕ್ಕೊಮ್ಮೆ ಸಂಭ್ರಮದ ದ್ಯಾಮವ್ವನ ಜಾತ್ರೆಯ ಮೆರಗನ್ನು 'ನಮ್ಮೂರ ದ್ಯಾಮವ್ವ' ಕವನ ವ್ಯಕ್ತಪಡಿಸುತ್ತದೆ.

ಸಾಮಾಜಿಕ ಜನ ಜೀವನದ ಕಳಕಳಿಯನ್ನು ಕವಿಯತ್ರಿ ಸುಗಂಧಾ ಡಂಬಳವರು 'ನೇತ್ರದಾನ' ಕವನ ಮೂಲಕ ಅಂಧರಿಗೆ ಹೊಸಬೆಳಕನ್ನು ಮತ್ತು ನೇತ್ರದಾನದ ಮಹತ್ವವನ್ನು ಇಲ್ಲಿ ತಿಳಿಯಪಡಿಸುತ್ತಾರೆ.

"ನಮ್ಮನ್ನು ಹೊತ್ತು ಹೆತ್ತ ತಾಯಿ
ಜಗದಿ ಮಾನ್ಯ ನಮ್ಮ ತಾಯಿ
ಸರಿಸಾಟಿ ಯಾರಿಲ್ಲ ನಿನಗೆ ತಾಯಿ
ಹೃದಯ ಮಂದಿರದ ಪೂಜಿತೆ ತಾಯಿ"

(ಭಾವೈಕ್ಯ - ತಾಯಿ, ಪು-೪೦)

ಭಾವೈಕ್ಯ ಕವನ ಸಂಕಲನದ ಕೊನೆಯ ಕವನ 'ತಾಯಿ' ತಾಯಿಯ ಋಣವನ್ನು ಅವಳ ದುಗುಡವನ್ನು ಹೆತ್ತು ಹೊತ್ತ ತಾಯಿಯನ್ನು ರಕ್ಷಿಸಿ ಧನ್ಯರಾಗಿ ಎಂದು ಕವಿಯತ್ರಿಯ ಆಶಯ. "ಭಾವೈಕ್ಯ ಕವನ ಸಂಕಲನದಿಂದ ಚಿಮ್ಮಿದ ಕವಿತೆಗಳು ಪ್ರಕಾಶ ಸ್ವರೂಪದೆಂದು ಕರೆದರೆ ತಪ್ಪಾಗದು. ಓದುಗರೆ ತೃಷೆನಶೆಯಾಗಬಲ್ಲ ಕವನ ಸಂಕಲನ ಎನ್ನುವುದರಲ್ಲಿ ಅರ್ಥವಿದೆ."[೬]

ಕವಿತಾ ಸಂಗ್ರಹದ ಮುದ್ರಣ ಅಂದವಾಗಿದ್ದೂ ಮುನ್ನುಡಿ ಪದಗಳು ನಿಜಕ್ಕೂ ರಂಗೋಲಿಯಂತೆ ರಾರಾಜಿಸಿವೆ. ಒಟ್ಟಾರೆ ಇಲ್ಲಿಯ ಪ್ರತಿ ಕವಿತೆಗಳು ಕವಿಯತ್ರಿ

ಏನು ಹೇಳಬೇಕಾಗಿತ್ತೋ ಅದನ್ನು ಸ್ಪಷ್ಟ ಹಾಗೂ ಅಂದವಾಗಿ ಹೇಳಿ ಯಶಸ್ವಿ ಕವಿತೆಗಳೆನಿಸಿವೆ.

"ಗಡಿಗ್ಯಾಗ ಹುಟ್ಟಹಾಕಿ ತಿರುವಕೋತ ಕೂಡಬ್ಯಾಡ್ರಿ
ಅಡಿಗಿ ಮನಿ ಬಿಟ್ಟ ಹೊರಗ ಬರ್ರಿ
ಹೊರಗಿನ ಜಗತ್ತ ನೋಡ ಬರ್ರಿ"

(ಭಾವೈಕ್ಯ – ಸಬಲೆ, ಪು–೧೧)

ಹೆಣ್ಣಿನ ಮನೋಧೋರಣೆಗೆ ಈ ಒಂದು ಕವನವೇ ಸಾಕು. ಇಲ್ಲಿ ವ್ಯಕ್ತವಾದ ಭಾಷೆ ನೋವಿನ ಆಳದಿಂದ ಚಿಮ್ಮಿ ಹೊರಸೂಸಿವೆ. ಹೆಣ್ಣಿನಲ್ಲಿರುವ ಅಜ್ಞಾನ ಉಂಟಾಗುವ ಗೊಂದಲಗಳಿಗೆ ಇಂದು ಮಂಗಳವನ್ನು ಹಾಡಬೇಕೆಂದು ಕವಿಯತ್ರಿ ತೀರಾ ಭಿನ್ನವಾಗಿ ಹೊಸ ಭಾಷಾ ಬಂಧನದ ಮೂಲಕ ಚಿತ್ರಿಸಿದ್ದಾರೆ.

ಒಟ್ಟಿನಲ್ಲಿ, ಗೋಕಾಕ ತಾಲೂಕಿನ ಮಹಿಳಾ ಸಾಹಿತ್ಯ ನೆಲೆಯಲ್ಲಿ ವಿಶಿಷ್ಟತೆಯನ್ನು ಕಾಯ್ದುಕೊಂಡ ಅಪರೂಪದ ಕವಿಯತ್ರಿಯಾಗಿದ್ದಾರೆ. ಇನ್ನೂ ಸಾಹಿತ್ಯ ರಂಗದಲ್ಲಿ ಪರಿಶ್ರಮ ತೋರಿ, ಹಲವಾರು ವರ್ಷಗಳಿಂದ ತಮ್ಮ ಸೃಜನಾತ್ಮಕತೆಯನ್ನು ಬಳಸಿಕೊಂಡು ಹಲವಾರು ಕವನಗಳನ್ನು ಬರೆದಿದ್ದರೂ ಕೃತಿ ಪ್ರಕಟನೆಗೆ ಕೈ ಹಾಕದೆ ಗೋಕಾಕ ತಾಲೂಕಿನ ಅನೇಕ ಕವಿಯತ್ರಿಯರು ನಮ್ಮ ಗಮನಕ್ಕೆ ಬರುತ್ತಾರೆ. ತಮ್ಮ ಪ್ರಕಟನೆಗೆ ಸೂಕ್ತ ಪೋಷಣೆ, ಪ್ರೋತ್ಸಾಹ, ವೇದಿಕೆ ದೊರೆಯದ ಕಾರಣ ತಮ್ಮ ಸಾಮರ್ಥ್ಯದ ಬಗೆಗಿನ ಅವಜ್ಞೆ, ಸ್ವಭಾವ ಜನ್ಯ ಹಿಂಜರಿಕೆಯಿಂದಾಗಿ ತಮ್ಮ ಕೃತಿಗಳ ಪ್ರಕಟನೆಗೆ ಹಿಂದೇಟು ಹಾಕುತ್ತಾರೆ. "ತಮ್ಮ ಪ್ರಾರಂಭದ ಉತ್ಸಾಹಾತಿರೇಕದಿಂದ ತಮ್ಮ ಅಪಕ್ವ ಅನುಭವಗಳಿಗೆ ಕೃತಿರೂಪವನ್ನು ಕೊಟ್ಟರೂ, ಯಾವುದೇ ವಿವರಗಳು ದಾಖಲಾಗದೇ ಹೋದ ಕವಿಯತ್ರಿಯರು ಇದ್ದಾರೆ."[೭] ಇಂತಹ ಕವಿಯತ್ರಿಯರ ಪರಿಚಯದೊಂದಿಗೆ ಅವರ ಅಪ್ರಕಟಿತ ಕವನಗಳನ್ನು ವಿಶ್ಲೇಷಿಸುವ ಮನೋಧೋರಣೆ ನನ್ನದಾಗಿದೆ.

ಪ್ರತಿಭಾ ಕುಲಕರ್ಣಿ :

ಪ್ರತಿಭಾ ಕುಲಕರ್ಣಿಯವರು ಆದರ್ಶ ಗೃಹಿಣಿ ಜೀವನದೊಂದಿಗೆ, ಧರ್ಮ, ಸಾಹಿತ್ಯ, ಸಂಸ್ಕೃತಿ, ಆಧ್ಯಾತ್ಮ ವಿಷಯುಗಳಲ್ಲಿ ಅಭಿರುಚಿ ಹವ್ಯಾಸಗಳನ್ನು ರೂಢಿಸಿಕೊಂಡವರು. ತಮ್ಮ ಅಂತಃ ಸ್ಫೂರ್ತಿಯೊಂದಿಗೆ ಕಥೆ, ಕವನ, ಚುಟುಕು, ಬಾನುಲಿ, ಭಾಷಣ, ಚರ್ಚೆ, ಮಕ್ಕಳ ಸಾಹಿತ್ಯ ಲೇಖನಗಳ ಸಾಹಿತ್ಯಗಳಲ್ಲಿ ಕೃಷಿ

ಗೈದಿರುವ ಕವಿಯತ್ರಿ ಶ್ರೀಮತಿ ಪ್ರತಿಭಾ ಕುಲಕರ್ಣಿಯವರು. ಇವರು ಹಲವಾರು ಚುಟುಕು ಕವನಗಳನ್ನು ರಚಿಸಿ ತಾಲ್ಲೂಕ ಹಾಗೂ ಜಿಲ್ಲಾ ಮಟ್ಟದಲ್ಲಿ ನಡೆಯುವ ಕವಿಗೋಷ್ಟಿಗಳಲ್ಲಿ ಭಾಗವಹಿಸಿದ್ದಾರೆ. ಇವರ ರಚಿಸಿದ ಚುಟುಕು ಸಾಹಿತ್ಯ ಪರಿ. ಈ ರೀತಿಯಲ್ಲಿ ನೋಡಲಾಗಿದೆ.

“ಮಕ್ಕಳನ್ನು ಬೆಳೆಸುತ್ತಾರೆ ಮುದ್ದಾಗಿ
ಅವರು ದೊಡ್ಡವರಾಗಿ ಅಧಿಕಾರ ಚಲಾಯಿಸುತ್ತಾರೆ ಖುದ್ದಾಗಿ
ಹೆಂಡತಿ ಮನೆಗೆ ಬರೆ, ತಾವೇ ಮುಂದಾಗಿ
ತಂದೆ ತಾಯಿಗಳನ್ನು ದೂಡುತ್ತಾರೆ ಒಂದಾಗಿ”

(ಅಪ್ರಕಟಿತ ಕವನ)

ತಂದೆ–ತಾಯಿಯ ಮೇಲಿಲ್ಲದ ಪ್ರೀತಿಯನ್ನು ಸೊಗಸಾಗಿ ಈ ಚುಟುಕು ಮೂಲಕ ತಂದಿದ್ದಾರೆ. ಪ್ರತಿಭಾ ಕುಲಕರ್ಣಿಯವರು ಹಲವಾರು ಕವನಗಳನ್ನು ರಚಿಸಿದ್ದರೂ ಅವುಗಳನ್ನು ಪ್ರಕಟಿಸುವ ಗೋಜಿಗೆ ಹೋಗಿಲ್ಲ. ಅವು ಪ್ರಕಟಿತವಾಗಿದ್ದರೆ ಪ್ರತಿಭಾ ಕುಲಕರ್ಣಿಯವರು ಗೋಕಾಕ ತಾಲೂಕಿನ ಕವಿಯತ್ರಿಯರ ಸ್ಥಾನದಲ್ಲಿ ಮುಂಚೂಣಿಯಾಗಿ ಕಂಗೊಳಿಸುತ್ತಿದ್ದರು. ಅವರ ಅಪ್ರಕಟಿತ ಕವನಗಳು ಹಲವಾರು ಅವುಗಳಲ್ಲಿ

ಇವರ ಅಪ್ರಕಟಿತ ಕವನ ಸಂಕಲನ 'ಚೈತ್ರಾಗ್ರಮಣ' ಹಲವು ವೈಶಿಷ್ಟ್ಯತೆಯನ್ನು ತುಂಬಿಕೊಂಡು ಬದುಕೆಂಬ ಜೀವನದ ಚೈತ್ರಯಾತ್ರೆಯಲ್ಲಿ ಕಂಡು ಬರುವ ಭಾವವನ್ನು, ಆಸೆಗಳನ್ನು ಆಶಾವಾದಿತ್ವದ ಸೂಚನೆಯಲ್ಲಿ ಇಲ್ಲಿಯ ಕವನಗಳು ಸುಂದರಯುತವಾಗಿ ಪ್ರತಿಭಾ ಅವರು ಕಟ್ಟಿಕೊಟ್ಟಿದ್ದಾರೆ.

“ಚೈತ್ರದಲ್ಲಿ ಚೈತ್ರಾಳನ್ನು ನೋಡುವ ಆಸೆ
ಬಾ ಚೈತ್ರಾ ನನ್ನ ಅಂಗವಾಗಿ ಬಾ
ಅರ್ಧಾಂಗಿಣಿಯಾಗಿ ಬಾ”

(ಚೈತ್ರಾಗ್ರಮಣ –ಅಪ್ರಕಟಿತ ಕವನ)

ಹೆಣ್ಣು ಹುಡುಗಿ ಭಾವನೆಯನ್ನು, ತುಡಿತವನ್ನು, ಹಂಬಲವನ್ನು ಈ ಕವನದಲ್ಲಿ ಕವಿಯತ್ರಿ ಮೆಳವಿಸಿದ್ದಾರೆ.

“ಕಾರ್ಗಿಲಿನ ಕಾರ್ಗತ್ತಲ ನೆನೆದು

ಮೈಜುಮ್ಮೆನುತಿದೆ ಮನ ಮಿಡಿಯುತಿದೆ
ಪಾಠ ಕಲಿಸಿತು ಕಾರ್ಗಿಲ
ನಂಬದಿರಿ ದಾಯಾದಿಗಳ
ಬುದ್ಧಿಕಲಿಸಿತು ಕಾರ್ಗಿಲ
ನಂಬದಿರಿ ಗೋಮುಖ ವ್ಯಾಘ್ರಗಳ"

(ಕಾರ್ಗಿಲಕರೆ – ಅಪ್ರಕಟಿತ ಕವನ)

ಕಾರ್ಗಿಲ ಯುದ್ಧದ ಸನ್ನಿವೇಶವನ್ನು ನೆನೆಯುತ್ತ ಮನನೊಂದು, ಪಾಕಿಸ್ತಾನದ ಘೋರ ಕೃತ್ಯವನ್ನು ಖಂಡಿಸುತ್ತಾ ನಂಬದಿರಿ ಗೋಮುಖ ವ್ಯಾಘ್ರಗಳ ಎನ್ನುವ ಪರಿ ದೇಶದ ಕುರಿತು ಒಲವು ಯುದ್ಧದ ಪರಿಣಾಮದ ಭೀಕರತೆಗೆ ಮನನೊಂದು ಖಂಡಿಸುವ ಈ ಕವನ ಕವಿಯತ್ರಿ ದೇಶಾಭಿಮಾನವನ್ನು ವ್ಯಕ್ತಪಡಿಸುತ್ತದೆ.

"ಎದ್ದೇಳು ಎಲೆಯುವತಿ
ತನ್ನ ಅರಿವು ತನಗೆ ಗುರು
ಇವು ಮಾನವ ಜೀವನದ ರೂವಾರಿ
ತಿಳಿದಿಲ್ಲ ಅವನಿಗೆ ಎನ್ನ ಜೀವನದ ಗುರಿ"

(ಎದ್ದೇಳು ಎಲೆಯುವತಿ –ಅಪ್ರಕಟಿತ ಕವನ)

ಯುವತಿಯನ್ನು ಜಾಗೃತಳನ್ನಾಗಿ ಮಾಡಿ, ತನ್ನ ಅರಿವು ತನಗೆ ಗುರುವೆಂಬ ಸ್ವಾವಲಂಬನೆಯ ಭಾವನೆಯನ್ನು ಕವಿಯತ್ರಿ ವ್ಯಕ್ತಪಡಿಸುತ್ತಾರೆ.

ಜೀವನದರ್ಶನ, ಚಿನ್ನದ ಹಬ್ಬದ ಸ್ವಾತಂತ್ರ್ಯದ ಸವಿ ನೆನಪು, ಮಾನವ ದಾನವ, ಮನ್ವಂತರದ ಆಹ್ವಾಂತರ, ಅರಿವು, ಶ್ರಾವಣ ಸಂಕಲ್ಪ, ಶಾಂತಿ, ಸ್ವಾಗತವು ಗೋಕಾವಿಗೆ ಓ ಮಗು. ಹೀಗೆ ಈ ಎಲ್ಲ ಕವನಗಳಲ್ಲಿ ಸ್ಥಾಯಿಭಾವ ಬೇರೆ ಬೇರೆಯಾಗಿ ಕಾಣಿಸಿಕೊಂಡು ಬಂದಿವೆ. ಬದುಕಿನ ಜಡತೆ, ನಿಸರ್ಗ ಪ್ರಿಯತೆ, ಅರಿವು ಆತ್ಮಾಭಿಮಾನ, ರೋಷ, ವ್ಯಂಗ್ಯ ಮುಂತಾದವುಗಳನ್ನು ಗರ್ಭಿಸಿಕರಿಸಿಕೊಂಡು ಸಹೃದಯರಿಗೆ ವಿಶಿಷ್ಟವಾದ ರಸಾನಂದನವನ್ನು ನೀಡುವ ನಿಟ್ಟಿನಲ್ಲಿ ಮುನ್ನುಡಿಯುತ್ತಿವೆ. ಅವುಗಳ ಹಿಂದಿನ ಭಾಷಿಕ ರೂಪ ತೀರಾ ಸಹಜವಾಗಿ ಗಮನವನ್ನು ಸೆಳೆಯುವಂತಿದೆ.

ಗೃಹಿಣಿಯಾದರೂ ಸಾಹಿತ್ಯದ ಗೀಳು ಬೀಡ ಪ್ರತಿಭಾ ಕುಲಕರ್ಣಿಯವರು ಹಲವಾರು ಕೃತಿಗಳ ಪ್ರಕಟನೆಗೆ ಸೂಕ್ತ ಪ್ರೋತ್ಸಾಹ, ಸಹಕಾರ ದೊರೆತರೆ ಒಬ್ಬ ಒಳ್ಳೆಯ ಕವಿಯತ್ರಿಯಾಗಿ ಕಂಗೊಳಿಸುವಲ್ಲಿ ಎರಡು ಮಾತಿಲ್ಲ.

ಡಾ॥ ಶಶಿಕಲಾ ಕಾಮೋಜಿ :

ವೃತ್ತಿಯಿಂದ ವೈದ್ಯ ಲೋಕದಲ್ಲಿ ಇದ್ದರು, ಪ್ರವೃತ್ತಿಯಿಂದ ಕವಿಯತ್ರಿಯಾಗಿದ್ದಾರೆ. ತಮ್ಮ ಬಿಡುವಿನ ವೇಳೆಯನ್ನು ವ್ಯರ್ಥ ಮಾಡದೆ, ಸಾಹಿತ್ಯ ಸುಧೆಯನ್ನು ಹರಿಸುತ್ತಾ ಬಂದವರು ಇವರು ಸಹ ಹಲವು ಬಿಡಿ ಕವನಗಳನ್ನು ಪ್ರಕಟಿಸಿದ್ದಾರೆ. ಆದರೆ ಸಮಗ್ರವಾಗಿ ಕವನ ಸಂಕಲನ ಬಂದಿಲ್ಲ ಸಮಾಜ ಸುಧಾರಣೆಯ ಅಂಶವನ್ನು ಹೊತ್ತುಕೊಂಡು ಇವರ ಕವನಗಳು ಪ್ರಕಟಗೊಂಡಿವೆ.

ಡಾ॥ ಶಶಿಕಲಾ ಕಾಮೋಜಿಯವರು ರಚಿಸಿದ ಪ್ರಪ್ರಥಮ ಕವನ 'ಗಿರಿನವಿಲು'– ಸ್ಮರಣಸಂಚಿಕೆ ಸಂಪಾದಕರು ಡಾ. ಗುರುದೇವಿ ಹುಲೆಪ್ಪನವರಮಠ ಪುಟ ೨೮. 'ದಿಟಕು ದಿಟ್ಟೆ ನಮ್ಮಕ್ಕ' ಕವನವನ್ನು ಪ್ರಕಟಿಸಿದ್ದಾರೆ.

"ದಿಟಕು ದಿಟ್ಟೆ ಈ ನಮ್ಮಕ್ಕ
ದಿನವು ಶೋಕಿಸುತ ಬಯಕ
ಶೋಷಿಸುತ ಬವಣೆಯೊಂದಿಗೆ
ಬಾಳ ಹೊಂದಿಸುತ ಜೀವ ಸವೆಸುತ"

(ಗಿರಿನವಲು– ದಿಟಕು ದಿಟ್ಟೆ ನಮ್ಮಕ್ಕ, ಪು–೨೮)

ಕನ್ನಡದ ಪ್ರಪ್ರಥಮ ವಾಚನಗಾರ್ತಿ ಅಕ್ಕಮಹಾದೇವಿಯ ಜೀವನ ವೃತ್ತಾಂತವನ್ನು ಸಾರುವ ಈ ಕವನ ಅಕ್ಕ ಹುಟ್ಟಿನಿಂದ ಚನ್ನಮಲ್ಲಿಕಾರ್ಜುನ ಸೇರುವರೆಗೂ ಅಕ್ಕನ ದಿಟ್ಟತನವನ್ನು ಸಾರುತ್ತದೆ. ಶಶಿಕಲಾರವರು ಹಲವಾರು ಚುಟುಕುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಈ ಕೆಳಗಿನ ಚುಟುಕು ಕವನ ಒಂದಾಗಿದೆ.

"ವೈದೋ ನಾರಾಯಣೋ ಹರಿ
ಸಿರಿದೇವಿಯಪತಿಯಲ್ಲವೇನೀ
ನೀ ಕೇಳುವುದೇತಕೆ ನಮ್ಮನು ಫೀ
ನೀಡಬಾರದೆ ಮಾತ್ರ ಔಷಧಿ ಫ್ರೀ"

(ರೋಗಿಯ ಬಯಕೆ–ಅಪ್ರಕಟಿತ ಕವನ)

ವೃತ್ತಿಯ ಅನುಭವವನ್ನು ಹಾಸ್ಯ ಚಟಾಕಿಯ ಮೂಲಕ ರೋಗಿಯ ಅಂತರಂಗದ ಬಯಕೆಯನ್ನು ಅರಿಯುವಂತಹ ಪರಿ ಚೆನ್ನಾಗಿ ಬಿಂಬಿತವಾಗಿದೆ. ಇವರು ಹಲವಾರು ಬೀಡಿಗವನಗಳನ್ನು ರಚಿಸಿದ್ದಾರೆ.

[illegible]

[illegible]

[illegible]

[illegible]

[illegible]

[illegible]

"ನಿನ್ನ ನೋವಿನ ಗಾಯಗಳು
ವನಿತೆನಿತೊನಾಕಣೆ
ನಾವೊಂದೆ ಮದ್ದೆಂದು
ತಿಳಿದೆಯೇತನಕ ಹೆಣ್ಣೆ"

(ಅತೃಪ್ತ ಆತ್ಮವೇ–ಅಪ್ರಕಟಿತ ಕವನ)

ಮಕ್ಕಳೊಡನೆ ಗೋಕಾಕ ಜಲಪಾತಕ್ಕೆ ದುಮುಕಿದ ಮಹಿಳೆಯ ಕುರಿತು ಸಹೃದಯ ಮನ ಮಿಡಿಯುಂತೆ ಕವಿಯತ್ರಿ ಈ ಕವನದಲ್ಲಿ ವ್ಯಕ್ತಪಡಿಸುತ್ತಾರೆ.

"ನೀ ನುಡಿಸಿದಂತೆ ನುಡಿವೆ
ನೀ ನಡೆಸಿದಂತೆ ನಡುವೆ
ನಿನ್ನೊಲುಮೆಗಾಗಿ ದೇವಾ ಹಂಬಲಿಸಿ ಬೇಯತಿರುವ."

(ಋಣಮುಕ್ತ ಗೊಳಲಿ ಜೀವ–ಅಪ್ರಕಟಿತ ಕವನ)

ದೇವರ ಒಲುಮೆಗಾಗಿ ಪರಿ –ಪರಿಯಾಗಿ ಬೇಡಿಕೊಳ್ಳುವ ಕವಿಯತ್ರಿ ಈ ಜೀವನದಿಂದ ಋಣ ಮುಕ್ತ ಗೊಳಿಸಿ ದೇವರಲ್ಲಿ ಲೀನವಾಗುವತ್ತ ಈ ಕವನ ವ್ಯಕ್ತವಾಗಿದೆ. ಅದೇ ರೀತಿ 'ಭೂಕಂಪ' ಕವನ ಲಾತೂರ್ ಭೂಕಂಪ ಕುರಿತು ಬರೆದರೆ, 'ಪ್ಯಾರಿಸ್' ಕವನದಲ್ಲಿ ಆ ನಗರ ಚಿತ್ರಣ ಈ ರೀತಿಯಲ್ಲಿ ವ್ಯಕ್ತವಾಗಿದೆ.

"ಬದುಕಿನಡಿ ಒತ್ತಿ ಕುಳಿತಿಹ ಉತ್ತುಂಗದಲಭಿರುಚಿಗೆ
ರಸಿಕತೆಯ ಮುಸುಕುವಕಲಹ ಕುಶಲಕಲೆಗೆ
ಕೈ ಬೀಸಿ ಕರೆದ ನಿನ್ನ ಈ ರೂಪದೈಸಿರಿಗೆ"

(ಪ್ಯಾರಿಸ್ –ಅಪ್ರಕಟಿತ ಕವನ)

ಪ್ಯಾರಿಸ್ ನಗರವನ್ನು ಕಂಡು ಬಂದು ಅನುಭವಗಳನ್ನು ಕವಿಯತ್ರಿ ಇಲ್ಲಿ ಚಿತ್ರಿಸಿದ್ದಾರೆ.ಅವುಗಳೊಂದಿಗೆ ತಾವು ಸಹ ಕವಿಯತ್ರಿಯಾಗಿ ಕವನ ರಚಿಸಬಲ್ಲೆ ಆಶಾದಿತ್ವವನ್ನು ಹೊತ್ತುಕೊಂಡು ಬರೆಯುತ್ತಿರುವ, ಚಿಗುರೊಡೆಯುತ್ತಿರುವ ಕವಿಯತ್ರಿಯಾಗಿದ್ದಾರೆ.

ಅನುಸುಯಾ ಸಂಕಪಾಳ :

ಅನುಸುಯಾ ಮಟ್ಟಿಕಲ್ಲಿ (ಸಂಕಪಾಳ) ಅಪರೂಪದ ಕಾವ್ಯ ಪ್ರತಿಭೆ. ಕಾವ್ಯರಚನೆ, ಹಾಡುಗಾರಿಕೆ ಕರಕುಶಲಕತೆ, ಮಹಿಳಾ ಮತ್ತು ಸಾಹಿತ್ಯ ಸಂಘಟನೆಗಳಲ್ಲಿ

ಸಕ್ರಿಯವಾಗಿದ್ದುಕೊಂಡು ಸಾಹಿತ್ಯ –ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿದ್ದಾರೆ. ಕವಿತೆಯ ಗೀಳು ಶಾಲಾ ದಿನಗಳಿಂದಲೇ ಅಂಟಿಕೊಂಡಿದ್ದು, ಸಾವಿರಾರು ಕವನಗಳನ್ನು ಹೊಸೆದಿದ್ದಾರೆ. ರಾಜ್ಯ ಹೊರ ರಾಜ್ಯಗಳ ನೂರಾರು ವೇದಿಕೆಗಳಲ್ಲಿ ಕಾವ್ಯ ವಚನ–ಗಾಯನ ಮಾಡಿದ್ದಾರೆ. ಆದರೆ ಪುಸ್ತಕ ರೂಪದಲ್ಲಿ ಸಾಹಿತ್ಯ ಪ್ರಕಟಿಸುವಲ್ಲಿ ಅನಾಸಕ್ತಿ ತೂರಿದ್ದಾರೆ.

ಹಲವಾರು ಚುಟುಕುಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಪರೋಪಕಾರವಾದ ಈ ಚುಟುಕು ತುಂಬಾ ವಿಶಿಷ್ಟತೆಯಿಂದ ಮೂಡಿ ಬಂದಿದೆ.

"ನಂಜನ ನುಂಗಿದ ಶಿವನು ಅಗಿಬಿಟ್ಟ ನಂಜುಂಡ
ಜಗತ್ತಿನ ಕಲ್ಯಾಣಕಾರಕನಾಗಿ ಜಗತ್ತೆ ನನ್ನದೆಂದ
ನಂಜನ ಉಗಿದ ಮಾನವ ಆಗಿ ಬಿಟ್ಟ ದಾನವ
ಜಗತ್ತಕಂಟಕನಾಗಿ ಪರಿಸರವನ್ನೇ ಮರೆತು ಬಿಟ್ಟ"

(ನಂಜುಂಡ –ಅಪ್ರಕಟಿತ ಕವನ)

ಶ್ರೀಮತಿ ಅನುಸೂಯಾ ಅವರು ಕೆಲವೊಂದು ಕವನಗಳನ್ನು ನಾಡಿನ ಹಲವು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಜೊತೆಗೆ ಹಲವಾರು ಸಂಪಾದಿತ ಕೃತಿಗಳಲ್ಲಿ ಅವರ ಕವನಗಳು ಪ್ರಕಟನೆಗೊಂಡಿವೆ. ಅವರ 'ಮದ್ದು' ಕವನ ಹೆಣ್ಣಿನ ಬಾಳಿನ ನೂರಾರು ಆಸೆಗಳನ್ನು ಅಭಿರುಚಿಗಳನ್ನು ವಿಭಿನ್ನವಾಗಿ ಈ ಕವನದಲ್ಲಿ ಕಂಡು ಬಂದಿದೆ. ಹೆಣ್ಣನ್ನು ನೋಡುವ ಪರಿಯನ್ನು ಮಾನವನನ್ನು ಮಹಾದೇವನಾಗಿಸುವರೆಗೂ ದುಡಿಯುವ 'ಸ್ತ್ರೀ' ಗುಣವು ಇಲ್ಲಿ ಬಿಂಬಿತವಾಗಿದೆ.

'ಆಕಾಶ ಕಾವ್ಯ ಕವನ ಸಂಕಲನದಲ್ಲಿ ಅನುಪಮಾ ಸಂಕಪಾಳರವರ 'ಒಂದೇ ಒಂದು ಸಾಕು' ಎಂಬ ಕವನ ಪ್ರಕಟವಾಗಿದೆ.

"ಅಂತ ಹೃದಯಗಳು ಒಂದಾದರೆ ಸಾಕು
ಸುಂದರ ಸಂಸಾರ ಸಾರವಾಗಲು
ನುರಿತ ವೈಣಿಕೆ ಮುಟ್ಟಿದರೆ ಸಾಕು
ಸಂಗೀತ ಸೌರಭ ಹರಡಲು"

(ಆಕಾಶ ಕಾವ್ಯ – ಒಂದೇ ಒಂದು ಸಾಕು, ಪು–೪೦)

ಒಂದಂಶದ ಮಹತ್ವವನ್ನು ಈ ಕವನ ಸೂಚಿಸುತ್ತಿದೆ . ವಿಶಾಲ

ಮನೋಭಾವನೆಯ ಭೂಮಿಕೆ ಹೃದಯದಲ್ಲಿ ಉಂಟಾಗಿರುವ ನೋವುವನ್ನು ಮರೆಯುವಲ್ಲಿ ಪರಸ್ಪರ ಪ್ರೀತಿ ಇರಬೇಕೆನ್ನುತ್ತ ಸಂಗೀತಗಾರ ನಿರ್ಜೀವ ವಸ್ತುಗಳಿಗೆ ಹೇಗೆ ಜೀವ ತುಂಬಿ ಮರೆಯುವಲ್ಲಿ ಎಲ್ಲ ಸಂಗೀತ ಆಶ್ವಾಧಕರವನ್ನು ಬೆರಗುಗೊಳಿಸುವನೋ ಅದೇ ರೀತಿ ಅನುಭವ ದ್ರವ್ಯ ಜೀವನದಲ್ಲಿ ಇದ್ದಾರೆ. ಜೀವನದ ಲಯ ಹೊಸದಿಕ್ಕಿನತ್ತ ಚಲಿಸುತ್ತದೆ ಎಂಬುದು ಅನುಸೂಯಾ ಅವರ ನಂಬಿಕೆಯಾಗಿದೆ.

ಹೀಗೆ ಹಲವು ರೀತಿಯ ಕವನಗಳಲ್ಲಿ ಮನಸ್ಸು ಆತ್ಮ-ದೇಹ ಇವುಗಳನ್ನು ಸಾಮಾಜಿಕ ದೃಷ್ಟಿ ನೋಟ. ಬದುಕಿನ ಬಗೆಗೆ ಅಪಾರ ಪ್ರಿತಿಯನ್ನು ತುಂಬಿಸಿಕೊಂಡು ವಿಶಿಷ್ಟ ಪ್ರತಿಭೆಯಿಂದ ಚಿರಪಚಿತದಾದವರು ಅನುಸೂಯಾಅವರು.

ಶಕುಂತಲಾ ಹಿರೇಮಠ :

ಶ್ರೀಮತಿ ಶಕುಂತಲಾ ಹಿರೇಮಠರವರು ಪ್ರಸ್ತುತ ಖನಗಾಂವ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸುತ್ತಿದ್ದು, ಸಾಹಿತ್ಯಿಕವಾಗಿ ಕಥೆ, ಕವನ ಭಾಷಣಗಳಲ್ಲಿ ಅಭಿರುಚಿಯನ್ನು ಮೂಡಿಸಿದ್ದಾರೆ . ಆಕಾಶವಾಣಿ ಗೃಹಲಕ್ಷ್ಮೀ ವಿಭಾಗದಲ್ಲಿ ಕಥೆ,ಕವನ, ಹಾಸ್ಯ ಭಾಷಣ ಕಾರ್ಯಕ್ರಮ ನೀಡಿದ್ದಾರೆ. ಹಲವಾರು ಬೀಡಿಗವನಗಳನ್ನು ರಚಿಸಿದ್ದರೂ ಅವುಗಳನ್ನು ಪ್ರಕಟಿಸುವಲ್ಲಿ ಅನಾಸಕ್ತಿಮೂಡಿಸಿದ್ದಾರೆ. ಇವರ ಅಪ್ರಕಟಿತ ಬೀಡಿಗವನಗಳು.

'ನಮ್ಮೂರು ಸೊಬಗು' ಈ ಕವನದಲ್ಲಿ ಹಳ್ಳಿ ಪರಿಸರವನ್ನು ನೆನಪಿಸುತ್ತದೆ. 'ಹಸಿರೇ ಉಸಿರು' ಕವನದಲ್ಲಿ ಪರಿಸರದ ಪ್ರಜ್ಞೆಯನ್ನು ನೆನಪಿಸುತ್ತಾರೆ. 'ಹೊಸ ವರ್ಷ ಹೊಸ ವರ್ಷವನ್ನು ಹರುಷದ ಕಾಲವನ್ನು ಅಹ್ವಾನಿಸುತ್ತಾರೆ. 'ಸಮರಸವೇ ಜೀವನ' ಕವನದಲ್ಲಿ ಜೀವನ ಸ್ಥಿತ್ಯಂತರಗಳನ್ನು ಕಟ್ಟಿಕೊಡುತ್ತಾರೆ. ಕವಿಯ ಕಲ್ಪನೆ ಭಾವನೆಯ ಭೃಂಗವನ್ನು ಕವನದ ಮೂಲಕ ತಂದಿದ್ದಾರೆ. ಐತಿಹಾಸಿಕ ನಗರಿ ವಿಜಾಪೂರ ನಗರ ಜೀವನದಲ್ಲಿಯ ವಿಶೇಷತೆಯನ್ನು ಹಾಗೂ ಐತಿಹಾಸಿಕ ಮಹತ್ವವನ್ನು ದಟ್ಟವಾಗಿ ಈ ಕವನಗಳು ಕಾಣುತ್ತೇವೆ. ಹಲವಾರು ಚಟುವಟಿಕೆಗಳನ್ನು ರಚಿಸಿದ್ದಾರೆ. ಅವುಗಳಲ್ಲಿ 'ಬಾಪೂಜಿ' ಚುಟುಕು ಮಹತ್ವಪೂರ್ಣವಾಗಿದೆ.

"ಸತ್ಯ ಅಹಿಂಸೆ , ತ್ಯಾಗಗಳೆಂಬ
ತತ್ವಗಳಿಂದ ಬಾಪು ಅಂದು
ಬ್ರಿಟಿಷರನ್ನು ಭಾರತದಿಂದ ಓಡಿಸಿದರು.

ಅಸತ್ಯ ಹಿಂದೆ ಭಯೋತ್ಪಾದಕತೆಗಳು ಬಾಪೂಜಿ
ತತ್ವಗಳನ್ನು ಭಾರತದಿಂದ ಓಡಿಸಿದೆ ಇಂದು"

(ಬಾಪೂಜಿ – ಅಪ್ರಕಟಿತ ಕವನ)

ಇಂತಹ ಚುಟುಕಗಳಲ್ಲಿ ಸತ್ಯ ಅಹಿಂಸೆಗಳನ್ನು ಮನುಷ್ಯ ತನ್ನ ಜೀವನದಲ್ಲಿ ಹೇಗೆ ಇಟ್ಟು ಕೊಂಡಿದ್ದಾನೆಂಬುದು ಚಿತ್ರಿತವಾಗುತ್ತದೆ. ಸ್ವಾತಂತ್ರ್ಯದ ನಂತರದಲ್ಲಿ ಆದ ಸಾಮಾಜಿಕ ಬದಲಾವಣೆಯಲ್ಲಿ ಆಧ್ಯಾತ್ಮಿಕ ತತ್ವಗಳು ಎಷ್ಟರ ಮಟ್ಟಿಗೆ ತಮ್ಮ ಮೌಲ್ಯವನ್ನು ಉಳಿಸಿಕೊಂಡಿವೆ. ಎಂಬುದನ್ನು ವೈಚಾರಿಕ ಹಿನ್ನಲೆಯಲ್ಲಿ ಕಲೆ ಹಾಕಿದ್ದಾರೆ. ಇಂತಹ ಹಲವು ಹೊಸ–ಹೊಸಲಯವನ್ನು ಸಹೃದಯರಿಗೆ ತಮ್ಮ ಕವನಗಳ ಮೂಲಕ ಕಟ್ಟಿಕೊಳ್ಳುತ್ತಿದ್ದಾರೆ.

ಡಾ॥ ಪ್ರೇಮಾ ಮೆಣಸಿ :

ವೃತ್ತಿಯಲ್ಲಿ ವೈದ್ಯರಾದರೂ ಪ್ರವೃತ್ತಿ ಮೂಲಕ ಸಾಹಿತ್ಯ ಲೋಕದಲ್ಲಿ ಆಸಕ್ತಿಯನ್ನು ಹೊಂದಿದಂತಹ ಡಾ॥ ಪ್ರೇಮಾ ಮೆಣಸಿಯವರು ಕನ್ನಡ ಅಲ್ಲದೇ ಹಿಂದಿ, ಮರಾಠಿಗಳಲ್ಲೂ ಹಲುವಾರು ಬೀಡಿಗವನಗಳನ್ನು ರಚಿಸಿದ್ದಾರೆ. ಅದರೆ ಯಾವುದನ್ನು ಪ್ರಕಟಿಸುವ ಗೋಜಿಗೆ ಹೋಗಿಲ್ಲ. ಇವರ ಅಪ್ರಕಟಿತ ಕವನಗಳ ಧ್ವನಿ ಈ ರೀತಿಯಲ್ಲಿ ವ್ಯಕ್ತವಾಗಿದೆ.

" ಮಿದುಳಿನಲ್ಲಿ ವಿಚಾರಗಳ ಹೋರಾಟ
ಮನದಲ್ಲಿ ಅನಿಸಿಕೆಗಳ ತಾಕಲಾಟ
ಭಾವನೆಗಳ ಕ್ಲಿಷ್ಟ ಜಂಜಾಟ
ಬಯಕೆಗಳ ಬಯಲಾಟವು ಇವೆ
ನನ್ನ ವ್ಯಕ್ತಿತ್ವವೋ
ಜ್ವಲಂತ ಆದರೆ
ಅಭಿವ್ಯಕ್ತಿಯನ್ನು ಬಯಸುವ
ಬಿಂದು ಕುರುಕ್ಷೇತ್ರ"

(ಕುರುಕ್ಷೇತ್ರ – ಅಪ್ರಕಟಿತ ಕವನ)

ಸರಳ, ಸುಂದರ ಭಾಷೆಯಲ್ಲಿ ತಮ್ಮ ಮನದ ಬಯಕೆಗಳನ್ನು ಈಡೇರಿಸಲಾಗದ ಪರಿಸ್ಥಿತಿಯೀ ಮೇಲಿನ ಕವನಗಳಲ್ಲಿ ವ್ಯಕ್ತಪಡಿಸಿದ್ದಾರೆ.

"ಚೈತ್ರ ಮಾಸ ಬಂತವ್ವ
ಭೂತಾಯಿಗೆ ಹರುಷವ ತಂತವ್ವ"
ಹಾದ್ಯಾಗ, ಬಿದ್ಯಾಗ, ಹುವ ಹಾಸ್ಯಾವ
ಕೊರಡು ಮರಗಳು ಮತ್ತೆ ಚಿಗರ್ಯಾವ
ಮಾವಿನ ಗಿಡದಾಗ ಕಾಯಿ ಸುರದಾವ
ಚೈತ್ರಮಾಸ ಬಂತವ್ವ"

(ಚೈತ್ರಮಾಸ –ಅಪ್ರಕಟಿತ ಕವನ)

ವಸಂತಋತುವಿನ ಸಂಭ್ರಮವನ್ನು ಸ್ವಾಗತಿಸುವ ಈ ಪರಿ ನಿಸರ್ಗವನ್ನು ಸೂಚ್ಯಕವಾಗಿ ಅರಿಯಬಹುದಾಗಿದೆ. ಹೀಗೆ ಡಾ. ಪ್ರೇಮಾ ಮೆಣಸಿಯವರು ಹಲವಾರು ಬಿಡಿಕವನಗಳ ಮೂಲಕ ಸರಳ ಭಾಷಾ ಶೈಲಿಯಲ್ಲಿ ತಮ್ಮ ಭಾವನೆಗಳನ್ನು ಈ ಕವನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಸರೋಜಾ ಇಟ್ಟಣ್ಣವರ :

ಶ್ರೀಮತಿ ಸರೋಜಾ ಇಟ್ಟನ್ನವರ ಖ್ಯಾತ ಸಾಹಿತಿ ಶ್ರೀರಾಮ ಇಟ್ಟನ್ನವರ ಅವರ ಪತ್ನಿ. ಇವರು ಸಹ ಹಲವಾರು ರೀತಿಯಲ್ಲಿ ಸಾಹಿತ್ಯ ಕೃಷಿ ಮಾಡಿದ್ದಾರೆ. 'ಕಾಯುತ್ತಿರು' ಇವರ ಏಕೈಕ ಕವನ ಸಂಕಲನ 'ಸೋಮಣ್ಣನ ಹಾಡುಗಳು' ಇವರ ಸಂಪಾದಿತ ಕವನ ಸಂಕಲನ 'ಬಿಸಿಲು–ನೆರಳು', 'ಪಾಸಿನ ಹುಡುಗರು' ಇವರ ನಾಟಕಗಳು. ಹೀಗೆ ಹಲವು ಸಾಹಿತ್ಯಿಕ ಮಜಲಿನಲ್ಲಿ ತಮ್ಮ ಕಾರ್ಯವನ್ನು ಮುಂದುವರೆಸಿಕೊಂಡು ಬಂದ ವಿಶಿಷ್ಟ ಪ್ರತಿಭೆ ಸರೋಜಾ ಇಟ್ಟನ್ನವರು.

ಒಟ್ಟಾರೆಯಾಗಿ, ಗೋಕಾಕ ತಾಲ್ಲೂಕಿನಲ್ಲಿರುವ ಮಹಿಳಾ ಕಾವ್ಯ ಪರಂಪರೆಯು ಹಲವು ಮಜಲುಗಳನ್ನು ತನ್ನಲ್ಲಿ ಇಟ್ಟುಕೊಂಡು ಸೃಷ್ಟಿಯಾಗಿದೆ. ಪ್ರಾಚೀನ ಕಾಲದ ಯಾವ ಕವಿಯತ್ರಿಯರು ನಮ್ಮ ಗಮನಕ್ಕೆ ಬಾರದಿರುವುದು ಕಂಡು ಬರುತ್ತದೆ. ಇಲ್ಲಿ ಕವಿಯತ್ರಿಯರು ಹಲವು ಕವಿಗಳಿಂದ ಪ್ರೇರಣೆಗೊಂಡು ತಮ್ಮ ಕಾವ್ಯ ಕೃಷಿಯನ್ನು ರಚಿಸಿದ್ದು ಕಂಡು ಬರುತ್ತದೆ. ಜನಪದ ಸಾಹಿತ್ಯದ ಹಲವು ರೂಪಗಳು ಇದರಲ್ಲಿ ಹಾಸುಹೊಕ್ಕಾಗಿವೆ. ಹಿರಿಯ ಕವಿಗಳಲ್ಲಿ ತೀವ್ರವಾಗಿ ಕಂಡು ಬಂದ ರಾಷ್ಟ್ರೀಯ ಪ್ರಜ್ಞೆಯು ಇವರಲ್ಲಿ ಮುಂದುವರೆದಿದೆ. ಸಾಮಾಜಿಕ ದ್ವಂದ್ವ ನೀತಿಯನ್ನು ಪ್ರತಿಭಟಿಸುತ್ತಾ ಅದರಾಚೆಗೆ ಬರುವ ಅಭಿಪ್ರಾಯವನ್ನು ಇಟ್ಟು ಕೊಂಡಿದ್ದಾರೆ.

ಆಧುನಿಕ ಕಾಲಘಟ್ಟದಲ್ಲಿ ಸಾಹಿತ್ಯದ ಹಲವು ಮಜಲಿನಲ್ಲಿ ಕೃಷಿ ಮಾಡಿದ್ದಾರೆ. ಕೆಲವು ಕವಿಯತ್ರಿಯರು ನವೋದಯ ಆಶೆಯನ್ನು ಚಿಗುರಿಸಿಕೊಳ್ಳುತ್ತಾ, ಪ್ರಗತಿಶೀಲ ಮಾರ್ಗವನ್ನು ಹೊಂದಿದ್ದಾರೆ. ಇನ್ನೂ ಕೆಲವು ಕವಿಯತ್ರಿಯರು ಶುದ್ಧ ಬಂಡಾಯದ ಧ್ವನಿಯುನ್ನು ಎತ್ತಿದ್ದಾರೆ. ಇವುಗಳ ಜೊತೆಗೆ ಸ್ತ್ರೀ ಸಂವೇದನಾಶೀಲ ಮನೋಭಾವನೆಯನ್ನು ವಿಶಿಷ್ಟ ಲಯಗಾರಿಕೆಯನ್ನು ಹೊತ್ತುಕೊಂಡು ಬೆಳೆದು ಬಂದಿದೆ. ಬದುಕಿನ ಜಟಿಲತೆಯನ್ನು ನೀಗಿಸುವ, ಹೊಸ ಬಾಳಿನ ಆಶಾ ಭಾವನೆಯನ್ನು ಚಿಗುರಿಸುವ ಹಲವು ರೂಪಗಳು ಕಂಡು ಬರುತ್ತವೆ.

ಸ್ತ್ರೀ ಎಂಬ ಕೀಳರಿಮೆ ಇಲ್ಲದೇ ಪುರಷ ಪ್ರಧಾನ ಸಮಾಜದ ವಿರುದ್ಧ ಬಂಡಾಯದ ಬಾವುಟವನ್ನ ಹಾರಿಸಿದ್ದಾರೆ. ಎಷ್ಟೋ ಶತ-ಶತಮಾನಗಳಿಂದ ನಡೆಯುತ್ತಿರುವ ಅತ್ಯಾಚಾರ, ಕ್ರೌರ್ಯ, ಅಟ್ಟಹಾಸ, ದಬ್ಬಾಳಿಕೆ, ಶೋಷಣೆ ಮುಂತಾದವುಗಳಿಗೆ ತಮ್ಮ ಕವನಗಳ ಮೂಲಕ ಉತ್ತರಿಸುತ್ತಾರೆ. ಇಲ್ಲಿಯ ಕಾವ್ಯದಲ್ಲಿ ಕೆಲವರು ತಮ್ಮ ಪರಿಸರದ ಭಾಷೆಯನ್ನು ದುಡಿಸಿಕೊಂಡಿದ್ದಾರೆ. ಮತ್ತೇ ಕೆಲವರು ಸಹಜತೆಯನ್ನು ತರುತ್ತಾ ಹೊಸ-ಹೊಸ ಪರಿಕಲ್ಪನೆಗಳನ್ನು ಸಹೃದಯರಿಗೆ ತೋರಿಸಿಕೊಟ್ಟಿದ್ದಾರೆ. ಎಲ್ಲಿಯೂ ಸುತ್ತು ಬಳಸಿಲ್ಲ. ಜಟಿಲತೆ ಕಂಡು ಬರುವುದಿಲ್ಲ. ಹೀಗೆ ಗೋಕಾಕ ತಾಲೂಕಿನ ಮಹಿಳಾ ಕಾವ್ಯ ಪರಂಪರೆಯು ಆಧುನಿಕ ಸಾಹಿತ್ಯ ಕಾಲಘಟ್ಟದಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡು, ಕವಿಗಳಿಗಿಂತಲೂ ನಾವೇನೂ ಕಡಿಮೆಯಲ್ಲಾ. ಎಂದು ತೋರಿಸುತ್ತಾರೆ. ಒಟ್ಟಿನಲ್ಲಿ ಅವರ ರಚಿಸಿದ ಕಾವ್ಯ ಮಾರ್ಗವನ್ನು ಈ ರೀತಿಯಲ್ಲಿ ನೋಡಲಾಗಿದೆ.

ಅಡಿಟಿಪ್ಪಣಿಗಳು :

೧) ತನುವೆಂಬ ಹುತ್ತದಲ್ಲಿ, ಗುರುದೇವಿ ಹುಲೆಪ್ಪನವರಮಠ, ಶಕ್ತಿ ಪ್ರಿಂಟರ್ಸ್, ಪಬ್ಲಿಷರ್ಸ್, ಬೆಂಗಳೂರು-೨೦೦೫. ಪು-III

೨) ಅದೇ, ಪು-III

೩) ಡಾ. ಬಾಳಾಸಾಹೇಬ ಲೋಕಾಪೂರ, ಮುನ್ನುಡಿ ಬರಹ, ತನುವೆಂಬ ಹುತ್ತದಲ್ಲಿ, ಗುರುದೇವಿ ಹುಲೆಪ್ಪನವರಮಠ, ಶಕ್ತಿ ಪ್ರಿಂಟರ್ಸ್ ಪಬ್ಲಿಷರ್ಸ್, ಬೆಂಗಳೂರು - ೨೦೦೫. ಪು-V

೪) ಡಾ. ನಿಂಗಣ್ಣ ಸಣ್ಣಕ್ಕಿ, ಬೆನ್ನುಡಿ ಬರಹ, ನನ್ನ ಹಾಡು, ಶಕುಂತಲಾ ದಂಡಗಿ, ಪರಮೇಶ್ವರಿ ಪ್ರಕಾಶನ, ಗೋಕಾಕ. ೨೦೦೦. ಪು–೬೭

೫) ಎಲ್. ಎಸ್. ಚೌರಿ, ಮುನ್ನುಡಿ ಬರಹ, ಭಾವೈಕ್ಯ, ಸುಗಂಧಾ ಡಂಬಳ, ಬಸವ ಪ್ರಕಾಶನ, ಗೋಕಾಕ, ೨೦೦೬. ಪು–IV

೬) ಅದೇ, ಪು–VI

೭) ಬೆಳಗಾವಿ ಬೆಳಕು, (ಸಂ) ಎಸ್. ಆರ್. ಗುಂಜಾಳ, ಕನ್ನಡ ಸಾಹಿತ್ಯ ಪರಿಷತ್ತ, ಬೆಂಗಳೂರು. ೨೦೦೫, ಪು–೬೪೦.

ಅಧ್ಯಾಯ - ೪

ಮಹಿಳಾ ಕಾವ್ಯದ ವಸ್ತು ವೈವಿಧ್ಯತೆ

೪

ಮಹಿಳಾ ಕಾವ್ಯದ ವಸ್ತು ವೈವಿಧ್ಯತೆ

ಆಧುನಿಕ ಕನ್ನಡ ಸಾಹಿತ್ಯಕ್ಕೆ ಕಾವ್ಯ ಮಾರ್ಗ ವಿಶೇಷವಾದ ಕೊಡಗೆಯನ್ನು ನೀಡಿದೆ. ಇದೇ ಸಂದರ್ಭದಲ್ಲಿ ಗದ್ಯವು ವಿಶೇಷವಾಗಿ ಬೆಳದಿದ್ದರೂ ಸಹ ಕಾವ್ಯವನ್ನು ಕುರಿತು ಹೆಚ್ಚಿನ ಚರ್ಚೆಗಳು ನಡಿದೆವೆ. ಅಂದರೆ ಕಾವ್ಯ ಬಿಚ್ಚಿಡುವದಕ್ಕಿಂತ ಹೆಚ್ಚು ಮುಚ್ಚಿಡುವ ಗುಣವನ್ನು ಪಡೆದುಕೊಂಡಿರುವುದರಿಂದ ಅಲ್ಲಿ ಅಡಗಿರುವ ವಿಶೇಷತೆಯನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ಗೋಕಾಕ ಮಹಿಳಾ ಕಾವ್ಯ ಪರಂಪರೆಯಲ್ಲಿ ಹಲವು ಹತ್ತು ವಿಭಿನ್ನ ನೆಲೆಗಳು ಹಾಸು ಹೊಕ್ಕಾಗಿವೆ. ಅವುಗಳ ವರ್ಣನೆ ನನಗೆ ಮುಖ್ಯವಲ್ಲ. ಆ ಕಾವ್ಯದಲ್ಲಿ ಹುದುಗಿರುವ ವಿಶಿಷ್ಟ ನೆಲೆಗಳನ್ನು ಹೊರತೆಗೆಯುವದು ಮುಖ್ಯವಾಗಿದೆ. ಕಳೆದ ಶತಮಾನದಲ್ಲಿ ಕಾವ್ಯವು ತನ್ನ ಅಂತರಂಗದ ಅಡಿಯಲ್ಲಿ ವಿಭಿನ್ನ ಪ್ರಣಾಳಿಕೆಯ ಕಾವ್ಯ ಪ್ರಯೋಗ ಪ್ರಕ್ರಿಯೆಯು ಸಾಗುತ್ತ ಬಂದಿದೆ.

"ಈ ದೃಷ್ಟಿಯಿಂದ ನೋಡಿದರೆ ತೊಂಬತ್ತರ ದಶಕದಲ್ಲಿ ವಿಶೇಷವಾದ ಕಾವ್ಯ ಪ್ರಣಾಳಿಕೆಯೊಂದು ಹೊಸತಲ್ಲ, ಕನ್ನಡ ಕಾವ್ಯ ಪರಂಪರೆಯ ಶ್ರದ್ದೆ ದೊಡ್ಡದು. ಕವಿತೆ ಎಂಬುದು ಕಡಲಿನಂತೆ, ಆದರೆ ಅತಿಥಿಗಳಿಗೆ ಮುಗಿವಿಲ್ಲ ಆದರೂ ಅದು ಜೀವನದ ಹಲವಾರು ಅಗ್ನಿ ದಿವ್ಯಗಳ ಮುಖಾಮುಖಿಯಲ್ಲಿ ಕೇವಲ ಮಾತಾಗಿ ಬೀಡುತ್ತದೆ."[೧] ಈ ನಿಟ್ಟಿನಲ್ಲಿ ಅಲೋಚಿಸಿದಾಗ ಈ ಪರಿಸರದಲ್ಲಿಯ ವಿವಿಧ ನೆಲೆಗಳನ್ನು ಅಧ್ಯಯನದ ಮೂಲಕ ತೋರಿಸಿಕೊಡುವುದಾಗಿದೆ. ಈ ಪ್ರಾದೇಶಿಕತೆಯ ಮಹಿಳಾ ಕಾವ್ಯದಲ್ಲಿಯು ಎಲ್ಲ ಪಂಥದ ನೆಲೆಯಲ್ಲಿ ಗುರುತಿಸಿಕೊಂಡಿದೆ. ಅವುಗಳಲ್ಲಿ ಪ್ರಮುಖವಾಗಿ ಸಾಮಾಜಿಕ ಕಳಕಳಿಯನ್ನು ಹೊತ್ತು ಮೈದಳೆಯುತ್ತದೆ. ಅವುಗಳನ್ನು ಅಧ್ಯಯನ ದೃಷ್ಟಿಯಿಂದ ಕವಿತೆಗಳನ್ನು ಅನುಕೂಲಕ್ಕಾಗಿ ಈ ರೀತಿಯಲ್ಲಿ ಕಲೆ ಹಾಕಲಾಗಿದೆ.

೧. ನಾಡು –ನುಡಿ ಚಿತ್ರಣ
೨. ರಾಷ್ಟ್ರೀಯ ಭಾವೈಕ್ಯತೆಯ
೩. ಸಂಪ್ರದಾಯ – ಸಂಸ್ಕೃತಿ ಪರಂಪರೆ
೪. ವ್ಯಕ್ತಿ ಚಿತ್ರಣ
೫. ಸಾಮಾಜಿಕ ಕಳಕಳಿ
೬. ಅಂತರಂಗ ವಿವೇಚನೆ
೭. ಬದುಕಿನ ನಿಗೂಢತೆ
೮. ರಾಜಕೀಯ ವಿಡಂಬನೆ
೯. ಪ್ರೀತಿ, ಪ್ರೇಮ, ಒಲವು

ಮುಂತಾದವುಗಳನ್ನು ಕುರಿತು ಅವುಗಳ ಅಂತರಂಗದಲ್ಲಿ ಹುದಗಿದ ಅಪರೂಪ ಕವನಗಳನ್ನು ಗುರುತಿಸಲಾಗಿದೆ.

೧) ನಾಡು ನುಡಿ ಚಿತ್ರಣ :

'ಕನ್ನಡ' ಒಂದು ಭಾಷೆ, ಕರ್ನಾಟಕ ಎಂಬುದು ಒಂದು ನಾಡು, ಕನ್ನಡ ಮಾತನಾಡುವ ಜನ ವಾಸಿಸುವ ಭೂಮಿ ಕರ್ನಾಟಕ ಹಲವು ಮತಗಳ ಬೀಡಾಗಿವೆ. ಕನ್ನಡ ಧರ್ಮವೇ ಅದರ ವಿಶೇಷತೆಯಾಗಿದೆ. ಧರ್ಮ ಬಿಟ್ಟು ಬದುಕಿಲ್ಲ, ಬದುಕನ್ನು ಬಿಟ್ಟು ಧರ್ಮವಿಲ್ಲ. ಇಲ್ಲಿಯ ಮಹಿಳಾ ಕವಿಯತ್ರಿಯವರ ಅಭಿವ್ಯಕ್ತಿಯ ಸಾಹಿತ್ಯವೂ ಅದೇ ಮನೋಧರ್ಮದಿಂದ ಕೂಡಿದೆ. ಕನ್ನಡಾಂಬೆಯ ಈ ನಾಡಿನ ಧರ್ಮದೇವತೆ ಅವಳ ಚೈತನ್ಯದ ಶಕ್ತಿಯೇ ಸರ್ವರ ಚೇತನದ ಮೂಲಶಕ್ತಿ. ಇಲ್ಲಿ ರಚಿತವಾದ ಕಾವ್ಯಗಳ ಉದ್ದೇಶ ಕನ್ನಡ ನಾಡು – ನುಡಿಯ ಬಗೆಗೆ ಅಭಿಮಾನ ಸೂಚಿಸುತ್ತೇವೆ.

ವರ್ತಮಾನದ ಭಾರತ 'ತಾಯಿ', ಭೂಮಿ ತಾಯಿ, ಕನ್ನಡಾಂಬೆ, ಕನ್ನಡ ರಾಜೇಶ್ವರಿ ಹಲವು ಹತ್ತು ಮುಖಗಳು ಇಲ್ಲಿ ಕಾಣಿಸಿಕೊಳ್ಳುತ್ತವೆ.

"ಕನ್ನಡ ನಾಡಿನ ಅನ್ನವನುಂಡು
ಕನ್ನಡ ನೆಲದಲಿ ಮಿಂದು ಪಾವನಗೊಂಡು
ಕನ್ನಡ ಮಂತ್ರವ ಪಠಿಸುತ ನಾವಿಂದು
ಕನ್ನಡಾಂಬೆಯ ಋಣವ ತೀರಿಸೋಣಾ"

(ನನ್ನ ಹಾಡು – ಕನ್ನಡ ನಾಡು ನುಡಿ, ಪು–೧೧)

ಇಲ್ಲಿ ನಾಡಿನ ಋಣದ ಪವಿತ್ರವಾದ ಪ್ರೇಮ ಅಡಗಿದೆ. ನಾಡು ನುಡಿ ಸಂಸ್ಕೃತಿಯನ್ನು ಉಸಿರಿನಲ್ಲಿಟ್ಟುಕೊಂಡು ತನ್ನ ಜನರಿಗೆ ಅದರ ಮಹತ್ವನ್ನು ಸಾರಿ ಹೇಳುತ್ತದೆ. ಅನ್ನದ ಋಣಕ್ಕಿಂತ ಮೊತ್ತೊಂದು ಯಾವುದುಯಿಲ್ಲ ಎಂಬುದು ಈ ಕವನದ ಆಶಯ.

"ಭಾಷೆಯ ಮೇಲೆ ನಮಗೆ ವಿಪರೀತ ಮೋಹ
ನಮ್ಮ ಮನೆಯಲ್ಲಿ ನಿನ್ನ ಭಾಷೆ ಆಡಿದರೆ
ಬಿಡಲಿಕ್ಕಿಲ್ಲ ಜೀವ ಸಹಿತ
ಭಾಷಾ ಬೆಂಕಿ ಸುಟ್ಟೀತು ಭಗವಂತ"

(ತನುವೆಂಬ ಹುತ್ತದಲ್ಲಿ – ಮತ್ತೆ ಹುಟ್ಟಿ ಬಾ ಪು ೮)

ಭಾಷೆಯ ಮೇಲಿನ ಪ್ರೀತಿಯನ್ನು ಎಷ್ಟೊಂದು ರೀತಿಯಲ್ಲಿ ಹಚ್ಚಿಕೊಂಡಿದ್ದಾರೆ ನಮ್ಮ ಜನ. ಅದಕ್ಕಾಗಿ ಈ ಗಡಿನಾಡು ಪ್ರದೇಶದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಸೂಕ್ಷ್ಮವಾಗಿ ಅವಲೋಕಿಸಿದ ಕವಿಯತ್ರಿ ಅದರಲ್ಲಿರುವ ಹಕ್ಕು-ಬಾಧ್ಯತೆಯನ್ನು ಕೊಂಡಾಡಿದ್ದಾರೆ

"ಸಿರಿಗನ್ನಡ ನೆಲ ಜಲ ಭಾಷೆ
ಸಂಸ್ಕೃತಿಯ ಕಣಜವು ಇನ್ನಿಲ್ಲ ಸಾಗರದಾಚೆ
ಇಂತೀ ಕನ್ನಡ ದೈಸಿರಿಯ ಅರಿತು
ಕನ್ನಡ ಕಡುಗಲಿಗಳೆ ವೀರಾವೇಶದಿ ಎದ್ದೇಳಿ"

(ಭಾವೈಕ್ಯ –ಕನ್ನಡವೇ ಉಸಿರು– ಪ್ರ-೧೨)

ಈ ನೆಲದ ಪ್ರತಿಯೊಂದು ವಸ್ತುವಿಗೆ ಅದರ ರಕ್ಷಣೆಗೆ ಭಾಷಿಕ ಭಾಂಧವರು ಹೋರಾಡುವಂತಹ ಸ್ಥಿತಿಯನ್ನು ಕವಿಯತ್ರಿಯರು ಸೊಗಸಾಗಿ ಬಣ್ಣಿಸಿದ್ದಾರೆ. ಈ ಮಣ್ಣಿನ ಗುಣ ವೀರತ್ವ ಅದು ಪ್ರತಿಯೊಬ್ಬ ವ್ಯಕ್ತಿಯಲ್ಲಿಯು ಹುಟ್ಟಿ ಬರಲಿ. ಅದರಿಂದ ನಾಡು ವೈಭವದಿಂದ ಮುನ್ನಡೆಯಲ್ಲಿ ಎಂಬುದನ್ನು ಇಲ್ಲಿಯ ಕವನಗಳು ಸೂಚಿಸುತ್ತವೆ. ಹೀಗೆ ಮುಂತಾದ ಕವನಗಳಲ್ಲಿ ಕವಿಯತ್ರಿಯರು ನಾಡು–ನುಡಿ ಸೇವೆಗಾಗಿ ತಮ್ಮ ಕವನಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಅವುಗಳ ಒಳಹೊರಣವನ್ನು ಅರ್ಥೈಸಿಕೊಳ್ಳಬೇಕಾಗಿದೆ. ಆದಾಗ ಅವರ ಕವನಕ್ಕೂ ಒಂದು ಮಹತ್ವ ದೊರೆಯುತ್ತದೆ.

೨. ರಾಷ್ಟ್ರೀಯ ಭಾವೈಕ್ಯತೆ :

ರಾಷ್ಟ್ರದ ಬಗ್ಗೆ ಕಾಳಜಿಯುಳ್ಳ ಅನೇಕ ಕವಿಯತ್ರಿಯರು ತಮ್ಮ ಕವನಗಳ ಮೂಲಕ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಹೊರಸೂಸಿದ್ದಾರೆ. ರಾಷ್ಟ್ರೀಯ ಭಾವ್ಯಕ್ಯತೆಯನ್ನು ಗುಣಗಾಣಿಸಿದ್ದಾರೆ. ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರತಿಯೊಬ್ಬ ಪ್ರಜೆಯಲ್ಲಿಯ ನಿಲ್ಲುವ ಹಾಗೆ ಹಾಡಿ ಹೊಗಳಿದ್ದಾರೆ. ಇವತ್ತಿನ ಜಾಗತಿಕ ಸಂದರ್ಭದಲ್ಲಿ ಯುವಜನತೆ ಈ ಕಡೆ ಗಮನ ಕೊಡಬೇಕಾದ ಅವಶ್ಯಕತೆಯನ್ನು ಎತ್ತಿ ಹೇಳಿದ್ದಾರೆ. ಈ ಪರಿಸರದ ಕಾವ್ಯದಲ್ಲಿ ಭಾರತೀಯತೆ, ಮಾನವತಾವಾದ ಎದ್ದು ಕಾಣುತ್ತದೆ. ಯಾವುದೇ ಧರ್ಮದ ಸಂವೇದನೆಗಿಂತ ಭಾರತೀಯ ಸಂವೇದನೆ ಈ ಮಹಿಳಾ ಕಾವ್ಯದುದ್ದಕ್ಕೂ ಅಂತಸ್ಥವಾಗಿರುವುದನ್ನು ನಾವು ಕಾಣುತ್ತೇವೆ. ಇಲ್ಲಿ ಭಾರತೀಯ ಸಂಸ್ಕೃತಿ ಪರಂಪರೆಯ ಪ್ರೀತಿ ಮತ್ತು ಅಸ್ಥೆಯನ್ನು ಇಲ್ಲಿಯ ಕವಿತ್ರಿಯರ ಕಾವ್ಯ ಸಾಬಿತುಪಡಿಸುತ್ತದೆ. ಭಾರತೀಯ ಸಂಸ್ಕೃತಿ ಬಹುಮುಖೀ ನೆಲೆಯಲ್ಲಿ ಬೆಳೆದಿರುವಂಥದ್ದು. ಏಕತೆಯಲ್ಲಿ ವೈವಿಧ್ಯತೆಯನ್ನು ಸಾರುವ ಭಾರತೀಯ ಸಂಸ್ಕೃತಿಯ ಬಗೆಗೆ ಪ್ರೀತಿ, ಶ್ರುದ್ಧೆಯನ್ನು ಬೆಳೆಸುವುದು ಇಲ್ಲಿಯ ನಿರಂತರ ಗುರಿಯಾಗಿದೆ.

> "ಸ್ವಾತಂತ್ರ್ಯದ ಮಹತಿಯನ್ನರಿತು
> ಸ್ವತಂತ್ರ ಭಾರತದ ಪ್ರಜೆಗಳು
> ಸ್ವಾಭಿಮಾನ ಸ್ವದೇಶ ಪ್ರೇಮದಿ
> ಸ್ವಾತಂತ್ರಗಳಿಸಿ ಕೊಟ್ಟವರ
> ತತ್ವಗಳನು ಪಾಲಿಸಿ ಅವರ ಹೆಜ್ಜೆಯಲಿ ಹೆಜ್ಜೆಯ ಬಿಡುವ
> ಕಲ್ಯಾಣ ರಾಜ್ಯ ಸ್ಥಾಪಿಸೋಣ ನಾವಿಂದು"

(ನನ್ನ ಹಾಡು –ಸ್ವಾತಂತ್ರ್ಯ, ಪು–೨)

ರಾಷ್ಟ್ರದ ಸ್ವಾಭಿಮಾನಿಗಳಾಗಿ, ದೇಶದ ಐಕ್ಯತೆಯ ಸಮಾಗವಾಗಿ, ಮಹಾತ್ಮರ ತತ್ವಗಳನ್ನು ಅನುಸರಿಸಿ ಆವಾಗ ನಮ್ಮ ರಾಷ್ಟ್ರ ಪ್ರಗತಿದಾಯಕವಾಗಿರುವ ಗುರಿಯತ್ತ ಮುನ್ನಡೆಯವರು. ಸ್ವಾಭಿಮಾನಿಗಳಾದ ಜನರ ದೇಶದ ಆಂತರಿಕವಾದ ಭದ್ರತೆಗೆ ಒಂದುಗೂಡಿ ಹೋರಾಟ ನಡೆಸಬೇಕು. ವೈರಿಗಳನ್ನು ಸದೆ ಬಡೆದು ಭಾರತಾಂಬೆಯನ್ನು ರಕ್ಷಿಸಬೇಕು. ಶಾಂತಿ, ಸಂಯಮದಿಂದ ವರ್ತಿಸಿ ದೇಶದ ಕೀರ್ತಿ

[illegible]

ಪತಾಕೆಯನ್ನು ಹಾರಿಸಬೇಕು. ಸತ್ಯ, ಧರ್ಮ, ನ್ಯಾಯದಿಂದ ಜಯಿಸಬೇಕು. ಇವೆಲ್ಲ ಭಾರತೀಯರಿಗೆ ಆದರ್ಶ ಮಾರ್ಗದ ಸೂಚನೆಗಳನ್ನು ಈ ಕವನದಲ್ಲಿ ಗ್ರಹಿಸುತ್ತೇವೆ.

"ಏಳಿ ಏದ್ದೇಳಿ ಭಾರತೀಯರೆ ಎದ್ದೇಳಿ
ನಿದ್ರೆಯ ಸೋಗಿನಲ್ಲಿರುವ ಹಿರಿಯರೆ ಎದ್ದೇಳಿ"

(ಭಾವ್ಯಕ್ಯ – ಎಳಿ ಎದ್ದೇಳಿ, ಪ್ರ–೮)

ಎಂದು ಸಹೃದಯವನ್ನು ಎಚ್ಚರಿಸುವ ಬಗೆ ರಮ್ಯವಾಗಿದೆ. ದೇಶದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಯನ್ನು ಖಂಡಿಸಿ ಅದರ ವಿರುದ್ದ ಜನರನ್ನು ಎಚ್ಚರಿಸುವ ಮಾರ್ಗ ಸೂಕ್ತವಾಗಿ ಬಿಂಬಿತವಾಗಿದೆ.

"ದುರ್ಗಣ ದುರ್ವ್ಯವ ಹಾಗೆ
ಬಡತನ ಹೊಡೆದೋಡಿಸಿ
ಆರೋಗ್ಯಕ ಪರಿಸರ ಬೆಳಿಸಿ
ಜಾತಿ–ಮತ ಪಂಥಗಳ ಬೇದವನಳಿಸಿ
ಭಾವೈಕ್ಯದ ಬೀಜವನು ಬಿತ್ತೋಣ
ನಮ್ಮ ನಾವು ಅರಿತು ಪ್ರಾಂತಿಯ ಭಾವನೆ ಮರೆತು
ಸ್ವಾತಂತ್ರ್ಯದ ಮಹತಿಯನರಿಯೋಣ"

(ನನ್ನ ಹಾಡು–ಸ್ವಾತಂತ್ರ್ಯ, ಪ್ರ–೨)

ಸ್ವಂತಂತ್ರ ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬೆಳವಣಿಗೆ ಹೊಂದಿದೆ. ಜಾತ್ಯಾತೀತ ರಾಷ್ಟ್ರವೆಂದು ಪ್ರಪಂಚದಲ್ಲಿ ಹೆಸರಾಗಿದ್ದರೂ ಭಾರತದಲ್ಲಿ ಜಾತೀಯ, ಮತೀಯ ಗಲಭೆಗಳು ಆಗುತ್ತ ಬಂದಿವೆ. ಇದರಿಂದ ಅಶಾಂತಿ, ಕೌರ್ಯ, ತಲ್ಲಣಗಳು ಹೆಚ್ಚಿವೆ. ಇಂಥ ಸಂದರ್ಭಗಳಲ್ಲಿ ಕವಿಯತ್ರಿಯರು ಕವಿತೆಗಳ ಮೂಲಕ ಗಲಭೆ ಹಿಂಸೆಯುನ್ನು ಖಂಡಿಸುವ ಕವಿತೆಗಳು ಅವರ ಕವನಗಳಿಂದ ನಮಗೆ ದೊರೆಯುತ್ತದೆ.ಭಾರತದ ಸಾಮಾಜಿಕ ಪ್ರಜ್ಞೆಯ ಕವನಗಳು ಮೂಡಿ ಬಂದಿವೆ. ಭಾರತೀಯರ ಪರಸ್ಪರ ಅಪನಂಬಿಕೆ, ಅವಿಶ್ವಾಸಗಳಲ್ಲಿ ಬದುಕುತ್ತಿದ್ದಾರೆ. ವ್ಯಕ್ತಿ– ವ್ಯಕ್ತಿಯ ನಡುವೆ, ಮತ–ಮತಗಳ ನಡುವೆ ಗೋಡೆ ಎದ್ದು ನಿಂತಿದೆ. ದ್ವೇಷ,ಅಸೂಯೆ ತಾಂಡವಾಡುತ್ತಿದೆ. ಮನುಜ ಮನುಜನಂತಾಗಿ ಬಾಳಲಿಕೆ ಏಸು ಜೀವಮಾನ ಬೇಕು? ನಾಡು ನಾಡಿನಲ್ಲಿ ಸಮರ ಸಂಘರ್ಷವೇತಕೆ? ಮುಂತಾದವುಗಳನ್ನು ಕವಿಯತ್ರಿಯರು ವೈಚಾರಿಕವಾಗಿ ಪ್ರಶ್ನಿಸುತ್ತಾರೆ.

ಒಟ್ಟಿನಲ್ಲಿ, ರಾಷ್ಟ್ರೀಯ ಪ್ರಜ್ಞೆ ಮಹಿಳಾ ಕಾವ್ಯದಲ್ಲಿಯ ತೀವ್ರವಾಗಿ ತನ್ನ ಸ್ಪಷ್ಟ ಚಿತ್ರಣವನ್ನು ಬಿಂಬಿಸಿದೆ. ಕವಿಗಳು ನಡೆದು ಹಾದಿಯಲ್ಲಿ ಇವರು ಸಹ ನಡೆದು ಅವರಿಗಿಂತ ವಿಭಿನ್ನರಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಇವರು ಅನುಸರಿಸಿದ ಮಾರ್ಗವೇ ವಿನೂತವಾಗಿ ಓದುಗರಿಗೆ ಕಂಡು ಬರುತ್ತದೆ.

೩. ಸಂಪ್ರದಾಯ – ಸಂಸ್ಕೃತಿ ಪರಂಪರೆ :

ಕವಿಯತ್ರಿಯರ ಕಾವ್ಯದ ತುಂಬ ಭಾವುಕ ಪ್ರಕೃತಿ ಮತ್ತು ಬೌದ್ಧಿಕ ಸಂಸ್ಕೃತಿ ರೂಪುಗೊಂಡಿವೆ. ಇಲ್ಲಿ ರಮ್ಯತೆಯ ಭಾವಗಳು ಅಡಗಿವೆ. ಇವುಗಳ ಗುಂಗಿನಲ್ಲಿ ಮೈ–ಮರೆತ ಪದ ಪದ್ಯ ಸರಣಿ ಮೆಚ್ಚುವಂತದ್ದು . "ಕಾವ್ಯ ಸೃಷ್ಟಿಗೆ ಆತ್ಮವೇ ಮೂಲ – ಬುದ್ದಿಶಕ್ತಿ ಕಲ್ಪನೆ ಅಥವಾ ಶ್ರವಣ ಶಕ್ತಿ ಕಾವ್ಯವನ್ನು ಸ್ವೀಕರಿಸುವುದೂ ಇಲ್ಲ. ಸೃಷ್ಟಿ ಮಾಡುವುದು ಇಲ್ಲ. ಅವು ಮಾಧ್ಯಮಗಳು ಮಾತ್ರ. ತಮ್ಮ ಕೆಲಸವನ್ನು ಎಷ್ಟು ಶೀಘ್ರವಾಗಿ ನೆರವೇರಿಸಿ, ಶಬ್ದ ಎಷ್ಟು ನೇರವಾಗಿ ಆತ್ಮವನ್ನು ಮುಟ್ಟಿ ಆತ್ಮದ ಆಳಕ್ಕೆ ಇಳಿಯುತ್ತದೋ ಅದರ ಮೇಲೆ ಕಾವ್ಯದ ಶ್ರೇಷ್ಟತ ಅವಲಂಬಿಸಿರುತ್ತದೆ."[೨]ಇಂತಹ ಒಳ್ಳೆಯ ಕವಿತೆಗಳು ಕವಿತ್ರಿಯರಲ್ಲಿ ಕಂಡು ಬರುತ್ತವೆ.

"ಈ ಕಲಿಯುಗದಲ್ಲಿ ಆಕಾಶಕ ಹಾರ್‍ಯಾರ
ಗ್ರಹಗಳ ಮೇಲೆ ನಡೆದಾರ
ದೇವರಿಗೆ ಸವಾಲು ಹಾಕ್ಯಾರ
ದೇವರೇ ನೀನೆಲ್ಲಿರುವಿಯೆಂದು ಕೇಳ್ಯಾರ"

(ನನ್ನ ಹಾಡು – ವಿಜ್ಞಾನ ಯುಗ, ಪ್ರ –೪೨)

ಜಾಗತೀಕರಣದಲ್ಲಿ ನಮ್ಮ ಸಂಸ್ಕೃತಿ ವಿಸ್ಮಯದತ್ತ ಹೋಗುತ್ತದೆ. ಎಂಬ ಅಂಶ ಇಲ್ಲಿ ಸ್ಪಷ್ಟವಾಗಿ ಕಾಡತೊಡಗುತ್ತದೆ. ಒಂದೆಡೆ ವಿಜ್ಞಾನ ಇನ್ನೊಂದಡೆಯಲ್ಲಿ ಬದುಕಿನ ಸುಜ್ಞಾನ ಇವುಗಳನ್ನು ಆಧುನೀಕರಣದ ಸಂದರ್ಭದಲ್ಲಿ ನೋಡುವ ಕುತೂಹಲ ಕವಿಯತ್ರಿಯರಲ್ಲಿದೆ. ಅದರ ವಾಸ್ತವತೆಯ ಮಾರ್ಗವೇ ಬೇರೆ ಯಾಗಿದೆ. ಸಂಸ್ಕೃತಿಯ ಚಹರೆ ಎದ್ದು ಕಾಣುತ್ತದೆ.

" ಹಿರ್‍ಯಾರು ಹೆಣ್ಣು ನೋಡಾಕ ಬಂದಿದ್ರು
ಹಿರ್‍ಯಾರೊಳಗಿನ ಒಬ್ಬಾಂವ ಇದರಿಗೆ ಕುಂತ
ಕನ್ಯಾಗ ಕೇಳಿದ

ಮಗಳ ನಿನ್ನ ಹೆಸರೇನವ್ವಾ ?
ಕನ್ಯಾಮಣಿ ಮೆಲ್ಲಕ ಹೇಳಿದ್ಲು
'ಅವ್ವ ಅಪ್ಪ' ಇಟ್ಟ ಹೆಸರ್‍ರೀ ಕಸ್ತೂರಿರೀ
ಮತ್ತೆ ಕರ್‍ಯೊ ಹೆಸರು?
ಆಕಿ ಅಳುಕಿ ಹೇಳಿದ್ದು 'ಕಚ್ಚಿ ಕಚ್ಚಿ'
ಅಂತಾ ಕರಿತಾರ್‍ರಿ

(ತನುವೆಂಬ ಹುತ್ತದಲ್ಲಿ-ಬ್ಯಾಡಂತ ಹೊರಟ್ರು ಬರಕ್ಕನ, ಪುಟ-೪೩)

ಇಲ್ಲಿ ಹಳ್ಳಿಯ ಸಂಪ್ರದಾಯ - ಸಂಸ್ಕೃತಿಯು ತಟ್ಟನೆ ಕಣ್ಣಿಗೆ ಕಟ್ಟುತ್ತದೆ. ಒಂದು ಸಂಸ್ಕೃತಿಯನ್ನು ಅಭ್ಯಸಿಸಬೇಕಾದರೆ ಅದರಲ್ಲಿಯ ಭಾಷೆಯ ಮೂಲಕ ಅದು ತನ್ನ ಸ್ವರೂಪವನ್ನು ಅದರ ಮೇಲೆ ಬಿಚ್ಚಿಕೊಂಡಿರುತ್ತದೆ. ಇಲ್ಲಿ ಹಿರಿಯರು ಕನ್ಯಾ ನೋಡುವುದು ನಮ್ಮ ಸಂಸ್ಕೃತಿಯಲ್ಲಿ ನಡೆದು ಬಂದ ಬಗೆ ಒಂದೇ ವ್ಯಕ್ತಿಗೆ ಎರಡು ಹೆಸರುಗಳು ಸಹ ಸಂಸ್ಕೃತಿಯಲ್ಲಿ ಅಡಗಿರುತ್ತವೆ. ದೈಹಿಕ ಅಂಗವಿಕಲನಾದರೆ ಆತನಿಗೆ ಕಪ್ಪು ಇದ್ದರೆ ಬೇರೆ ಇವೆಲ್ಲ ಸಂಸ್ಕೃತಿ ಕುರುಹುಗಳನ್ನು ಪ್ರಾಚೀನತೆಯನ್ನು ನೆನಪಿಸುತ್ತವೆ.

೪) ವ್ಯಕ್ತಿ ಚಿತ್ರಣ :

ವ್ಯಕ್ತಿ ಬದುಕಿನ ವಿವಿಧ ಮಗ್ಗಲುಗಳನ್ನು ಕಾರ್ಯ ಸಾಧನೆಯ ಮಜಲುಗಳನ್ನು ಬದುಕಿನ ಸ್ಫೂರ್ತಿದಾಯಕ ಘಟನೆಗಳನ್ನು ವ್ಯಕ್ತಿತ್ವದ ಸ್ವರೂಪ ಮತ್ತು ಮಹತ್ವಗಳನ್ನು ಕುರಿತು ಅಧ್ಯಯನ ಮಾಡಿ ವಿಶ್ಲೇಷಿಸಿ, ವಿವೇಚಿಸುವುದು ವ್ಯಕ್ತಿ ಚಿತ್ರಣವು ಕಂಡು ಬಂದಿವೆ. ಅಂದರೆ ಕೆಲವು ಸಮಕಾಲೀನ ವ್ಯಕ್ತಿಗಳನ್ನು ಕೊಂಡಾಡದೆ ಅನೇಕ ದೈವಿ ಪುರಷನ ಕಾರ್ಯವನ್ನು ಗುರುತಿಸುವಂತದ್ದು ಈ ಕವಿಯತ್ರಿಯರ ಕವನಗಳಲ್ಲಿ ವ್ಯಕವಾಗುತ್ತದೆ.

"ಶ್ರೀಯತಿ ರಾಘವೇಂದ್ರ ಸರಸ್ವತಿರಮಣ
ಸರ್ವ ಪಾಪನಾಶಕ ಕರುಣಾನಿಧಿ
ಸದ್ಗುಣ ಪೂರ್ಣರು ಭಕ್ತಾಗ್ರೇಸರು
ದ್ವೈತ ಮತ್ತೋದ್ಧಾರ
ಸತ್ಯ ಸಂಧರು ನಿತ್ಯ ಪೂಜಿತರು
ಭಕ್ತಾರಾಧೀನ"

(ನನ್ನ ಹಾಡು - ಶ್ರೀಯುತ ರಾಘವೇಂದ್ರ, ಪು-೬೩)

ಭೃತ್ಯ ಭಾವವುಳ್ಳವನೇ ದಾಸ ಇಂತಹ ಶ್ರೇಷ್ಠ ದೈವರಾದವರು ಶ್ರೀ ರಾಘವೇಂದ್ರ ಸ್ವಾಮಿಗಳು. ನವವಿಧ ಭಕ್ತಿಯ ಪ್ರತಿಪಾದಕರು ಭಕ್ತರ ಸಂಕಷ್ಟವನ್ನು ಪರಿಹರಿಸುವರು. ಜೀವನದಲ್ಲಿ ಒಂದು ಸುಖ ಶಾಂತಿಯನ್ನು ದೊರಕಿಸಿಕೊಡಲು ಆರ್ಶಿವಧಿಸುವರು. ಇಂತವರ ಕೌರ್ಯವನ್ನು ಕವಿಯತ್ರಿಯವರು ಮನಗಾಣ ಮಾಡಿ ಹಾಡುತ್ತ ಕವನ ರಚಿಸಿದ್ದಾರೆ.

"ಶರಣಂ ಬಸವ ಪ್ರಭುವೆ
ಶರಣಂ ವಿಶ್ವ ಗುರುವೆ
ಬಾರಯ್ಯ ಧರೆಗವತರಿಸಿ ಇನ್ನೊಮ್ಮೆ"

(ಭಾವೈಕ್ಯ – ವಿಶ್ವಗುರು, ಪು–೪)

ಹನ್ನೆರಡನೆಯ ಶತಮಾನದ ರಾಜಕೀಯ ತಂತ್ರ, ಕುತಂತ್ರದಲ್ಲಿ ಬೆಂದು, ಅಂತಹ ಸಂದರ್ಭದಲ್ಲೂ ಛಲ ಬೀಡದೆ ವೀರಶೈವ ಧರ್ಮದ ಸಾರವನ್ನು ಸಮಾನತೆಯ ತತ್ವದ ಆಧಾರದ ಮೇಲೆ ಜನಸಾಮಾನ್ಯರಿಗೆ ತಲುಪುವಂತೆ ಮಾಡಿದುದು. ಬಸವಣ್ಣವರು ಕುರಿತು ಭಾವನೆಯನ್ನು ಈ ರೀತಿ ವ್ಯಕ್ತ ಪಡಿಸಿದ್ದಾರೆ. ಈ ಕವನದಲ್ಲಿ ಪಾಪ. ಪುಣ್ಯ ಸ್ವರ್ಗ, ನರಕ, ನಡೆ–ನುಡಿ, ಆಚಾರ ಸಿದ್ದಿ ಮುಂತಾದ ಅಂಶಗಳನ್ನು ಜನಸಾಮಾನ್ಯರಿಗೆ ತಿಳಿಸಿ ಅವರನ್ನು ಸನ್ಮಾರ್ಗದತ್ತ ಕೊಂಡೊಯ್ದು ಮಾಣಿಕ್ಯ ದೀಪ್ತಿಯಾದಿರೆಂದು, ವಿಶ್ವಗುರುವಾಗಿರೆಂದು ಇನ್ನೊಮ್ಮೆ ಅವತಾರು ತಾಳು ಎಂದು ಚಿತ್ರಿಸುತ್ತಾರೆ.

ಬಸವಣ್ಣರವರು ಸೃಷ್ಟಿಸಿದ ಶರಣರ ಪಡೆ, ಕಟ್ಟಿದ ಮಹಾಮನೆ ಅನುಭವ ಗೋಷ್ಠಿ, ಶರಣರ ಅನುಭವತತ್ವ ಮುಂತಾದ ಅಂಶವನ್ನು ಕವನದ ಮೂಲಕ ನೆನೆಪಿಸುತ್ತಾರೆ. ಪ್ರತಿಯೊಂದು ಧರ್ಮಕ್ಕೂ ತನ್ನದೇ ಆದ ನೆಲೆ ಇರುತ್ತದೆ. ಅವುಗಳನ್ನು ಸ್ಥಾಪಿಸಲು ಜನರಿಗೆ ಅರ್ಥೈಯಿಸಲು ಅನೇಕ ಧಾರ್ಮಿಕ ನೇತಾರರು ತಮ್ಮದೇ ಆದ ಮಾರ್ಗವನ್ನು ಸೃಷ್ಟಿಸಿದರು. ಅವರ ಹಾಕಿದ ಮಾರ್ಗದ ತತ್ವದಡಿಯಲ್ಲಿ ಇಂತಹ ಮಹಾತ್ಮರನ್ನು ಸ್ಮರಿಸುವ ಯತ್ನ ಹಾಗೂ ಅವರ ಧರ್ಮದ ಸಾರವನ್ನು ತಿಳಿಹೇಳುವ ಭಾಷೆಯ ಮಾಧ್ಯಮವಾಗಿ ಇಲ್ಲಿಯ ಕವನಗಳು ಮೂಡಿ ಬಂದಿವೆ.

೫.ಸಾಮಾಜಿಕ ಕಳಕಳಿ :

ಪ್ರತಿಯೊಬ್ಬ ಕವಿಯು ಅಥವಾ ಕವಿಯತ್ರಿ ತಾನು ಹುಟ್ಟಿದ ಬೆಳೆದ ಬದುಕಿನ ಪರಿಸರವನ್ನು ತಮ್ಮ ಸಾಹಿತ್ಯದಲ್ಲಿ ಪ್ರತಿಬಿಂಬಿಸುವುದು. ಹಿಂದಿನಿಂದಲೂ ನಡೆಯ ಬಂದಿದೆ. ತನ್ನ ಪರಿಸರ ಗಿಡ, ಬೆಟ್ಟ, ಕಾಡು ,ನದಿ ಪ್ರಕೃತಿ ಮುಂತಾದವುಗಳಿಂದ ಪಡೆದ ಆನಂದವನ್ನು ಮತ್ತು ತನ್ನ ಪರಿಸರದೊಂದಿಗಿನ ಸಹಕಾರ ಮುಂತಾದ ಅಂಶಗಳನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿಸಿ ಕಾವ್ಯ ರಚಿಸುವುದು ವಾಡಿಕೆ. ಇಂತಹ ಸಂದರ್ಭಕ್ಕೆ ಈ ಮಹಿಳಾ ಕವಿಯತ್ರಿಯರು ಹೊರತಾಗಿಲ್ಲ. ತಾವು ಬದುಕಿನಲ್ಲಿ ಪಟ್ಟಯಾತನೆ ಹಾಗೂ ಸಂತಸಗಳನ್ನು ತಮ್ಮ ಕವನದಲ್ಲಿ ಯಥಾವತ್ತಾಗಿ ಚಿತ್ರಿಸಿದ್ದಾರೆ.

ಮನುಷ್ಯ ಸ್ವಭಾವವು ಅವನ ಸಾಮಾಜಿಕ ಪರಿಸರದಿಂದ ರೂಪಿತವಾಗುತ್ತದೆ. ಎಂದಾದರೆ ಅವನು ಸಾಮಾಜಿಕ ಪರಿಸರವು ಹೆಚ್ಚು ಮಾನವೀಯವಾಗಬೇಕಾದದ್ದು. ಅನಿವಾರ್ಯ ಇಂತಹ ಮನೋಭಾವಗಳನ್ನು ಇಲ್ಲಿಯ ಕವಿಯತ್ರಿಯರ ಕವನಗಳಲ್ಲಿ ಎದ್ದು ಕಾಣುತ್ತವೆ. ಮನುಷ್ಯನಿಗೆ ಇರುವ ಬಯಕೆಗಳು ಅದರ ಆಳ ವಿಸ್ತಾರವನ್ನು ಕವನಗಳು ಸ್ಪಷ್ಟವಾಗಿ ಗುರುತಿಸುತ್ತೇವೆ.

“ಏಳು ಸಖಿ ಎದ್ದೇಳು
ಜಾಗೃತಗಳಾಗು ಎದ್ದೇಳು
ಇಂದಿನಾ ದಿನದಲ್ಲಿ ಲಾಂಛನದಾ ಮೋಡಿಯಲಿ
ಒಳ ಸಂಚಿನಾ ತೆರೆಯಲಿ ಅಡಗಿದಾ ಗುಟ್ಟನು
ದಿಟ್ಟತನ ಎದುರಿಸಲು ಟೊಂಕಕಟ್ಟಿ ಎದ್ದೇಳು”

(ಭಾವೈಕ್ಯ – ಜಾಗೃತಿ, ಪು–೧)

ಸಾಮಾಜಿಕ ಪರಿಸರದಲ್ಲಿಯ ದ್ವಂದ್ವ ನೀತಿಯನ್ನು ಮನಗೊಂಡು ಅಲ್ಲಿಯ ಅವ್ಯವಸ್ಥೆಯ ವಿರುದ್ದ ಧ್ವನಿ ಎತ್ತುವ ಹಾದಿಯಲ್ಲಿ ಸಾಗಿದೆ. ಈ ಕವನ ಜಾಗೃತಗಳಾಗಿ ಮುಂದೇ ಹೋಗು ಎನ್ನುವುದು ಆಶಾವಾದಿತ್ವದ ಸೂಚನೆಯನ್ನು ಕೊಡುತ್ತದೆ. ದಿಟ್ಟತನದ ಎದೆಗಾರಿಕೆಯಿಂದ ಜೀವನ ಸಾಗಿಸಬೇಕು ಎನ್ನುವಲ್ಲಿ ಸಮಾಜದಲ್ಲಿ ತಲೆದೋರಿದ ಅಪಮೌಲ್ಯವನ್ನು ರಮ್ಯತೆಯಲ್ಲಿ ಕಟ್ಟಿ ಕೊಡಲು ಬಯಸುತ್ತಾರೆ.

“ ಈಜಗವೆಂಬ ಹೂದೋಟದಲಿ
ಇವರು ಅವರು ಹೊಗಳುದರಲಿ

ಇರುತ ನಾನಾ ಬಗೆಯ ಕಂಪು ಸೂಸುತಲಿ
ಇರುವಷ್ಟು ದಿನ ನಗುತ ಬಾಳೋಣ
ಇಂದು ಎಂದೋ ಒಂದು ದಿನ
ಇರುವವರಿಗೆ ಬರುವ ಮರಣ
ಇದಕೆ ಹೆದರದೆ ಜೀವನದಲ್ಲಿ ಕೊಳೆ ತೊಳೆಯೋಣ
ಇರುವ ತನಕ ಜೀವನ ಪಾವನಗೊಳಿಸೋಣ"

(ನನ್ನ ಹಾಡು – ಜೀವನ, ಪು–೧೬)

ಸಮಾಜದಲ್ಲಿ ನೆಮ್ಮದಿಯಿಂದ ಜೀವನ ಕಳೆಯಲ್ಲಿಕ್ಕೆ ಬೇಕಾಗಿರುವುದು ನಗು. ಆ ನಗುವಿನಲ್ಲಿ ಸಮಾಜದ ಅರಿವು ಅಡಗಿದೆ. ಕಷ್ಟಗಳ ಭವನೆಯನ್ನು ಲೆಕ್ಕಿಸಿದೆ, ಹೆದರದೆ ಜೀವನದಲ್ಲಿಯ ದುಃಖ, ದುಮ್ಮಾನಗಳನ್ನು ಕಿತ್ತು ಹಾಕಿ ಶಾಂತಿ, ನೆಮ್ಮದಿಂದ ಬದುಕನ್ನು ಸಾಗಿಸುವ ತವಕ ಇಲ್ಲಿ ಮುಖ್ಯವಾಗಿ ಗೋಚರಿಸುತ್ತದೆ. ಆನಂದಾನುಭೂತಿಯಲ್ಲಿ ಜೀವನ ಸುಖ ಹಾಸುಹೊಕ್ಕಾಗಿದೆ. ಒಂದು ಗೂಡಿ ಜೀವಿಸುವುದರಲ್ಲಿ ಅದು ಸಾಧ್ಯವಿದೆ. ಎಂಬ ಮಾತನ್ನು ಕವಿಯತ್ರಿ ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

"ಅಧರ್ಮವುಂಟಾಹಾಗಲೆಲ್ಲ
ಹುಟ್ಟಿ ಬರುತ್ತೇನೆಂದು
ಅಭಯ ವಚನ ನೀಡಿದ್ದಿಯಲ್ಲ ?
ಈಗ ಹುಟ್ಟಿ ಬಾ
ನೀನು ಬರಲೆಂದೇ ಎಲ್ಲಂದರಲ್ಲಿ ಎಂಥಾ ಜೊಲೊ ಅಧರ್ಮದ
ವಾತಾವರಣ ಸೃಷ್ಟಿಸಿ ಬಿಟ್ಟಿದ್ದೇವೆ.
ಹಾಂಞಂ, ನಿಲ್ಲು"

(ತನುವೆಂಬ ಹುತ್ತದಲ್ಲಿ ಮತ್ತೆ ಹುಟ್ಟಿ ಬಾ, ಪು–೨೭)

ಧರ್ಮ – ಅಧರ್ಮ ಇವುಗಳ ನಡುವಿನ ತಾತ್ವಿಕ ವ್ಯತ್ಯಾಸವನ್ನು ನಾದಮತೆಯಿಂದ ಅರ್ಥದ ನೆಲೆಯವರಿಗೆ ಭಾವನೆಗಳನ್ನು ಭಾಷೆಯ ರೂಪದಲ್ಲಿ ಕಟ್ಟಿಕೊಡತ್ತಾ ಸಾಗುತ್ತಿದೆ. ಗುರುದೇವಿಯವರು ತಮ್ಮ ಅಂತರಂಗದ ಅಭಿವ್ಯಕ್ತಿಯಿಂದ ಸಾಮಾಜಿಕ ಜನಜೀವನವನ್ನು ತುಂಬಾ ಕುತೂಹಲಕಾರಿಯಾಗಿ ಅರ್ಥ ಪೂರ್ಣವಾಗಿ ಸಹೃದಯರಿಗೆ ನೀಡಿದ್ದಾರೆ.

ಇಲ್ಲಿಯ ಈ ಎಲ್ಲ ಕವನಗಳು ಸಾಮಾಜಿಕ ಪದರುಗಳಿಂದ ಉತ್ಪತ್ತಿಗೊಂಡು ಕನ್ನಡ ಕಾವ್ಯದ ನಡಿಗೆಯನ್ನು ಸಂಪೂರ್ಣವಾಗಿ ಬಿಟ್ಟು ಕೊಟ್ಟಿಲ್ಲ. ತಾವು ಬಯಸಿದ ಹಸಿವನ್ನು ಹಿಂಗಿಸಿಕೊಳ್ಳಲು ಮುನ್ನುಡಿಯತ್ತಿವೆ. ಕೆಲವೇಳೆಯಲ್ಲಿ ಆ ನಿಟ್ಟಿನಲ್ಲಿ ಸೋಲು-ಗೆಲುವುಗಳ ಏಣಿಯಾಟದಲ್ಲಿ ಮುಂದುವರಿಯುತ್ತಿರುವುದು ಕಾಣುತ್ತೇವೆ.

೬) ಅಂತರಂಗ ವಿವೇಚನೆ :

ಯಾವುದೇ ಸೃಜನಶೀಲ ಕವಿಯತ್ರಿ ತನ್ನ ಕೃತಿಗಳಲ್ಲಿ ಯಾವುದಾದರೊಂದು ಭಾಗದಲ್ಲಿ ತಾನು ನಡೆದ ಬಂದ ದಾರಿ, ಪಟ್ಟ ಶ್ರಮ, ಶಿಕ್ಷಣ, ಪ್ರಭಾವ ಬೀರಿದ ವ್ಯಕ್ತಿಗಳು, ಪ್ರೋತ್ಸಾಯಿಸಿದ ಗಣ್ಯರು ತನ್ನ ವ್ಯಕ್ತಿತ್ವ ವಿಶೇಷ ಹವ್ಯಾಸಗಳನ್ನು ಹಾಗೂ ಕಾರಣೀಭೂತರಾದವರು ಅವರ ಗುಣ ಸ್ವಭಾವ ಮುಂತಾದ ವ್ಯಕ್ತಿಗತ ವಿವರಗಳನ್ನು ತನ್ನ ಕವನಗಳಲ್ಲಿ ಹೇಳಿಕೊಂಡಿರುವುದು ಕಾಣುತ್ತೇವೆ. ಅವುಗಳ ಹಿಂದಿನ ಪ್ರೇರಣೆ, ಪ್ರಭಾವ ಗುರುತಿಸಬೇಕು. ಈ ನಿಟ್ಟಿನಲ್ಲಿ ಇಲ್ಲಿಯ ಕವಿಯತ್ರಿಯರು ಸಹ ಕವನಗಳ ಮೂಲಕ ಅಂತರಂಗ ಅನಿಸಿಕೆಯನ್ನು ಕಟ್ಟಿಕೊಟ್ಟಿದ್ದಾರೆ.

"ತಾಯಿ ಮಡಲಲಿ ಮನ ಬಿಚ್ಚಿ ಆಡಿದೆ
ತಾಯಿ ಮಡಿಲಲಿ ಕಣ್‌ಬಿಟ್ಟು ನೋಡಿದೆ
ತಾಯಿ ಮಡಲಲಿ ಸುಂದರ ದೇವರ ಕಂಡೆ
ತನು ಮನ ಪುಲಕದಿಂದ ಹರುಷಗೊಂಡೆ"

(ನನ್ನ ಹಾಡು - ತಾಯಿ ಮಡಲಲಿ, ಪು-೧೪)

ಬಾಲ್ಯದ ಅನುಭವಗಳು ಕವಿಯತ್ರಿ ಅವರಲ್ಲಿ ತಾಜಾತನದಿಂದ ಕೂಡಿವೆ. ತಾಯಿಯ ಅಕ್ಕರೆಯ ಮಾತು ಅವರ ಸನ್ನಿಧಾನ, ಪ್ರೀತಿ, ಎಲ್ಲವು ದೇವರನ್ನು ಕಾಣುವ ಹಂಬಲ ಇಲ್ಲಿ ತಾಯಿಯೇ ದೇವರು ಎಂದು ನಮಿಸುವ ಪರಿ ಅದ್ಭುತವಾಗಿದೆ. ಎಲ್ಲಿಯಾದರೂ ಈ ಕವನದಲ್ಲಿ ಕ್ಲಿಷ್ಟತೆಯಿಲ್ಲ. ಸುರಳ ಸುಂದರವಾದ ಮಾತುಗಳಿಂದ ತಾಯಿ ಒಡನಾಟದ ಛಾಯೆ ಇಲ್ಲಿ ಸ್ಪಷ್ಟವಾಗಿ ಚಿತ್ರಿತವಾಗಿದೆ.

"ನಮ್ಮ ಮುತ್ತಜ್ಜ ಹೇಳುವ ನಾನೇ ಸುಖಿ
ನಮ್ಮ ಬದುಕಿನಲಿ ಖುಷಿಯೇ ಖುಷಿ"

(ನನ್ನ ಹಾಡು-ಮುತ್ತಜ್ಜ, ಪು-೨೧)

ಕವಿತ್ರಿ ತನ್ನ ಅಜ್ಜನ ನೆನಪನ್ನು ಕವನದ ಸಾಲಿನಲ್ಲಿ ಸುಂದರವಾಗಿ ರಮ್ಯಯುತವಾದ ಮಧುರತನದಲ್ಲಿ ಚಿಗುರಿಸಿದ್ದಾರೆ. ತಂಗಾಳಿಯ ನಡುವೆ ಬಂಗಾರದ ಬದುಕನ್ನು ನೆನಪಿಸುವ ಅಂತರಂಗದ ಅಲೆ ಬಿಚ್ಚಿಕೊಳ್ಳುತ್ತಾ ಸಾಗಿದೆ.

"ಅಚ್ಚುಕಟ್ಟಿನ ಬಿಚ್ಚು ಮನಸ್ಸಿನ ಹುಚ್ಚಯ್ಯನವರು
ಕೆ.ಎಲ್.ಇ ಕೋಟೆಯ ಕಟ್ಟಿದ ಕಟ್ಟಿಮನಿಯವರು
ಸಪ್ತರ್ಷಿಗಳ ಮಂಡಲದಿ ಮಿನುಗು ತಾರೆ ಇವರು
ಬಹು ಮುಖ ಪ್ರತಿಭೆ ಹುಚ್ಚಯ್ಯನವರಿಗೆ ವಂದನೆ ಅಭಿನಂದನೆ"

(ಭಾವೈಕ್ಯ- ಶ್ರೀ ಹುಚ್ಚಯ್ಯ ಕಟ್ಟಿಮನಿಯವರು, ಪು-೨೦)

ಕವಿಯತ್ರಿ ತನ್ನ ಬದುಕಿಗೆ ಆಸರೆಯಾದ ಕೆ.ಎಲ್.ಇ. ಸಂಸ್ಥೆಯ ಕಟ್ಟಿ ಬೆಳೆಸಿದ ಪುಣ್ಯ ಪುರಷನ್ನು ನೆನೆಯುವದರಿಂದ ಅಲ್ಲಿ ಭಾವೈಕ್ಯತೆ ತಾಪು ಹೆಚ್ಚಿದೆ. ಲೋಕಕಲ್ಯಾಣ ಮಾರ್ಗಕ್ಕೆ ಈ ಸಂಸ್ಥೆ ಹುಟ್ಟಿಕೊಂಡ ಬಗೆ ಅಲ್ಲಿಯ ಉದ್ಯೋಗದ ಜೀವಿಸಿದ ನೆನಪುಗಳು ಈ ಕವನದ ಸಾಲುಗಳಲ್ಲಿ ಎದ್ದು ಕಾಣುತ್ತವೆ. ಅದರಲ್ಲಿಯ ಧನ್ಯತೆಯ ಭಾವ ನಿಜವಾಗಿಯೂ ಕವಿಯತ್ರಿಯ ಅಂತರಂಗವನ್ನು ಬಯಲಿಗೆ ತರುತ್ತದೆ.

೨. ಬದುಕಿನ ನಿಗೂಢತೆ :

ಮನುಷ್ಯ ನಿತ್ಯದ ಬದುಕಿಗೆ ಕ್ಷಣ ಕ್ಷಣ ಹೋರಾಡಬೇಕಾಗುತ್ತದೆ. ನಮ್ಮದಲ್ಲದ ಸ್ಥಳದಲ್ಲಿ ಅಸ್ತಿತ್ವದ ಶೋಧ ನಡೆಸಬೇಕಾಗುತ್ತದೆ. ಅದನ್ನು ನಿತ್ಯದ ಗುದಮುರಿಗೆಯಲ್ಲಿ ಕವಿಯತ್ರಿಯರು ಸೊಗಸಾಗಿ ಚಿತ್ರಿಸಿದ್ದಾರೆ. ಬದಕೊಂದು ಹೋರಾಟವೇ ಆಗಿದೆ. ಅಲ್ಲಿ ಭವನೆಯ ಸಾಹಸವನ್ನು ನೋಡಬೇಕು. ಅದರಲ್ಲಿಯ ಕಷ್ಟ - ನಷ್ಟ ಸುಖ-ದುಃಖ ಇವುಗಳ ತಮ್ಮ ಅಸ್ತಿತ್ವವನ್ನು ಹೇಗೆ ಸ್ಥಾಪಿಸಿಕೊಳ್ಳುತ್ತವೆ. ಎಂಬುದನ್ನು ಬದುಕಿನ ನಿಗೂಢತೆಯಲ್ಲಿ ಕಾಣುತ್ತೇವೆ.

"ಹೆಣ್ಣೇನ ಮಾಡೀತ ಹೆಣ್ಣಿನ ಬುದ್ದಿ ಮೊಳಕಾಲ ಕೆಳಗೆ ಅಂತಾರೆ
ವರದಕ್ಷಣೆ ಅಂತ ವರನ ಬೆಲೆ ಕಟ್ಟತಾರ
ಹೆಣ್ಣಿಗೆ ಬೆಲೆ ಕಟ್ಟೋದು ಬೇಡಾ
ಕಾಸಿಗೆ ಕಿಮ್ಮತ್ತ ಕಳೆಯೋದು ಬೇಡಾ"

(ಭಾವೈಕ್ಯ -ಸಬಲೆ, ಪು-೧೧)

ಬದುಕಿನ ನಿತ್ಯದ ಜೀವನದಲ್ಲಿಯು ಹೆಣ್ಣಿನ ಅಳಲು, ಅವಮಾನ ಮುಂತಾದವುಗಳು ಸ್ತ್ರೀ ಸಂವೇದನಾ ಶೀಲ ಮಾರ್ಗದಲ್ಲಿ ವ್ಯಕ್ತವಾಗಿದೆ. ಹೆಣ್ಣಿನ ಬದುಕಿನ ಭವಣೆಯಲ್ಲಿ ಕಷ್ಟವನ್ನು ಸುಂದರವಾದ ಭಾಷೆಯಲ್ಲಿ ಸುಗಂಧ ಅವರು ಹೆಣೆದಿದ್ದಾರೆ. ಅವರು ಸಹ ಈ ಯಾತನೆಯನ್ನು ಅನುಭವಿಸಿದವರೆ ಹೀಗಾಗಿ ಕಾವ್ಯ ಕವಿಯತ್ರಿಯ ಒಡಲಾಳದಿಂದ ಹುಟ್ಟಿ ಬೆಂಕಿಯ ಉಂಡಿಯನ್ನು ಹೊರಸೂಸುತ್ತಿವೆ.

"ನಮ್ಮಪ್ಪ ನನಗ ಸಾಲಿ ಕಲಿಸಲಿಲ್ಲಾ
ನೀ ಸಾಲ ಕಲಿತೇನು ಮಾಡುವೆ ನಂದೆನಲ್ಲಾ
ನನಗೀಗ ಅಕ್ಷರ ಜ್ಞಾನವಿಲ್ಲಾ
ನಾನು ಜೀವನದಲ್ಲೇನೂ ಸಾಧಿಸಲಿಲ್ಲಾ"

(ನನ್ನ ಹಾಡು ಅಕ್ಷರ ಭಾಗ್ಯ – ಪು–೨೪]

ಅಕ್ಷರ ಜ್ಞಾನದಿಂದ ವಂಚಿತರಾದ ಮಹಿಳೆಯಲ್ಲಿ ಹಿಸುಕಿ ಹಾಕಿವೆ ಎಂಬುದನ್ನು ಶಕುಂತಲಾ ಅವರು ಈ ಕಾವ್ಯದ ಮೂಲಕ ತೊಡಗಿಸಿಕೊಂಡಿದ್ದಾರೆ. ಸಾಧನೆಗೆ ಹಲವು ಮುಖಗಳು ಆ ಎಲ್ಲ ದಾರಿಯು ಮುಚ್ಚಿರುವುದರಿಂದ ಯಾವುದೇ ಸಾಧನೆಯನ್ನು ಮಾಡಲು ಆಗುವುದಿಲ್ಲ ಎಂಬ ಅಳಲನ್ನು ವ್ಯಕ್ತಪಡಿಸಿದ್ದಾರೆ.

೮) **ರಾಜಕೀಯ ವಿಡಂಬನೆ :**

ಇವತ್ತಿನ ರಾಜಕೀಯದ ಚದುರಂಗ ಆಟದಲ್ಲಿ ಜನರು ಯಾವುದೇ ಪ್ರಗತಿಯನ್ನು ಪಡೆದುಕೊಳ್ಳದೇ ಅರಾಜಕತೆಗೆ ಬಲಿಯಾಗುತ್ತಿರುವುದನ್ನು ಕವಿಯತ್ರಿಯ ಪ್ರಶ್ನೆಸಿರುತ್ತಾರೆ. ಹಣ,ಹೆಂಡ ಮೂಲಕ ಚುನಾವಣೆಯಲ್ಲಿ ಗೆದ್ದು ಜನರಿಗೆ ಮೋಸ ಮಾಡುವರನ್ನು ಕವಿಯತ್ರಿ ಎಚ್ಚರಿಸುತ್ತಾರೆ, ಟೀಕಿಸುತ್ತಾರೆ. ಸರಿದಾರಿಗೆ ತರಲು ಸೂಚಿಸುತ್ತಾರೆ. ಇವೆಲ್ಲವುಗಳನ್ನು ಕವಿಯತ್ರಿಯರು ಅತೀ ಸಮೀಪದಿಂದ ವೀಕ್ಷಿಸಿದ್ದಾರೆ. ಅವರ ಕಾವ್ಯದಲ್ಲಿ ಇವುಗಳು ತಾನೇ ತಾನಾಗಿಯೇ ಬಿಚ್ಚಿಕೊಳ್ಳುತ್ತವೆ.

"ಒಂದಲ್ಲ ಸಾವಿರಾರು ಅಶ್ವಾಸನೆಗಳು
ಒಂದನ್ನೂ ಪೂರೈಸಿದ ಶ್ವಾನಗಳು
ಗಿಡದಿಂದ ಗಿಡಕ್ಕೆ ಜಿಗಿಯುವ ಮಂಗಗಳು
ಒಂದೇ ಎಂದು ಕೂಗುವ ನರಿಗಳು
ಒಂದೇ ಹಂತದಲಿ ಆಕಾಶ ಮುಟ್ಟುವ ಹೇಡಿಗಳು"

(ನನ್ನ ಹಾಡು –ಹೇಡಿ, ಪ್ರ–೪೪)

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕವಿಯತ್ರಿ ಶಕುಂತಲಾ ಅವರು ರಾಜಕೀಯ ಮಹಾಶಯರನ್ನು ಮನದುಂಬಿ ಎಚ್ಚರಿಸಿದ್ದಾರೆ. ಅವರ ಆಶೆಬುರಕ ಬುದ್ಧಿಯನ್ನು ಖಂಡಿಸಿದ್ದಾರೆ. ಜನಗಳಿಗೆ ಸಾವಿರಾರು ಆಶೆಗಳನ್ನು ಆಶ್ವಾಸನೆಗಳನ್ನು ನೀಡಿ ಮತಪಡೆದು ಅಧಿಕಾರ ದರ್ಪವನ್ನು ತೋರಿಸುವ ಇವರ ಕುರಿತು ಕವಿಯತ್ರಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ರಂಗು ರಂಗಿನ ಕಥೆಯ ಕೇಳಿ ರಂಗಾಗ ಬೇಡಿರಿ
ದೇಶದ ಚರಿತ್ರೆಗೆ ಮಸಿಯನು ಬಳಿಯಂತಿಹ
ರಾಜಕಾರಣಿಗಳ ಹಗರಣಗಳ ಮಾಲೆ

(ನನ್ನ ಹಾಡು – ಹಗರಣಗಳ ಮಾಲೆ, ಪು–೧೨)

ರಾಜಕಾರಣಿಗಳ ಸಮಾಜದ ವಿಭಿನ್ನ ಮುಖಗಳನ್ನು ದೇಶದ ರಕ್ಷಕರೇ ಭ್ರಕ್ಷಕರಾಗುವ, ದೇಶದ ಚಿಂತೆಗೆ ಕಳಂಕವನ್ನು ಎಸೆಯುತ್ತಿರುವ ರಾಜಕಾರಣಿಗಳ ವಿರುದ್ಧ ಕವಿಯತ್ರಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಪ್ರಗತಿಯ ಕಾರ್ಯಕ್ಕೆ ಮಾರಕವಾಗಿರುವ ಅನೇಕ ಪಕ್ಷಗಳ ಪಕ್ಷಾಂತರ ನೀತಿಯನ್ನು ವಿರೋಧಿಸುತ್ತಾರೆ. ನಾಯಿಗಳು, ನರಿಗಳು, ಮರಿಗಳು, ಹೇಡಿಗಳು, ಮುಂತಾದ ಪದಗಳಿಂದ ಚೆನ್ನಾಗಿ ಬೈದಿದ್ದಾರೆ. ಅದರ ಮೂಲಕ ಸಾಮಾಜಿಕ ಸ್ವಾಸ್ಥ ತರಲು ಬಯಸುತ್ತಾರೆ.

ಹೀಗೆ ವ್ಯಂಗ ಟೀಕೆ ಮುಂತಾದವುಗಳ ಮೂಲಕ ರಾಜಕೀಯದ ಡೊಂಬರಾಟವನ್ನು ಕವಿಯತ್ರಿಯರ ತಮ್ಮದೇ ಆದ ಧಾಟಿಯಲ್ಲಿ ನಿಂದಿಸಿದ್ದಾರೆ. ಅವುಗಳಲ್ಲಿ ನಡೆದಿರುವ ಅಂಧಕಾರದ ದರ್ಪವನ್ನು ಹಿಸುಕಿ ಹಾಕಲು ಪ್ರಯತ್ನಿಸಿದ್ದಾರೆ.

೯) ಪ್ರೀತಿ, ಪ್ರೇಮ, ಒಲವು :

"ಪಾಶ್ಚಾತ್ಯ ಸಾಹಿತ್ಯದಲ್ಲಿ ಪ್ರೇಮವಿದೆ; ನಮ್ಮಲ್ಲಿ ಶೃಂಗಾರ ಮಾತ್ರವಿದೆ. ಎನ್ನುವ ಡಾ . ಪೋಲಂಕಿ ರಾಮಮೂರ್ತಿಯವರ ಮಾತು ಆಲೋಚನೆ ಮಾಡಬೇಕಾದದ್ದು, ಶೃಂಗಾರ ಮತ್ತೊಬ್ಬರಿಂದ ಸುಖ ಪಡೆಯುವ ಅನುಭವ, ಪ್ರೇಮ ಇನ್ನೊಬ್ಬರನ್ನು ನಮ್ಮ ಬಾಳಿನಲ್ಲಿ ಮಿಳಿತ ಮಾಡಿಕೊಳ್ಳುವ, ಇನ್ನೊಬ್ಬರ ಬಾಳಿನಲ್ಲಿ ನಾವು ಮಿಳಿತವಾಗುವ ಎರಡು ಬಾಳುಗಳು ಒಂದಾಗುವ ಪ್ರಕ್ರಿಯೆ. ಇದರಲ್ಲಿತನು ಸುಖದ ಅಂಶ ಸೇರಿಸಬಹುದು. ಎನ್ನುವ ಎಲ್.ಎಸ್. ಶೇಷಗಿರಿರಾವ ಅವರ ಮಾತು ಆಸಕ್ತಿ ಅಲೋಚನೆಗಳನ್ನು ಮೂಡಿಸುವಂಥದ್ದು ಇದನ್ನು ಇಂಗ್ಲಿಷನಲ್ಲಿ ಬೇರೆ ಬೇರೆ ರೀತಿಯಲ್ಲಿ ಹೇಳಲಾಗುತ್ತದೆ. " Love is the point where the soul meats the body"[೩]

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಕಾಳಿದಾಸ ಅವನ ಪ್ರೇಮದ ಭಾಷೆ ಇವೆಲ್ಲವು ಆಧುನಿಕ ಮಹಿಳಾ ಕಾವ್ಯದಲ್ಲಿ ಪುನರ್ ದೃಷ್ಟಿಯನ್ನು ಪಡೆದುಕೊಂಡಿವೆ. ಪ್ರೀತಿಯನ್ನು ಒಂದು ಪವಿತ್ರವಾದ ಬಂಧ, ಅದರಲ್ಲಿ ಉಳಿದವರು ಬಹಳಷ್ಟು ಹೊರಬಂದವರು ಎಷ್ಟೋ ಜನ ಇದ್ದಾರೆ. ಇವೆಲ್ಲವನ್ನು ಮಹಿಳಾ ಕವನದ ಹಿನ್ನೆಲೆಯಲ್ಲಿ ಗುರುತಿಸುವದು ನನಗೆ ಪ್ರಾಮುಖ್ಯವಾಗಿದೆ.

"ಅಮರ
ಪ್ರೇಮಕ್ಕೆ
ಬೇಡ
ಕಲ್ಲ್ಮಣ್ಣುಗಳ
ಮಹಲು
ಬಾಳೋಣ
ಅವರಿವರು
ಪಡುವಂತೆ
ದಿಗಿಲು"

(ತನುವೆಂಬ ಹುತ್ತದಲ್ಲಿ–ಪ್ರೇಮ, ಪ್ರ–೨೬)

ಪ್ರೇಮ ಅನ್ನುವದು ಅಮರ ಅದು ಸುಂದರ ಸ್ವಚ್ಛಂದ ಬಂಧನದಿಂದ ಕೂಡಿರಬೇಕು. ಅದರ ಸವಿ ಎಲ್ಲರು ದಿಗಿಲು ಪಡುವ ಹಾಗೆ ಅನುಭವಿಸೋಣ. ಹೀಗೆ ಪ್ರೀತಿಯ ಒಂದೊಂದು ಪದರನ್ನು ರಮ್ಯಧಾಟಿಯ ಚುಟುಕು ಕವಿತೆಯಲ್ಲಿ ಗುರು ದೇವಿಯವರು ಹಿಡಿದಿಟ್ಟಿದ್ದಾರೆ. ಶೃಂಗಾರ ಅಲಂಕಾರ ಇವುಗಳ ಕವನಗಳ ಭಾಷಾ ಸರಳತೆಯೊಂದಿಗೆ ಅರಳಿದೆ.

"ಪ್ರೀತಿಸುವುದೆಂದರೆ
ಬರುವುದಿಲ್ಲವೆಂದರೂ
ಬಯಕೆ ಬೋರೆಗಳ
ತುಂಬಿಟ್ಟು ಬುಟ್ಟಿ
ಕೊಡುವುದು ಬೆಳತನಕ
ಮುಗಿಲ ತಾರೆಗಳ
ತುಂಬಿಟ್ಟ ಬುಟ್ಟಿ

ಕೊಡುವುದು ಬೆಳತನಕ
ಮುಗಿಲ ತಾರೆಗಳನೆಹಿಸುತ್ತ"

(ತನುವೆಂಬ ಹುತ್ತದಲ್ಲಿ-ಪ್ರೀತಿಸುವದೆಂದರೆ,ಪ್ರ-೧೩)

ಪ್ರೀತಿಯನ್ನುವುದು ಎಲ್ಲಿ ಹುಟ್ಟುತೋ, ಎಲ್ಲಿಗೆ ಹೋಗಿ ಮುಟ್ಟುತೋ ಎನ್ನುವುದು ನಿರ್ಧಿಷ್ಟವಾಗಿ ಹೇಳಲಿಕ್ಕೆ ಬರುವುದಿಲ್ಲ.ತಾನಾಗಿಯೇ ಅದು ಹುಟ್ಟಿಕೊಂಡಿರುವಂತಹದ್ದು. ಬಯಕೆಯ ಬಾಹುಗಳಲ್ಲಿ ತನ್ನನ್ನು ಅರ್ಪಿಸಿಕೊಳ್ಳುವ ಸ್ನೇಹ ಪರ ಬಂಧವಾಗಿದೆ. ಅದನ್ನು ಹಿಡಿದು ಬಯಕೆಗಳನ್ನು ಪ್ರೀತಿಯಲ್ಲಿ ತೋಡಿಕೊಳ್ಳುವ ಗುಣ ಅದರಲ್ಲಿ ಅಡಗಿದೆ. ಇಲ್ಲೆಲ್ಲ ಕವಿಯತ್ರಿಯರು ತಮ್ಮ ಮನದ ಒಲುಮೆಯನ್ನು ವ್ಯಕ್ತಪಡಿಸಿದ್ದಾರೆ.

"ನಿನ್ನ ಪ್ರೀತಿ ಸಾಗರ
ತುಂಬ ಆಳ ಅಗಲ
ಒಳಗೊಳಗೇ ಸುಳಿದಾಡುವೆ.
ಮಕರ ಸರ್ಪ ತಿಮಿಂಗಿಲ
ನಿನ್ನ ಪ್ರೀತಿ ವಸುಂಧರಾ "

(ತನುವೆಂಬ ಹುತ್ತದಲ್ಲಿ – ನಿನ್ನ ಪ್ರೀತಿ,ಪು-೪೯)

ಹೀಗೆ, ಈ ಕವನದಲ್ಲಿ ಪ್ರೀತಿಯ ಅಗಲ ವಿಸ್ತಾರ, ಅದರಲ್ಲಿಯ ಜೀವನ ಕವಿಯತ್ರಿಯರು ಸುಂದರ ಭಾಷೆಯ ಕವನದ ಮೂಲಕ ಚಿತ್ರಿಸಿದ್ದಾರೆ. ಮಧುರ, ಸವಿ ಸುಂದರ, ವಸುಂಧರಾ ಮುಂತಾದ ನುಡಿಗಟ್ಟಿನಲ್ಲಿ ಪ್ರೀತಿಯನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ.

ಒಟ್ಟಿನಲ್ಲಿ, ಮಾನವನ ಜೀವನಕ್ಕೆ ಪ್ರೀತಿಯೊಂದು ಅಮೃತದ ಸಿಂಚನ ಅದು ಪಡೆದುಕೊಳ್ಳುವ ರೀತಿ-ನೀತಿ ವಿಭಿನ್ನವಾಗಿ ಕಾಣಿಸಿಕೊಳ್ಳುತ್ತವೆ. ಕವಿಗಳ ಹಾಗೇ ಕವಿಯತ್ರಿಯರು ಸಹ ಈ ಅಂಶವನ್ನು ತಮ್ಮ ಕವನದಲ್ಲಿ ತಂದಿದ್ದಾರೆ. ಹೀಗೆ ಗೋಕಾಕ ಪರಿಸರದಲ್ಲಿ ರಚಿತವಾದ ಮಹಿಳಾ ಕಾವ್ಯದಲ್ಲಿ ಹತ್ತು ಹಲವು ವಸ್ತು ವೈವಿದ್ಯತೆಯನ್ನು ತುಂಬಿಕೊಂಡಿರುವುದು ಕಾಣುತ್ತೇವೆ. ಭಾಷಿಕ ದೃಷ್ಟಿಯಿಂದ ಇಲ್ಲಿಯ ಕವನಗಳು ಅಷ್ಟಾಗಿ ಮಹತ್ವನ್ನು ಪಡೆಯದೇ ಇರಬಹುದು. ಆದರೆ ಅದರಲ್ಲಿ ವ್ಯಕ್ತವಾದ ಭಾವನೆ ಮಾತ್ರ ಅಚ್ಚಳಿಯದೆ ಉಳಿಯುತ್ತದೆ. ಕೆಲವು ಕವನಗಳಲ್ಲಿ ಪ್ರಾದೇಶಿಕ ಭಾಷೆಯ

ಕಸವುವಿದೆ. ಜನಪದರ ನುಡಿಯು – ಸೊಗಡು ಇದರಲ್ಲಿ ಅಡಗಿದೆ. ಶೈಲಿಯ ದೃಷ್ಟಿಯಿಂದ ನೋಡಿದಾಗ ಒಬ್ಬರಕ್ಕಿಂತಲೂ ಮೊತ್ತೊಬ್ಬರು ವಿಭಿನ್ನವಾದ ಮಾರ್ಗ ಅನುಸರಿಸಿದ್ದಾರೆ.

ಛಂದಸ್ಸಿನ ಅಂಶ ತೀರಾ ವಿರಳ. ಸ್ವಚ್ಛಂದತೆಗೆ ಹೆಚ್ಚಿನ ಒತ್ತನ್ನು ನೀಡಿದ್ದಾರೆ. ಅಲ್ಲಲ್ಲಿ ಪ್ರಾಸಪದಗಳು ಒಂದು ಕವನದ ನಾದವನ್ನು ಹೆಚ್ಚಿಸುತ್ತದೆ. ಅಲಂಕಾರಯುಕ್ತ ನುಡಿಗಳು ಹೇರಳವಾಗಿವೆ. ಗಾದೆ ಮಾತುಗಳು ಬೆರೆತುಕೊಂಡಿವೆ. ಪ್ರತಿಭಟನೆಯ ಕಾಡಿನಲ್ಲಿ ಬೈಗುಳಗಳು ಬಳಕೆಯಾಗಿವೆ. ಹೀಗೆ ಅನೇಕಾನೇಕ ಮಹತ್ವದ ವಸ್ತು, ವೈವಿದ್ಯತೆಯಿಂದ ಇಲ್ಲಿಯ ಕಾವ್ಯ ಮಾರ್ಗ ಕವಿಗಳಿಗಿಂತ ವಿಭಿನ್ನತೆಯಲ್ಲಿ ಅರಳಿದೆ. ಸ್ತ್ರೀ–ಸಂವೇದನೆ ಅಂಶ ಅಲ್ಲಲ್ಲಿ ಎದ್ದು ಕಾಣುತ್ತದೆ. ವಿಡಂಬಣೆ, ಭವಣೆ ಎಲ್ಲವು ಒಂದರೊಳೊಂದು ಅಡಗಿ ಕುಳಿತಿವೆ. ಈ ಎಲ್ಲ ಭವಣೆ , ಎಲ್ಲವು ಒಂದುರೊಳೊಂದು ಅಡಗಿ ಕುಳಿತಿವೆ. ಈ ಎಲ್ಲ ಕಾವ್ಯಗಳ ಆಶೆಯ ಬೇರೆ ಬೇರೆಯಾಗಿ ಕಣ್ಮುಂದೆ ಬಂದು ನಿಲ್ಲುತ್ತವೆ.

ಅಡಿಟಿಪ್ಪಣೆಗಳು :

೧) ದಶಕದ ಕನ್ನಡ ಸಾಹಿತ್ಯ, (ಸಂ) ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಕೆ. ರವೀಂದ್ರನಾಥ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨, ಪು–೮

೨) ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು, ಸುಮತೀಂದ್ರ ನಾಡಿಗ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೭೮. ಪು–೫೯.

೩) ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಡಾ.ಗುಂಡಣ್ಣ ಕಲಬುರ್ಗಿ, ಸೌಜನ್ಯ ಪ್ರಕಾಶನ ಮೂಡಲಗಿ, ೨೦೦೦, ಪು–೬೦.

ಅಧ್ಯಾಯ – ೫

ಸಮಾರೋಪ

೫

ಸಮಾರೋಪ

ಆಧುನಿಕ ಕನ್ನಡ ಸಾಹಿತ್ಯ ಕಳೆದ ಶತಮಾನದಿಂದ ಹೊಸ ರೂಪವನ್ನು ಪಡೆಯುತ್ತ ಮುನ್ನಡಿಯುತ್ತಿದೆ. ಈ ಹೊಸ ರೂಪದಲ್ಲಿ ಕಾವ್ಯರೂಪವು ಒಂದಾಗಿದೆ. ಕಾವ್ಯ ವ್ಯಕ್ತಿಯ ಭಾವನೆಯನ್ನು ಅಭಿವ್ಯಕ್ತಿಸುವ ಮಾಧ್ಯಮವೇ ಆಗಿದೆ. ಈ ಕಾವ್ಯವು ಒಂದು ಗುಟ್ಟಾದ ಒಳದನಿ ಹಾಗೂ ಸಹೃದಯದವರನ್ನು ತಲುಪುವಂತಿರುವ ಆಪ್ತತೆ ಇಂತಹ ಕವನಗಳಲ್ಲಿ ಅಡಗಿರುತ್ತವೆ. ಕಾವ್ಯವು ವಿವಿಧ ವಸ್ತುವನ್ನೊಳಗೊಂಡಿರುತ್ತವೆ. ಸಾರ್ವಜನಿಕ ಘಟನೆಗಳ ಪ್ರಶಂಸೆ, ಸಹಜ ಸಂವೇದನೆಗಳನ್ನುಳ್ಳ ವ್ಯಕ್ತಿಯಲ್ಲಿರುವ ಸಂತೋಷ, ಭಯ, ದುಃಖ, ಬೇಸರ ಅಥವಾ ಧನ್ಯತೆಯ ಭಾವನೆಗಳನ್ನು ಉದ್ದೀಪಿಸಬಲ್ಲ ಪ್ರಕೃತಿಯ ವರ್ತನೆ, ಸಾಮಾನ್ಯ ಮನುಷ್ಯಾನುಭವಗಳ, ಸನ್ನಿವೇಶಗಳ ಅಭಿವ್ಯಕ್ತಿ – ಹೀಗೆ ಕಾವ್ಯವು ನಿಜವಾಗಿಯೂ ಅನುಭವದ ನಂಬಿಕೆಯನ್ನು ಮೂಡಿಸಿ ಅಂತರಂಗವನ್ನು ಕೆಣಕಿ ಕುಣಿಸಬಲ್ಲ ಸಾಹಿತ್ಯ ಪ್ರಕಾರವಾಗಿದೆ.

"ಗೋಕಾಕ ತಾಲ್ಲೂಕಿನ ಕವಿಯತ್ರಿಯರು" ಕುರಿತು ಇದುವರೆಗೆ ಕೈಗೊಂಡ ಈ ಅಧ್ಯಯನ ಫಲಿತಗಳು ಅನೇಕ ಹೊಸ ಹೊಸ ಸಂಗತಿಗಳಿಗೆ ಪುರಾವೆಗಳಾಗಿವೆ. ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಪಾತ್ರವನ್ನು ಗುರುತಿಸುತ್ತಾ, ಗೋಕಾಕ ಪ್ರಾದೇಶಿಕತೆಗೆ ಒತ್ತನ್ನು ನೀಡಲಾಗಿದೆ. ಈ ಅಧ್ಯಯನದ ಮೊದಲ ಅಧ್ಯಾಯದಲ್ಲಿ ಸಂಶೋಧನೆಯ ಪ್ರವೇಶವನ್ನು ಸೂಚಿಸುತ್ತಾ ಅನೇಕ ವಿಭಾಗ ಕ್ರಮದಲ್ಲಿ ನೋಡ ಬಯಸಿದೆ. ಈ ಪ್ರಾದೇಶಿಕತೆಯ ಕವಿಗಳು ಮತ್ತು ಕವಿಯತ್ರಿಯವರ ಅಧ್ಯಯನದ ಉದ್ದೇಶ, ಸ್ವರೂಪ,

ವ್ಯಾಪ್ತಿ, ವೈಧಾನಿಕತೆಯಲ್ಲಿ ಕಲೆ ಹಾಕಲಾಗಿದೆ. ಅಧ್ಯಯನವನ್ನು ಕೈಗೊಳ್ಳಬೇಕಾದ ಅನಿವಾರ್ಯತೆಯನ್ನು ಸ್ಪಷ್ಟವಾಗಿ ತೋರಿಸಲಾಗಿದೆ.

ಎರಡನೆಯ ಅಧ್ಯಯನದಲ್ಲಿ ಗೋಕಾಕ ತಾಲ್ಲೂಕಿನ ಕಾವ್ಯ ಪರಂಪರೆಯನ್ನು ಆ ಪ್ರಾದೇಶಿಕತೆಯಲ್ಲಿ ಹುಟ್ಟಿ ಬಂದ ಕವಿಗಳ ಕಾವ್ಯವನ್ನು, ಅವರ ತಾಂತ್ರಿಕ ಮೌಲ್ಯಗಳನ್ನು, ಜನಪದ, ಜೈನಕವಿಗಳ ಬಗ್ಗೆ ವಿಶೇಷ ಅಧ್ಯಯನ ನಡೆಸುವುದರಿಂದ ಅಧ್ಯಯನದಲ್ಲಿ ಹೊಸ ಅಂಶಗಳನ್ನು ಕಲೆಹಾಕಲಾಗಿದೆ. ಮೂರನೆಯ ಅಧ್ಯಯನವು ಮಹಿಳಾ ಕಾವ್ಯವಾಗಿದ್ದು ಮಹಿಳೆಯರ ಕಾವ್ಯ ರಚನೆಯ ವಿವಿಧ ಆಯಾಮವನ್ನು ಗುರುತಿಸಲಾಗಿದೆ.

ಮಹಿಳಾ ಕಾವ್ಯದ ವಸ್ತು ವೈವಿಧ್ಯತೆಯಲ್ಲಿ ಗೋಕಾಕ ಪರಿಸರದಲ್ಲಿಯ ಮಹಿಳಾ ಕಾವ್ಯದ ವಿಭಿನ್ನ ನೆಲೆಗಳನ್ನು ಗುರುತಿಸುತ್ತಾ, ಆ ಮೂಲಕ ಉಳಿದ ಪ್ರದೇಶದ ಮಹಿಳಾ ಕಾವ್ಯಕ್ಕೂ ಇಲ್ಲಿಯ ಪರಿಸರದ ಮಹಿಳಾ ಕಾವ್ಯಕ್ಕು ಹೇಗೆ ಭಿನ್ನತೆಯಿದೆ ಎಂಬುದನ್ನು ಎತ್ತಿ ಹೇಳಲಾಗಿದೆ. ಹೀಗೆ ಅಧ್ಯಯನವನ್ನು ಕೈಗೊಳ್ಳಲು ಹಲವು ಹೊಸ ಹೊಸ ಅಂಶಗಳು ನನ್ನ ಗಮನವನ್ನು ಸೆಳೆದುಕೊಂಡಿವೆ.

ಹೊಸಗನ್ನಡದ ನಾಲ್ಕು ಘಟ್ಟಗಳಲ್ಲಿ ಇಲ್ಲಿಯ ಮಹಿಳಾ ಕಾವ್ಯ ಪ್ರತಿಧ್ವನಿಸುತ್ತದೆ. ಅವರ ಮೂಲಭೂತವಾದ ಕಾವ್ಯ ಪರಿಧಿಯ ಸ್ಪಂದನಶೀಲಗಳನ್ನು, ಸಂಕೀರ್ಣತೆಗಳನ್ನು ಆಯಾ ಕಾಲ ಘಟ್ಟದ ಸನ್ನಿವೇಶದಲ್ಲಿಯೂ ಅವಲೋಕನ ಮಾಡುತ್ತ, ಅದರ ವೈಶಿಷ್ಟತೆಗಳನ್ನು ಗುರುತಿಸಲಾಗಿದೆ. ಒಟ್ಟಿನಲ್ಲಿ ಈ ಎಲ್ಲ ಅಂಶಗಳನ್ನು ಈ ಪ್ರಬಂಧದಲ್ಲಿ ಚರ್ಚಿಸಲಾಗಿದೆ. ಈ ಅಧ್ಯಯನ ಫಲಿತಗಳನ್ನು ಕುರಿತು ಅದರ ವೈಶಿಷ್ಟತೆಯನ್ನು ಕುರಿತು ಈ ರೀತಿಯಲ್ಲಿ ಕಲೆಹಾಕಲಾಗಿದೆ.

೧. ಸಾಮಾಜಿಕ ಅನ್ಯಾಯ, ಆತ್ಮಶೋಧನೆ, ಮಾನವೀಯ ಮೌಲ್ಯಗಳ ಹುಡುಕಾಟ ಈ ಮಹಿಳಾ ಕಾವ್ಯದಲ್ಲಿ ಅಡಗಿವೆ.

೨. ಹೆಣ್ಣಿನ ಬದುಕಿನ ಒಳತುಡಿತ, ದುಗುಡ-ದುಮ್ಮಾನ, ಸೋಲು, ಅಸಹಾಯಕತೆ, ಶೋಷಣೆ ಮತ್ತು ಆ ಮೂಲಕ ಹುಟ್ಟುವ ರೋಷ, ಆಕ್ರೋಶ ಹಾಗೂ ವ್ಯವಸ್ಥೆಯ ಬದಲಾವಣೆಗಾಗಿ ಹಪಹಪಿಸುವ ಮನಸ್ಸಿನ ತುಡಿತದಲ್ಲಿ ಇಲ್ಲಿ ಕವನಗಳಲ್ಲಿ ಎದ್ದು ಕಾಣುತ್ತೇವೆ.

೩. ಹೃದಯವಂತಿಕೆಯ ಸಮಾಜದ ಸ್ವಾಸ್ಥ್ಯಕ್ಕಾಗಿ ಸದಾ ತುಡಿವ, ಸ್ತ್ರೀ ಸಂವೇದಶೀಲ ಮನಸ್ಸನ್ನು ಹೊಂದಿ ಬದುಕಿನ ಪ್ರತಿಕ್ಷಣಕ್ಕೂ ಸ್ಪಂದಿಸುತ್ತ ಭಾವನೆಗಳಿಗೆ ಬಣ್ಣದ ಶಬ್ದಗಳ ಲೇಪನವನ್ನು ಮೂಡಿಸುತ್ತದೆ.

೪. ಕವಿತೆಗಳಲ್ಲಿ ಗಂಭೀರ ಚಿಂತನೆ ಹಾಗೂ ಸಂಸ್ಕೃತಿ ಕಾಳಜಿಗಳು ಒಡಮೂಡಿ ಬಂದಿವೆ.

೫. ಕೆಲವು ಕವನಗಳಲ್ಲಿ ಬದುಕಿನ ವೈಪರೀತ್ಯಗಳನ್ನು ಕಂಡ ಸಂವೇದನಾಶೀಲ ಮನಸ್ಸು ರೋಷಾವೇಶಗಳಿಂದ ಕುದಿದು, ಅಪೂರ್ಣ ವ್ಯವಸ್ಥೆಯ ವಿರುದ್ಧ ಗುಡುಗಿ ನಿಂತು ಅಮೂಲಾಗ್ರದ ಬದಲಾವಣೆ ಹಂಬಲಿಸಲು ಧ್ವನಿ ಎತ್ತುತ್ತವೆ.

೬. ಸ್ತ್ರೀ ಸಂವೇದನೆಯ ಒಳತುಡಿತ ಇಲ್ಲಿಯ ಕಾವ್ಯದ ಮುಖ್ಯವಾದ ನೆಲೆಯಾಗಿದೆ.

೭. ಸಾಂಸ್ಕೃತಿಕ ಬದಲಾವಣೆಗಾಗಿ ಇಲ್ಲಿ ಕವನಗಳು ಪರಿಣಾಮಕಾರಕವಾಗಿ ಕಾಣಿಸಿಕೊಳ್ಳುತ್ತವೆ. ಬದುಕಿನ ಬಗೆಗೆ ಅಪಾರ ಪ್ರೀತಿ ಮತ್ತು ನಿಷ್ಠೆಯನ್ನು ಹೊಂದಿವೆ.

೮. ಕೆಲವು ಕಾವ್ಯಗಳಲ್ಲಿ ಗ್ರಂಥಸ್ಥ ಭಾಷೆ ಬಹುವಾಗಿ ಬಳಕೆಯಿಂದ ಕುಡಿದ್ದು, ಇನ್ನು ಕೆಲವು ಕಾವ್ಯಗಳಲ್ಲಿ ಪ್ರಾದೇಶಿಕ ಭಾಷೆಯ ಲಯಗಾರಿಕೆಯ ಅರ್ಥವಂತಿಕೆಯಿಂದ ಕೂಡಿವೆ.

೯. ವ್ಯಂಗೆ, ಪ್ರತಿಭಟನೆ ಒಡಲಾಳದ ಮಾತುಗಳು ಸ್ಪಷ್ಟವಾಗಿ ತನ್ನ ಸ್ವರೂಪವನ್ನು ಬಿಚ್ಚಿಡುತ್ತವೆ.

೧೦. ಅಲ್ಲಲ್ಲಿ ಬಳಕೆಯಾದ ಚುಟುಕುಗಳು ಚೇಳಿನಕೊಂಡಿಯಂತೆ ಎಚ್ಚರಿಕೆಯನ್ನು ನೀಡುತ್ತವೆ.

೧೧. ಜಾಗತಿಕ ಪರಿಸರದ ಜೀವನದ ಬಗೆಗೆ ವಿವರಣೆಯನ್ನು ಕೊಡುತ್ತ, ವ್ಯಕ್ತಿ – ಸಮಾಜ – ದೇಶದ ಜನತೆಯ ಬದುಕಿಗೆ ಕನ್ನಡಿಯನ್ನು ಹಿಡಿಯುತ್ತವೆ.

೧೨. ಪರಿಸರದ ಸ್ಪಂದನೆ, ಕಾಲಬದ್ಧತೆ, ಪ್ರದೇಶಬದ್ಧತೆ, ಸಮಾಜಬದ್ಧತೆಯ ವಿಶ್ಲೇಷಣೆಯನ್ನು ಮಾಡುತ್ತವೆ.

೧೩. ಮನುಕುಲವನ್ನು ತಿದ್ದುವ ಮೌಲ್ಯವನ್ನು ತುಂಬಿಕೊಂಡು ಸಹೃದಯನನ್ನು ಸ್ಪಂದಿಸುತ್ತವೆ. ಅರ್ಥಾಂತರ ವಿನ್ಯಾಸದಿಂದ ನಿಸರ್ಗದ ಮೇಲಿನ ಪ್ರೇಮವನ್ನು ಬಣ್ಣಿಸುತ್ತವೆ.

೧೪. ಮನುಷ್ಯ ಜೀವನಕ್ಕೆ ಜಾಗೃತಿಯನ್ನು ನೀಡುತ್ತವೆ. ಸ್ವವಿಮರ್ಶೆ, ತನ್ನ ಪರಿಸರದ ನೆಲದೊಂದಿಗೆ ಗಾಢಸಂಬಂಧವನ್ನು ಹೊಂದಿವೆ.

೧೫. ವಾಸ್ತವತೆಗೆ ಹೆಚ್ಚಿನ ಒತ್ತನ್ನು ನೀಡುತ್ತಾ, ವಾಸ್ತವತೆಯ ಆದರ್ಶಗಳ ಅಂತರವನ್ನು ಸೂಚಿಸಿ ಪ್ರಶ್ನೆಗಳ ಸುರಿಮಳೆಯನ್ನು ತಮ್ಮದೇ ಆದ ಧಾಟಿಯಲ್ಲಿ ಪ್ರದರ್ಶಿಸುತ್ತವೆ.

೧೬. ಕೋಮು ಸೌಹಾರ್ದತೆ – ಐಕ್ಯತೆಯ ಭೃತ್ಯಭಾವವನ್ನು ಒಳಗೊಂಡಿವೆ.

೧೭. ಹೆಣ್ಣಿನ ಮನಸ್ಸಿನ ಒಳ ಹೊರಣವು ಅಂತರಂಗದ ಅಭಿವ್ಯಕ್ತಿಯಲ್ಲಿ ಕಂಡುಬರುತ್ತವೆ.

೧೮. ಸಾಮಾಜಿಕ ಬದುಕಿನ ಅಂಧಕಾರವನ್ನು ಪ್ರತಿಭಟಿಸುತ್ತವೆ.

೧೯. ಚಿಂತನಾಂಶ – ಕಲ್ಪನಾಂಶ – ಗೇಯತೆ ಸಂಕ್ಷಿಪ್ತತೆಯ ಬಂಧದಲ್ಲಿ ಕಾಣಿಸುತ್ತವೆ.

೨೦. ಗೋಕಾಕ ಪ್ರಾದೇಶಿಕ ಭಾಷೆಯ ಸೊಗಡು ಬೇರೆ ಪ್ರದೇಶದ ವ್ಯಕ್ತಿಗಳಿಗೆ ಪರಿಚಯವಾಗುತ್ತದೆ.

೨೧. ದಾಂಪತ್ಯ ಧರ್ಮದ ಉತ್ಕಟ ಅಭಿವ್ಯಕ್ತಿ, ಭಾವಗೀತೆಯ ಗೇಯತೆ, ಭಾವದೀಪ್ತತೆ, ಚಿರಂತನೆಯ ಅಂಶಗಳು ಈ ಕಾವ್ಯ ಪರಿಸರದ ಶಿಲ್ಪದಲ್ಲಿ ಅವಿನಾಭಾವಿಯಾಗಿ ಸೇರಿಕೊಂಡಿವೆ.

ಈ ಮೇಲಿನ ಎಲ್ಲ ಅಂಶಗಳು ಅಧ್ಯಯನದಲ್ಲಿ ಹೊಸ ರೂಪವನ್ನು ಪಡೆದುಕೊಂಡು ಒಡಮೂಡಿ ಬಂದಿವೆ. ಇಲ್ಲಿಯ ಮಹಿಳೆಯರಿಗೆ ಹೆಚ್ಚಾಗಿ ಕಾವ್ಯವೇ ಪ್ರಿಯವಾದ ಮಾಧ್ಯಮವಾಗಿದೆ. ಎಂಬುದನ್ನು ಅಲ್ಲಗಳೆಯುವಂತಿಲ್ಲ. ಮಹಿಳಾ ಸಾಹಿತ್ಯದ ಎಲ್ಲ ಧೋರಣೆಗಳು ಈ ಕಾವ್ಯದ ಮೂಲಕ ಸಮರ್ಥವಾಗಿ ಅಭಿವ್ಯಕ್ತಿಸಲಾಗಿದೆ. ಈ ಹಿನ್ನಲೆಯಲ್ಲಿ ಸಮಕಾಲೀನ ಮಹಿಳಾ ಕಾವ್ಯದಲ್ಲಿ ಸಾಹಿತ್ಯಕ ಹವ್ಯಾಸಕ್ಕಿಂತ ಹೆಚ್ಚಾಗಿ ತಮ್ಮ ಮನಃಸ್ಥಿತಿಯನ್ನು ಪ್ರಕಟಪಡಿಸುವ ಅನಿವಾರ್ಯ ಮಾಧ್ಯಮವು ಆಗಿದೆ. ಕವಿತೆಗಳ ವಸ್ತು, ಆ ವಸ್ತುವಿನಲ್ಲಿ ತೊಡಗಿರುವ ಅವರು ತೊಡಗಿರುವ ಅಂಶವನ್ನು ನೋಡಿದರೆ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಇಲ್ಲಿಯ ಬಹುಪಾಲ ಕವಿತೆಗಳಲ್ಲಿ ನೋವು, ವಿಷಾದ ಇವುಗಳು ಧ್ವನಿಗೂಡಿಸಿ ಬರುತ್ತವೆ. ಯಾರೊಂದಿಗೂ ಹೇಳಿಕೊಳ್ಳಲಾರದ ತಲ್ಲಣ, ಆತಂಕಗಳು ಇದರಲ್ಲಿ ರೂಪ ಪಡೆದುಕೊಂಡಿವೆ.

ಮಹಿಳೆಯರು ಕವಿತೆಗಾಗಿ ಬಳಸಿಕೊಂಡ ತಂತ್ರ ಹಾಗೂ ನಿರೂಪಿಸಿದ ಶೈಲಿಯ ಧಾಟಿಗಳು ಸಹ ಅಭಿವ್ಯಕ್ತಿಯ ಹಿನ್ನಲೆಯಲ್ಲಿಯೇ ರೂಪವನ್ನು ಪಡೆದುಕೊಂಡಿವೆ.

[illegible]

ಮಹಿಳೆಯ ಮೇಲಿನ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯ ನಿರ್ಬಂಧಗಳೇ ಈ ಮಹಿಳಾ ಕಾವ್ಯದ ಸ್ವರೂಪವನ್ನು ನಿರ್ಧರಿಸಿವೆ. ಇನ್ನು ಕೆಲವು ಮಹತ್ವದ ವಸ್ತು ವೈವಿಧ್ಯತೆಗಳಿಗೆ ಇಲ್ಲಿ ಕಾವ್ಯ ಪರಿಸರದಲ್ಲಿ ಮಹಿಳೆಯರು ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ. ಗೋಕಾಕ ಪರಿಸರದ ಮಹಿಳೆಯ ಸಾಹಿತ್ಯದಲ್ಲಿ ಇಂತಹ ಕಾವ್ಯ ಪರಂಪರೆಯು ಹುಟ್ಟಿ ಆ ಮಹಿಳೆಯರು ಸಹ ಸಾಹಿತ್ಯದಲ್ಲಿ ತೊಡಗಲು ಅನುಕೂಲವಾಗಿವೆ. ಕೆಲವು ಕವನಗಳು ಸೋಲನ್ನು ಅನುಭವಿಸಿದರು ಅದು ತಾತ್ವಿಕ ವ್ಯತ್ಯಾಸವಲ್ಲ. ಕೆಲವು ಕವನಗಳು ನಿರಸತೆಯಿಂದ ಕುಡಿದರು ಸಹ ಅದು ಗ್ರಹಿಕೆಗೆ ಯಾವುದೇ ತಡೆಯಾಗಲಾರದು. ಕೆಲವು ಕವನಗಳಲ್ಲಿ ದೋಷಗಳು ಕುಡಿದ್ದರು ಸಹ ಅದು ಸಾಮಾನ್ಯ ರೀತಿಯಲ್ಲಿ ಕಂಡು ಬಂದಿವೆ.

ಒಟ್ಟಾರೆಯಾಗಿ, ಇಲ್ಲಿಯ ಪ್ರಾದೇಶಿಕ ನೆಲೆಯಲ್ಲಿ ಮಹಿಳೆಯರಿಂದ ಎಷ್ಟೊಂದು ವೈವಿಧ್ಯತೆಯ ಕಾವ್ಯ ಸೃಷ್ಟಿಯಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಹೀಗೆ ಅಧ್ಯಯನದಲ್ಲಿ ಹಲವು ಮಜಲುಗಳಿಂದ ಅವರ ಕಾವ್ಯವನ್ನು ನೋಡಲಾಗಿದೆ. ಅಧ್ಯಯನದಲ್ಲಿ ಇಲ್ಲಿಯ ಎಲ್ಲಾ ಕಾವ್ಯವನ್ನು ಸಂಪೂರ್ಣವಾಗಿ ಸೆರೆಹಿಡಿಯಲು ಆಗಿಲ್ಲ. ಏಕೆಂದರೆ ಅದು ಈ ಅಧ್ಯಯನ ವ್ಯಾಪ್ತಿಯನ್ನು ಮೀರಿ ನಿಲ್ಲುತ್ತದೆ. ಅದಕ್ಕಾಗಿ ಇನ್ನು ಈ ಮಹಿಳಾ ಕಾವ್ಯ ಕುರಿತು ಅಧ್ಯಯನ ನಡೆಯಬೇಕಾಗಿದೆ. ಅವುಗಳು ಒಬ್ಬೊಬ್ಬ ಮಹಿಳಾಕಾವ್ಯ ವಿಶೇಷತೆ ಕುರಿತು ಒಂದು ಪ್ರಬಂಧವಾಗುವಷ್ಟು ವಿಷಯವಿದೆ. ಅದಲ್ಲದೇ ಎಷ್ಟೋ ಜನ ಕವಿಯತ್ರಿಯರು ಎಲೆಮರೆ ಕಾಯಿಯಂತೆ ಪರದೆಯ ಹಿಂದೆ ಇದ್ದಾರೆ ಅವರನ್ನು ಗುರುತಿಸುವ ಕಾರ್ಯ ನಡೆಯಬೇಕು. ಹೀಗೆ ನನ್ನ ಅಧ್ಯಯನದಲ್ಲಿ ಸಾಕಷ್ಟು ವಿಷಯಗಳ ಕುರಿತು ಚರ್ಚಿಸಲಾಗಿದೆ. ಅವುಗಳನ್ನು ಈ ಅಧ್ಯಯನ ಪ್ರಬಂಧ ಮೂಲಕ ಹೊರಹಾಕಲಾಗಿದೆ ಎಂಬ ನನ್ನ ಮನದಾಳದ ಮಾತಿನಿಂದ ನನ್ನ ಅಧ್ಯಯನವನ್ನು ಇಲ್ಲಿಗೆ ಮುಗಿಸುತ್ತೇನೆ.

ಅನುಬಂಧಗಳು

೧. ಗೋಕಾಕ ತಾಲ್ಲೂಕಿನ ನಕ್ಷೆ

೨. ಗೋಕಾಕ ತಾಲ್ಲೂಕಿನ ಕವಿ ಮತ್ತು ಕವಿಯತ್ರಿಯರ ಸೂಚಿ

೩. ಆಧಾರ ಗ್ರಂಥಗಳು

ಅನುಬಂಧ – ೧

ಗೋಕಾಕ ತಾಲ್ಲೂಕಿನ ನಕ್ಷೆ



ಕೃಪೆ : Belgaum.nic.in

ಅನುಬಂಧ – ೨.

ಗೋಕಾಕ ತಾಲ್ಲೂಕಿನ ಕವಿ ಮತ್ತು ಕವಿಯತ್ರಿಯರ ಸೂಚಿ

ಕವಿಗಳ ಸೂಚಿ

೧. ಆನಂದಕಂದ – ಬೆಟಗೇರಿ
೨. ಈಶ್ವರ ಸಣಕಲ್ಲ – ಯಾದವಾಡ
೩. ಬಸವರಾಜ ಕಟ್ಟೀಮನಿ – ಮಲಾಮರಡಿ
೪. ಚಂದ್ರಶೇಖರ ಕಂಬಾರ – ಘೋಡಗೇರಿ
೫. ಬಾಳೇಶ ಲಕ್ಷೆಟ್ಟಿ – ಗೋಕಾಕ.
೬. ಶ್ರೀರಾಮ ಇಟ್ಟಣ್ಣವರ – ಯಾದವಾಡ
೭. ಡಾ. ನಿಂಗಣ್ಣ ಸಣ್ಣಕ್ಕಿ – ಹೊನಕುಪ್ಪಿ
೮. ಮಹಾಂತೇಶ ಕಣಗಲಿ – ಗೋಕಾಕ
೯. ಹ.ಶಿ. ಭೈರನಟ್ಟಿ – ಕುಲಗೋಡ
೧೦. ಡಾ. ಎಸ್. ಬಿ. ತೋಟದ – ಗೋಕಾಕ
೧೧. ಮಹಾಲಿಂಗ ಮಂಗಿ – ಗೋಕಾಕ
೧೨. ಹಣಮಂತರಾವ್ ಬಿ. ನಾಗಪ್ಪಗೋಳ – ಮೆಳವಂಕಿ
೧೩. ಪ್ರಕಾಶ ಬೆಳಕೂಡ – ಮೂಡಲಗಿ
೧೪. ಎಸ್. ದೇವೇಂದ್ರ 'ಸಿಂಹನ್' – ಗೋಕಾಕ
೧೫. ಶಿವಲಿಂಗ ಭಾವಿಕಟ್ಟಿ – ಅಂಕಲಗಿ
೧೬. ಶಂಕರ ತಲ್ಲೂರ – ಗೋಕಾಕ
೧೭. ಮಹಾದೇವ ಗುಡೇರ – ಗೋಕಾಕ
೧೮. ಗುರುಪಾದ ಕುಲಗೋಡ – ಗೋಕಾಕ
೧೯. ಪ್ರಕಾಶ ಕೋಟಿನತೋಟ – ಕೌಜಲಗಿ
೨೦. ರಾಜು ಕಂಬಾರ – ಕೌಜಲಗಿ
೨೧. ಮಹಾದೇವ ಜಿಡ್ಡಿಮನಿ – ಸುಣಧೋಳಿ
೨೨. ಜಯಾನಂದ ಮಾದರ – ಪ್ರಭಾ ಶುಗರ್, ಗೋಕಾಕ.
೨೩. ರಾ. ಬಾ. ಗುದಗನವರ – ತಳಕಟನಾಳ (ಗೋಕಾಕ)
೨೪. ಈಶ್ವರಚಂದ್ರ ಬೆಟಗೇರಿ – ಗೋಕಾಕ.
೨೫. ಪ್ರೊ. ಚಂದ್ರಶೇಖರ ಅಕ್ಕಿ – ಗೋಕಾಕ.
೨೬. ಡಾ. ಗುಂಡಣ್ಣ ಕಲಬುರ್ಗಿ – ಮೂಡಲಗಿ
೨೭. ಪ್ರೊ. ಸಂಗಮೇಶ ಗುಜಗೊಂಡ – ಮೂಡಲಗಿ

ಕವಯತ್ರಿಯರ ಸೂಚಿ

ಕವಯತ್ರಿಯರ ಹೆಸರು	ಕೃತಿಗಳು	ಸ್ಥಳ
೧) ಗುರುದೇವಿ ಹುಲೆಪ್ಪನವರಮಠ	– ತನುವೆಂಬ ಹುತ್ತದಲ್ಲಿ (ಪ್ರಕಟಿತ)	ಗೋಕಾಕ (ಬೆಳಗಾವಿ)
೨) ಶಕುಂತಲಾ ದಂಡಗಿ	– ನನ್ನ ಹಾಡು (ಪ್ರಕಟಿತ)	ಗೋಕಾಕ
೩) ಸುಗಂಧಾ ಡಂಬಳ	– ಭಾವೈಕ್ಯ (ಪ್ರಕಟಿತ)	ಗೋಕಾಕ
೪) ಪ್ರತಿಭಾ ಕುಲಕರ್ಣಿ	– ಕಾರ್ಗಿಲಕರೆ (ಅಪ್ರಕಟಿತ)	ಗೋಕಾಕ
	– ಎದ್ದೇಳು ಎಲೆಯುವತಿ (ಅಪ್ರಕಟಿತ)	
	– ಜೀವನ ದರ್ಶನ (ಅಪ್ರಕಟಿತ)	
	– ಚಿನ್ನದ ಹಬ್ಬದ ಸ್ವಾತಂತ್ರ್ಯದ ಸವಿನೆನಪು (ಅಪ್ರಕಟಿತ)	
	– ಮಾನವದಾನವ (ಅಪ್ರಕಟಿತ)	
	– ಮನ್ವಂತರದ ಆಹ್ವಾಂತರ (ಅಪ್ರಕಟಿತ)	
	– ಅರಿವು (ಅಪ್ರಕಟಿತ)	
	– ಶ್ರಾವಣ ಸಂಕಲ್ಪ (ಅಪ್ರಕಟಿತ)	
	– ಶಾಂತಿ (ಅಪ್ರಕಟಿತ)	
	– ಸ್ವಾಗತವು ಗೋಕಾವಿಗೆ (ಅಪ್ರಕಟಿತ)	
	– ಓ ಮಗು (ಅಪ್ರಕಟಿತ)	
೫) ಡಾ॥ ಶಶಿಕಲಾ ಕಾಮೋಜಿ	– ದಿಟಕುದಿಟ್ಟೆ ನಮ್ಮಕ್ಕ (ಪ್ರಕಟಿತ)	ಗೋಕಾಕ
	– ರೋಗಿಯ ಬಯಕೆ (ಅಪ್ರಕಟಿತ)	
	– ಅತೃಪ್ತ ಆತ್ಮವೇ (ಅಪ್ರಕಟಿತ)	
	– ಋಣಮುಕ್ತಗೊಳಲಿ ಜೀವ (ಅಪ್ರಕಟಿತ)	
	– ಪ್ಯಾರಿಸ್ (ಅಪ್ರಕಟಿತ)	
೬) ಅನುಸೂಯಾ ಸಂಕಪಾಳ	– ಒಂದೇ ಒಂದು ಸಾಕು –(ಪ್ರಕಟಿತ)	ಗೋಕಾಕ
೭) ಶಕುಂತಲಾ ಹಿರೇಮಠ	– ನಮ್ಮೂರು ಸೊಬಗು (ಅಪ್ರಕಟಿತ)	ಗೋಕಾಕ
	– ಹಸಿರೇ ಉಸಿರು (ಅಪ್ರಕಟಿತ)	
	– ಸಮರಸವೇ ಜೀವನ (ಅಪ್ರಕಟಿತ)	
೮) ಡಾ॥ ಪ್ರೇಮಾ ಮೆಣಸಿ	– ಕುರುಕ್ಷೇತ್ರ (ಅಪ್ರಕಟಿತ)	ಗೋಕಾಕ
	– ಚೈತ್ರಮಾಸ (ಅಪ್ರಕಟಿತ)	
೯) ಸರೋಜಾ ಇಟ್ಟಣ್ಣವರ	– ಸೋಮಣ್ಣನ ಹಾಡುಗಳು (ಸಂಪಾದಿತ ಕವನ ಸಂಕಲನ)	ಯಾದವಾಡ
	– ಬಿಸಿಲು – ನೆರಳು (ಸಂಪಾದಿತ ಕವನ ಸಂಕಲನ)	
೧೦) ಲೀಲಾದೇವಿ ಹಿರೇಮಠ	– ಬಿಡಿಕವನಗಳು (ಪ್ರಕಟಿತ)	ಗೋಕಾಕ
೧೧) ಅನುಸೂಯಾ ಸಿದ್ದರಾಮ	– ಅಚ್ಚುನೆಲೆ (ಪ್ರಕಟಿತ)	ಗೋಕಾಕ
೧೨) ಜಯಂತಿ ರೇವಡಿ	– ಬಿಡಿಕವನಗಳು (ಪ್ರಕಟಿತ)	ಗೋಕಾಕ

ಅನುಬಂಧ – ೩.

ಆಧಾರ ಗ್ರಂಥಗಳು

೧) ಕಾವ್ಯದಲ್ಲಿ ಪ್ರತಿಮಾ ಸಂವಿಧಾನ, ಜೀವಿ ಕುಲಕರ್ಣಿ, ಎ.ವಿ. ಗೋಕಾಕ. ಹರ್ಷವರ್ಧನ ಪ್ರಕಾಶನ, ಮುಂಬಯಿ, ೧೯೯೯.

೨) ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು, ಸುಮತೀಂದ್ರ ನಾಡಿಗ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೮.

೩) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಸಂ.ಡಾ.ಎಚ್.ಎಸ್.ಶ್ರೀಮತಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

೪) ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಡಾ. ಗುಂಡಣ್ಣ ಕಲಬುರ್ಗಿ, ಸೌಜನ್ಯ ಪ್ರಕಾಶನ, ಮೂಡಲಗಿ – ೨೦೦೦.

೫) ಪ್ರೊ. ಕೆ. ಎಸ್. ನಿಸಾರ ಅಹ್ಮದ ಅವರ ಕಾವ್ಯ ಸಾಹಿತ್ಯ, ಡಾ. ಎಸ್.ವ್ಹಿ. ಅಯ್ಯನಗೌಡರ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೯೯.

೬) ಮಾನವ್ಯ ಕವಿ ಚಿ.ವಿ. ಸನದಿ, ಸಂ. ಬಿ.ವ್ಹಿ. ಗುಂಜೆಟ್ಟಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೨೦೦೩.

೭) ನವೋದಯ ಕಾವ್ಯದ ಮೇಲೆ ಜಾನಪದದ ಪ್ರಭಾವ, ಡಾ.ಪ್ರಕಾಶ ಗ. ಖಾಡೆ, ಅನಿಕೇತ ಪ್ರಕಾಶನ, ಬಾಗಲಕೋಟ – ೨೦೦೭.

೮) ಹೊಸಗನ್ನಡ ಸಾಹಿತ್ಯ ಚರಿತ್ರೆ, ಎಲ್. ಎಸ್. ಶೇಷಗಿರಿರಾವ್, ಅಂಕಿತ ಪುಸ್ತಕ ಬೆಂಗಳೂರು, ೧೯೯೯.

೯) ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಕೀರ್ತಿನಾಥ ಕುರ್ತಕೋಟಿ, ಮನೋಹರ ಗ್ರಂಥ ಋಣ, ಧಾರವಾಡ – ೨೦೦೨.

೧೦) ತೇರು ಕಾದಂಬರಿ ವಿವೇಚನೆ, ಸುರೇಶ ಹನಗಂಡಿ, ಬೆಳುವಲ ಪ್ರಕಾಶನ, ಬಳೋಬಾಳ – ೨೦೦೮.

೧೧) **ಆನಂದಕಂದ,** ದು.ನಿಂ. ಬೆಳಗಲಿ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ೧೯೯೯.

೧೨) **ನವಮೇಘರೂಪಿ,** (ಸಂ.) ರಾಘವೇಂದ್ರ ಪಾಟೀಲ, ಸಂವಾದ ಪ್ರಕಾಶನ, ಮಲ್ಲಾಡಹಳ್ಳಿ, ೧೯೯೪.

೧೩) **ಬೆಳಗಾಂ ಜಿಲ್ಲೆಯ ಲಾವಣಿಗಳು,** (ಸಂ) ಟಿ.ಎಸ್. ರಾಜಪ್ಪ, ಮೈಸೂರು ವಿಶ್ವವಿದ್ಯಾನಿಲಯ, ೧೯೭೩.

೧೪) **ಹಾಲುಬಾನ,** (ಸಂ) ಚಂದ್ರಶೇಖರ ಅಕ್ಕಿ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೦೪

೧೫) **ಜೈನ ಪರಂಪರೆಗೆ ಬೆಳಗಾವಿ ಪ್ರಾದೇಶಿಕ ಕೊಡುಗೆ,** ಡಾ. ಬಿ. ಆರ್. ಹಂದೂರ, ಪ್ರಕಾಶಕರು ಶ್ರೀಮತಿ ಮಂಜುಳಾ ಅಡಿಕೆ, ಹುಕ್ಕೇರಿ, ೨೦೦೩-೦೪

೧೬) **ಗೋಕಾವಿ ಸಿರಿಸಂಪದ,** (ಸಂ.) ಪ್ರೊ. ಚಂದ್ರಶೇಖರ ಅಕ್ಕಿ, ಮಹಾಲಿಂಗ ಮಂಗಿ, ಕ್ರಿಯಾಶೀಲ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಗೋಕಾಕ, ೨೦೦೬.

೧೭) **ಬೆಳಗಾವಿ ಬೆಳಗು,** (ಸಂ.) ಎಸ್. ಆರ್. ಗುಂಜಾಳ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೩.

೧೮) ಆನಂದಕಂದ, ರಾಘವೇಂದ್ರ ಪಾಟೀಲ, ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೧.

೧೯) **ಈಶ್ವರ ಸಣಕಲ್ಲ,** ಬಿ.ಕೆ.ಹಿರೇಮಠ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೪.

೨೦) **ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ,** (ಸಂ) ಸಿ.ಬಿ. ಹೊನ್ನಯ್ಯ, ಜೈ ಭೀಮ ಪ್ರಕಾಶನ, ನಾಗದೇವನಹಳ್ಳಿ, ೨೦೦೮.

೨೧) **ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ,** (ಸಂ) ಡಾ. ಪಿ.ಜಿ. ಕೆಂಪಣ್ಣವರ, ಕನ್ನಡ ಜಾಗೃತಿ ಪುಸ್ತಕ ಮಾಲೆ, ಚಿಂಚಣಿ, ೨೦೦೪.

೨೨) **ಕನ್ನಡ ಸಾಹಿತ್ಯ ಕೋಶ,** (ಸಂ) ರಾಜಪ್ಪ ದಳವಾಯಿ, ಕದೀರು ಪ್ರಕಾಶನ, ಮೈಸೂರು, ೨೦೦೮.